ಡಿಸೆಂಬರ್ 2014

₹ 15/-

# ಯುಗದೃಷ್ಟಿ

ತ್ರೈಮಾಸಿಕ



- ಜಾಗತಿಕ ಶಾಂತಿ–ಈ ಕಾಲಘಟ್ಟದ ಆವಶ್ಯಕತೆ
- ಉತ್ತಮ ಸಮುದಾಯ
- ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು
- ಇಸ್ಲಾಮ್ ಧರ್ಮದಲ್ಲಿ ಮಹಿಳೆಯ ಸ್ಥಾನ

"ನಿಮ್ಮ ಸಂಪತ್ತುಗಳನ್ನು ನೀವು ಅನ್ಯಾಯವಾಗಿ ಪರಸ್ಪರ (ಅಪಹರಿಸಿ) ತಿನ್ನಬಾರದು. ತಿಳಿದುಕೊಂಡು ನೀವು ಜನರ ಸಂಪತ್ತಿನಿಂದ ಒಂದಂಶವನ್ನು ಅನ್ಯಾಯವಾಗಿ ತಿನ್ನಲಿಕ್ಕಾಗಿ ಅದನ್ನು ಅಧಿಕಾರಿಗಳ ಬಳಿಗೆ ಕೊಂಡೊಯ್ಯಬೇಡಿರಿ."

ಪವಿತ್ರ ಖುರ್‌ಆನ್ (2:189)

# ಯುಗರಶ್ಮಿ

ವಿಷಯ ಸೂಚಿಕೆ ಪುಟ


☆ ಪ್ರಾಮಾಣಿಕತೆ 1

☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2

☆ ಜಾಗತಿಕ ಶಾಂತಿ – ಈ ಕಾಲಘಟ್ಟದ ಆವಶ್ಯಕತೆ 3

☆ ಉತ್ತಮ ಸಮುದಾಯ 8

☆ ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು 12

☆ ಇಸ್ಲಾಮ್ ಧರ್ಮದಲ್ಲಿ ಮಹಿಳೆಯ ಸ್ಥಾನ 22

☆ ಓದಿದ್ದು 32

*ಐಸಿಸ್ ಉಗ್ರರ ಲೈಂಗಿಕ ದೌರ್ಜನ್ಯ

*ಮಹಿಳೆಯ ಕೈಲಿ ಸತ್ತರೆ 72 ಸ್ವರ್ಗ ಕನ್ಯೆಯರು ಸಿಗಲ್ಲ

*ದೇವರು ಪ್ರಪಂಚದ ಸೃಷ್ಟಿಕರ್ತನಲ್ಲ: ಪೋಪ್

*ಯುದ್ಧಾಪರಾಧ: ಜಮಾತ್ ಮುಖ್ಯಸ್ಥನಿಗೆ ಗಲ್ಲು

*ಮುಸ್ಲಿಂ ಹುಡುಗಿ ವಿವಾಹ ಸಿಂಧು: ಹೈಕೋರ್ಟ್ 33

*ತಾಜ್‌ಮಹಲ್ ಪ್ರಾಚೀನ ದೇವಾಲಯದ ಭಾಗ

*10 ಕ್ಕಿಂತ ಹೆಚ್ಚು ಮಕ್ಕಳಿರುವ ಹಿಂದೂ ದಂಪತಿಗೆ ಬಹುಮಾನ

*ಬಾಂಗ್ಲಾ : ಸಮರಾಪರಾಧಿಗೆ ಮರಣದಂಡನೆ

*ಐಸಿಸ್‌ನಿಂದ 150 ಸ್ತ್ರೀಯರ ಹತ್ಯೆ

*'Jesus married Mary Magdalene, had kids' 34

* ಮನೆವೈದ್ಯ

☆ ಅಹ್ಮದಿಯತ್ 34

☆ ವಾರ್ತೆಗಳು 35

☆ ನಿಧನ ವಾರ್ತೆಗಳು 36


ಮುಖಪುಟ ಚಿತ್ರ: ಯುಎಸ್‌ಎಯ ಮೇರಿಲ್ಯಾಂಡ್‌ನಲ್ಲಿರುವ ಅಹ್ಮದಿಯಾ ಮಸೀದಿ "ಮಸ್ಜಿದ್ ಬೈತುರ್ರಹ್ಮಾನ್"


ಬಿಡಿ ಪ್ರತಿ : ರೂ.15/- ವಾರ್ಷಿಕ ಚಂದಾ : ರೂ.60/- ಅಂಚೆ ಮೂಲಕ : ರೂ.70/-



ವಿಳಾಸ : 10 -23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 0 0 1

بسم الله الرحمن الرحيم

نحمده ونصلي على رسوله الكريم

# ಯುಗಶ್ರೀ

ಡಿಸೆಂಬರ್ 2014

ಸಂಪಾದಕ : ಮುಹಮ್ಮದ್ ಯೂಸುಫ್

| | | | |
|---|---|---|---|
| ಆರಂಭ : 1975 | ಸಂಪುಟ : 31 | ಫತಹ್ 1393 ಹಿಜರೀ ಶಮ್ಸೀ | ಸಂಚಿಕೆ : 3-4 |


## ಪ್ರಾಮಾಣಿಕತೆ

"ಅಹಿಂಸಾತ್ಮಕ ಸ್ವಭಾವಗಳ ಯಾದಿಯಲ್ಲಿ ಸೇರಿದ ಒಂದು ಸದ್ಗುಣಕ್ಕೆ ಅರಬಿ ಭಾಷೆಯಲ್ಲಿ 'ಅಮಾನತ್' ಎಂದೂ 'ದಿಯಾನತ್' ಎಂದೂ ಹೇಳುತ್ತಾರೆ. ಇದಕ್ಕೆ ವಿಶ್ವಸ್ತತೆ ಅಥವಾ ಪ್ರಾಮಾಣಿಕತೆ ಎಂದು ಅರ್ಥ ಕೊಡಬಹುದು. ಇದು ಅನ್ಯರ ಸಂಪತ್ತನ್ನು ವಂಚನೆಯಿಂದಲೋ ಅನ್ಯಾಯವಾಗಿಯೋ ಸ್ವಾಧೀನಪಡಿಸಿ ದ್ರೋಹವನ್ನುಂಟು ಮಾಡುವುದಕ್ಕೊಪ್ಪದ ಸದ್ಗುಣವಾಗಿದೆ. ಇದು ಸಹ ಮನುಷ್ಯನ ಸಹಜಗುಣಗಳಲ್ಲೊಂದು ಎಂಬುದನ್ನು ಮರೆಯಬಾರದು. ದುಸ್ವಭಾವಗಳಿಗೆ ಬಲಿಯಾಗದ ಶುದ್ಧ ಪ್ರಕೃತಿಯ ಮೊಲೆಯುಣ್ಣುವ ಮಗು ತನ್ನ ತಾಯಿಯ ಹೊರತು ಅನ್ಯ ಸ್ತ್ರೀಯ ಮೊಲೆ ಕುಡಿಯುವುದಕ್ಕೆ ವೈಮನಸ್ಯ ತೋರಿಸಿ ಅನ್ಯರ ವಸ್ತುವಿನಲ್ಲಿ ವಿರಕ್ತಿಯನ್ನು ಪ್ರದರ್ಶಿಸುತ್ತದೆ. ಶಿಶುವಿಗೆ ಪರಿಚಯಜ್ಞಾನ ಉಂಟಾಗುವ ಮೊದಲೇ ದಾದಿಯನ್ನು ನೇಮಿಸದಿದ್ದರೆ, ಸರಿಯಾದ ಪರಿಚಯಜ್ಞಾನ ಬಂದ ನಂತರ ಅದಕ್ಕೆ ಅನ್ಯ ಸ್ತ್ರೀಯ ಮೊಲೆಯುಣ್ಣಿಸುವುದು ಬಹಳ ಕಷ್ಟವಾಗಬಹುದು. ಅನ್ಯ ಸ್ತ್ರೀಯ ಮೊಲೆ ಹಾಲನ್ನು ದ್ವೇಷಿಸುವುದರಿಂದಾಗಿ ಮಗುವು ಕ್ಲೇಶ ಮತ್ತು ಹಸಿವೆಯಿಂದ ಕಷ್ಟಪಡುವುದನ್ನು ಕಾಣಬಹುದು. ಇಷ್ಟರ ಮಟ್ಟಿಗೆ ಮಗು ವಿರಕ್ತಿ ತೋರಿಸುವುದರ ರಹಸ್ಯವೇನಿರಬಹುದು? ತನ್ನ ತಾಯಿಯ ಹೊರತು ಬೇರೆ ಯಾರ ವಸ್ತುವನ್ನಾಗಲಿ ಸ್ವಾಭಾವಿಕವಾಗಿ ಆ ಮಗು ದ್ವೇಷಿಸುತ್ತದೆಂಬುದೇ ರಹಸ್ಯ. ಶಿಶುವಿನ ಈ ಶುದ್ಧ ಸ್ವಭಾವದ ಕುರಿತು ಗಾಢವಾಗಿ ಪರ್ಯಾಲೋಚನೆ ಮಾಡುವುದಾದರೆ, ಅನ್ಯರ ವಸ್ತುಗಳನ್ನು ದ್ವೇಷಿಸಿ ಸ್ವತಃ ಕಷ್ಟವನ್ನು ಸಹಿಸುವ ಈ ಸ್ವಭಾವ 'ಪ್ರಾಮಾಣಿಕತೆ' ಎಂದು ಹೆಸರಿಸಬಹುದಾದ ನೈತಿಕ ಗುಣದ ಮೂಲರೂಪವೆಂದು ತಿಳಿಯಬಹುದು. ಅನ್ಯರ ವಸ್ತುಗಳ ಮೇಲೆ ಈ ಶಿಶು ತೋರಿಸುವಂತಹ ನಿಜವಾದ ವಿರಕ್ತಿಭಾವ ಓರ್ವನ ಹೃದಯದಲ್ಲಿ ಉಂಟಾಗದಿರುವ ತನಕ ಅವನು ಈ ಪ್ರಾಮಾಣಿಕ ಸ್ವಭಾವದಲ್ಲಿ ಸಾಚಾತನವುಳ್ಳವನಾಗಲಾರ. ಆದರೆ ಶಿಶು ವಿರಕ್ತಿ ಪ್ರದರ್ಶಿಸುವುದು ಯಥೋಚಿತವಾಗಿಯೋ, ವಿವೇಚನೆಯಿಂದಲೋ ಅಲ್ಲವಾದುದರಿಂದ ಅದರ ಈ ವರ್ತನೆ ನೈತಿಕ ಗುಣವೆಂದು ಪರಿಗಣಿಸಲ್ಪಡಲಾರದು. ಅದು ಬರೇ ಸ್ವಾಭಾವಿಕ ಪ್ರೇರಣೆಯ ಮತ್ತು ವಿವೇಕ ರಹಿತ ಪ್ರವೃತ್ತಿಯಾದುದರಿಂದ ಶಿಶು ವೃಥಾ ಕಷ್ಟವನ್ನನುಭವಿಸುತ್ತದೆ. ಆದರೂ ಈ ಸ್ವಾಭಾವಿಕ ಪ್ರಜ್ಞೆಯೇ ಪ್ರಾಮಾಣಿಕತೆ ಅಥವಾ 'ಅಮಾನತ್' ಎಂಬ ಉತ್ಕೃಷ್ಟ ನೈತಿಕ ಗುಣದ ಉದ್ಭವ ಸ್ಥಾನ. ಶಿಶು ತನ್ನ ವಿವೇಚನಾ ರಹಿತವಾದ ಚೇಷ್ಟೆಯ ಕಾರಣದಿಂದ ನೀತಿ ಮತ್ತು ಪ್ರಾಮಾಣಿಕತೆಯಿರುವ ಉತ್ಕೃಷ್ಟಧರ್ಮಿಯಾಗಿ ಗಣಿಸಲ್ಪಡದಿರುವ ರೀತಿಯಲ್ಲಿಯೇ, ಈ ಪ್ರಕೃತಿಜನ್ಯ ಗುಣವನ್ನು ವಿವೇಚನೆಯಿಂದಲೂ ಸಂದರ್ಭಾನುಸಾರವಾಗಿಯೂ ಪ್ರಯೋಗಿಸದ ವಯಸ್ಕನು ಸಹ ಈ ವಿಶಿಷ್ಟ ಸದ್ಗುಣದಿಂದ ಪರಿವೇಷ್ಟಿತನೆಂದು ಗಣಿಸಲ್ಪಡಲಾರನು. ಪ್ರಾಮಾಣಿಕನೂ ಸತ್ಯವಂತನೂ ಆಗುವುದು ಸುಲಭಸಾಧ್ಯ ಕೆಲಸವಲ್ಲ. ಸತ್ಯಸಂಧತೆಯ ವಿವಿಧ ಅಂಶಗಳನ್ನು ಪೂರ್ಣ ರೀತಿಯಲ್ಲಿ ಪಾಲಿಸದಿದ್ದರೆ ಯಾರೂ ಯಥಾರ್ಥ ಪ್ರಾಮಾಣಿಕನೂ ಸತ್ಯವಂತನೂ ಆಗಲಾರನು.

(ಇಸ್ಲಾಂ ಧರ್ಮ ತತ್ವಜ್ಞಾನ)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್, ಅಹ್ಮದಿಯಾ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಖಂಡಿತವಾಗಿಯೂ ಅಲ್ಲಾಹು ನಿಮ್ಮ ಸೌಂದರ್ಯವನ್ನಾಗಲಿ ಶರೀರಪ್ರಕೃತಿಯನ್ನಾಗಲಿ ಪರಿಗಣಿಸುವುದಿಲ್ಲ. ನಿಮ್ಮ ಹೃದಯಗಳನ್ನು ಅವನು ನೋಡುತ್ತಾನೆ. (ಮುಸ್ಲಿಂ)
- ಇಹಲೋಕ ಮಧುರವೂ ಅಲಂಕಾರವೂ ಆಗಿದೆ. ಅದರಲ್ಲಿ ನಿಮ್ಮನ್ನು ಪ್ರತಿನಿಧಿಗಳನ್ನಾಗಿ ನಿಶ್ಚಯಿಸಲಾಗಿದೆ. ನೀವೇನು ಮಾಡುತ್ತೀರೆಂದು ಅವನು ವೀಕ್ಷಿಸುತ್ತಾನೆ. ಇಹಲೋಕ (ಜೀವಿತ) ಮತ್ತು ಸ್ತ್ರೀಯರ ಬಗ್ಗೆ ನೀವು ಜಾಗರೂಕರಾಗಿರಿ. ಇಸ್ರಾಯೀಲ್ಯರಲ್ಲಿ ಗಲಭೆಯ ಆರಂಭವೇ ಸ್ತ್ರೀಯರಿಂದಾಗಿತ್ತು. (ಮುಸ್ಲಿಂ)
- (ಹಜ್ಜತುಲ್ ವಿದಾದಲ್ಲಿ ಪೈಗಂಬರ್(ಸ) ಹೀಗೆ ಉಪದೇಶಿಸಿದರು:) "ನೀವು ಅಲ್ಲಾಹನಿಗೆ ಭಯಪಟ್ಟರೆ, ಐದು ಹೊತ್ತು ನಮಾಝ್ ಮಾಡಿದರೆ, ರಮಝಾನ್ ಮಾಸದಲ್ಲಿ ಉಪವಾಸ ಅನುಷ್ಠಿಸಿದರೆ, ನಿಮ್ಮ ಧನದಿಂದ ಝಕಾತ್ ನೀಡಿದರೆ, ನಿಮ್ಮ ಆಡಳಿತಾಧಿಕಾರಿಗಳನ್ನು ಅನುಸರಿಸಿದರೆ ನೀವು ಸ್ವರ್ಗದಲ್ಲಿ ಪ್ರವೇಶಿಸಬಹುದು. (ಮುಸ್ಲಿಂ)
- ಏಳು ವರ್ಷ ಪ್ರಾಯವಾದಾಗ ನಿಮ್ಮ ಸಂತಾನಗಳಿಗೆ ನಮಾಝ್ ಮಾಡಲು ಆದೇಶಿಸಬೇಕು. ಹತ್ತು ವರ್ಷಪ್ರಾಯವಾದರೆ, ಅವರು ನಮಾಝ್ ಮಾಡದಿದ್ದರೆ ಪ್ರಹರಿಸಬೇಕು. ಮಲಗುವ ಕೋಣೆಯಲ್ಲಿ ಅವರನ್ನು ಬೇರ್ಪಡಿಸಬೇಕು. (ಅಬೂ ದಾವೂದ್)
- ಅಲ್ಲಾಹನನ್ನೂ ಅಂತ್ಯ ದಿನದ ಬಗ್ಗೆಯೂ ನಂಬುವವನು ನೆರೆಕರೆಯವರಿಗೆ ಒಳಿತು ಮಾಡಲಿ. ಅಲ್ಲಾಹನನ್ನೂ ಅಂತ್ಯ ದಿನದ ಬಗ್ಗೆಯೂ ನಂಬುವವನು ಅತಿಥಿಯನ್ನು ಸತ್ಕರಿಸಲಿ. ಅಲ್ಲಾಹನನ್ನೂ ಅಂತ್ಯದಿನದ ಬಗ್ಗೆಯೂ ನಂಬುವವನು ಒಳ್ಳೆಯ ಮಾತನಾಡಲಿ ಅಥವಾ ಮೌನವನ್ನವಲಂಬಿಸಲಿ. (ಮುಸ್ಲಿಂ).
- ಅಲ್ಲಾಹನಿಗೆ ಇಷ್ಟವಾದ ವಿಚಾರವೇನೆಂದರೆ, ನಿಶ್ಚಿತ ಸಮಯದಲ್ಲಿ ನಮಾಝ್ ಮಾಡುವುದು, ಮಾತಾಪಿತರಿಗೆ ಒಳಿತು ಮಾಡುವುದು ಮತ್ತು ಅಲ್ಲಾಹನ ಮಾರ್ಗದಲ್ಲಿ ಪರಿಶ್ರಮಪಡುವುದು. (ಬುಖಾರಿ, ಮುಸ್ಲಿಂ)
- ವೃದ್ಧಾಪ್ಯ ಹೊಂದಿದ ಮಾತಾಪಿತರನ್ನು ಅಥವಾ ಅವರಲ್ಲಿ ಒಬ್ಬರನ್ನು ಲಭಿಸಿದರೂ ಸ್ವರ್ಗದಲ್ಲಿ ಪ್ರವೇಶಿಸಲು ಸಾಧ್ಯವಾಗದವನು ನೀಚನೂ ನಿಂದ್ಯನೂ ಆಗಲಿ. (ಮುಸ್ಲಿಂ)
- ಮಾತೃ ಸಹೋದರಿಯರಿಗೆ ಮಾತೆಯ ಸ್ಥಾನವಿದೆ. (ತಾಯಿಯ ಪ್ರಕಾರ ಅವರೊಂದಿಗೂ ವರ್ತಿಸಬೇಕು.) (ತಿರ್ಮಿದೀ)
- ನಿಮಗಿಂತ ಕೆಳಮಟ್ಟದಲ್ಲಿರುವವರನ್ನು ನೀವು ನೋಡಿರಿ. ಮೇಲ್ಮಟ್ಟದಲ್ಲಿರುವವರನ್ನು ನೋಡಬೇಡಿರಿ. ಅಲ್ಲಾಹು ನಿಮಗೆ ನೀಡಿದ ಅನುಗ್ರಹವನ್ನು ನೀವು ಅವಗಣಿಸದಿರಲು ಅದು ಉತ್ತಮ ಮಾರ್ಗವಾಗಿದೆ. (ಬುಖಾರಿ,ಮುಸ್ಲಿಂ)
- ಇಹಲೋಕ ಸತ್ಯವಿಶ್ವಾಸಿಯ ಸೆರೆಮನೆಯೂ ಸತ್ಯ ನಿಷೇಧಿಯ ಸ್ವರ್ಗಾರಾಮವೂ ಆಗಿದೆ. (ಮುಸ್ಲಿಂ)

**ಯುಗರಶ್ಮಿಗೆ ಚಂದಾದಾರರಾಗಿರಿ**

**ವಾರ್ಷಿಕ ಚಂದಾ**: ರೂ. 60/-, **ಅಂಚೆ ಮೂಲಕ**: ರೂ. 70/-

**ಸಂಪರ್ಕಿಸಿರಿ : 99 00 410 789**

# ಜಾಗತಿಕ ಶಾಂತಿ – ಈ ಕಾಲಘಟ್ಟದ ಆವಶ್ಯಕತೆ



ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಪಂಚಮ ಖಲೀಫ, ಅವರು 2013 ನವೆಂಬರ್ ದಿನಾಂಕ 4ರಂದು ನ್ಯೂಝಿಲೇಂಡ್ ದೇಶದ ವೆಲ್ಲಿಂಗ್‌ಟನ್‌ನಲ್ಲಿರುವ ನ್ಯಾಶನಲ್ ಪಾರ್ಲಿಮೆಂಟ್‌ನಲ್ಲಿ ಭಾಷಣ ಮಾಡಿದರು. ಈ ಚಾರಿತ್ರಿಕ ಭಾಷಣ ನೀಡುವಾಗ ಪಾರ್ಲಿಮೆಂಟ್ ಸದಸ್ಯರು, ವಿವಿಧ ದೇಶಗಳ ರಾಯಭಾರಿಗಳು, ವಿದ್ಯಾಭ್ಯಾಸ ಪರಿಣಿತರು ಮತ್ತು ಇತರ ಗಣ್ಯರು ಹಾಜರಿದ್ದರು. ಲೋಕದ ವಿವಿಧ ಭಾಗಗಳಲ್ಲಿ ಸಂಘರ್ಷಗಳು ತಲೆದೋರಿರುವ ಪರಿಸ್ಥಿತಿಯಲ್ಲಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನ್ಯಾಯಪಾಲನೆಯ ತುರ್ತು ಆವಶ್ಯಕತೆ ಇದೆ ಎಂದು ವಾಗ್ದತ್ತ ಮಸೀಹರ ಖಲೀಫರು ಪ್ರತಿಪಾದಿಸಿದರು. ಈ ಮುಖ್ಯ ಭಾಷಣದ ನಂತರ ಇತರ ಗಣ್ಯರು ಸಹ ಭಾಷಣ ಮಾಡಿದರು. ಪಾರ್ಲಿಮೆಂಟ್ ಸದಸ್ಯ ಕನ್‌ವಲ್‌ಜಿತ್ ಸಿಂಗ್ ಬಕ್ಷಿ ಹೀಗೆ ಹೇಳಿದರು: "ಪರಮ ಪವಿತ್ರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರ ಭಾಷಣವನ್ನು ಆಲಿಸಿ ಅವರ ಬುದ್ಧಿವೈಭವವನ್ನೂ ಅವರ ವಿಚಾರಗಳನ್ನೂ ತಿಳಿಯಲು ಸಾಧ್ಯವಾದುದು ನಮಗೆ ದೊರೆತ ವಿಶೇಷ ಭಾಗ್ಯವಾಗಿದೆ."

ಪಾರ್ಲಿಮೆಂಟ್ ಸದಸ್ಯ ಡಾಕ್ಟರ್ ರಾಜೇನ್ ಪ್ರಸಾದ್ ಹೀಗೆ ಹೇಳಿದರು: "ಪರಮ ಪವಿತ್ರ ಮಹಾನುಭಾವರನ್ನು ನ್ಯೂಝಿಲೇಂಡ್ ಪಾರ್ಲಿಮೆಂಟ್‌ಗೆ ಸ್ವಾಗತಿಸಲು ಸಂತೋಷವಾಗುತ್ತದೆ. ಅಹ್ಮದೀ ಮುಸ್ಲಿಮರು ಈ ದೇಶದ ನಾಗರಿಕರಾಗಿ ತಮ್ಮ ಶಾಂತಿ ಸಂದೇಶಗಳನ್ನು ಕೃತಿರೂಪಕ್ಕೆ ತರುತ್ತಿರುವುದನ್ನು ನೋಡಿ ನಾನು ಯಾವಾಗಲೂ ಪ್ರಭಾವಿತನಾಗಿದ್ದೇನೆ." ಈ ಸಮಾರಂಭದ ಕೊನೆಗೆ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಇರಾನಿನ ಮತ್ತು ಇಸ್ರಾಯೇಲ್‌ನ ರಾಯಭಾರಿಗಳ ಸಹಿತ ಅನೇಕ ಗಣ್ಯರನ್ನು ಭೇಟಿಯಾದರು. ಅನಂತರ ಪಾರ್ಲಿಮೆಂಟ್ ಸದಸ್ಯರಾದ ಕನ್‌ವಲ್‌ಜಿತ್ ಸಿಂಗ್ ಬಕ್ಷಿ ಪಾರ್ಲಿಮೆಂಟ್ ಭವನವನ್ನು ಹಝ್ರತ್ ಖಲೀಫರಿಗೆ ತೋರಿಸಿಕೊಟ್ಟರು.

## ಖಲೀಫರ ಭಾಷಣ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ –

ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ– ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲಿರಲಿ.

ಮೊತ್ತ ಮೊದಲು ಈ ಸಮಾರಂಭವನ್ನು ವ್ಯವಸ್ಥೆಗೊಳಿಸಿದವರನ್ನು ಮತ್ತು ವಿಶಿಷ್ಟವಾಗಿ ಪಾರ್ಲಿಮೆಂಟ್ ಸದಸ್ಯರಾದ ಕನ್‌ವಲ್‌ಜಿತ್ ಸಿಂಗ್ ಬಕ್ಷಿಯವರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಅವರು ಈ ದಿನ ನಿಮ್ಮನ್ನು ಸಂಬೋಧಿಸಲು ನನಗೆ ಸಂದರ್ಭವನ್ನು ಒದಗಿಸಿದ್ದಾರೆ. ಎರಡನೆಯದಾಗಿ, ನನ್ನ ಭಾಷಣವನ್ನು ಆಲಿಸಲು ಇಲ್ಲಿಗೆ ಆಗಮಿಸಿದ ನಿಮಗೆಲ್ಲರಿಗೂ ಕೃತಜ್ಞತೆ ಅರ್ಪಿಸುತ್ತೇನೆ.

ಈ ಪಾರ್ಲಿಮೆಂಟ್ ಹೌಸಿನಲ್ಲಿ ಅನೇಕ ರಾಜಕಾರಣಿಗಳು ಮತ್ತು ಪಾರ್ಲಿಮೆಂಟ್ ಸದಸ್ಯರು ಆಗಾಗ ಜಮಾಯಿಸಿ ದೇಶದ ಅಭಿವೃದ್ಧಿಗೆ ಪೂರಕವಾದ ನಿಯಮಗಳನ್ನು ರೂಪಿಸಲು ಸಮಾಲೋಚಿಸುತ್ತಾರೆ. ಇದಲ್ಲದೆ ಅನೇಕ ಲೌಕಿಕ ನಾಯಕರು ಇಲ್ಲಿಗೆ ಆಗಮಿಸಿ ತಮ್ಮ ಜ್ಞಾನ, ನೈಪುಣ್ಯತೆ ಮತ್ತು ಅನುಭವದ ಬಗ್ಗೆ ನಿಮ್ಮನ್ನು ಸಂಬೋಧಿಸಿ ಭಾಷಣಗಳನ್ನು ಮಾಡಿರಬಹುದು, ಆದರೆ ನಿಮ್ಮನ್ನು ಧಾರ್ಮಿಕ ನಾಯಕರು, ವಿಶಿಷ್ಟವಾಗಿ ಮುಸ್ಲಿಮ್ ಧಾರ್ಮಿಕ ನಾಯಕರು ಬಹಳ ಅಪರೂಪವಾಗಿ ಸಂಬೋಧಿಸಿರಬಹುದು. ಇಸ್ಲಾಮ್ ಧರ್ಮಕ್ಕೆ ಸೇರಿದ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕನಾದ ನನಗೆ – ನಮ್ಮ ಜಮಾಅತಿನ ಏಕಮಾತ್ರ ಉದ್ದೇಶ ಇಸ್ಲಾಮಿನ ನೈಜ ಸಂದೇಶವನ್ನು ಪ್ರಚಾರಗೊಳಿಸುವುದಾಗಿದೆ – ನಿಮ್ಮನ್ನು ಸಂಬೋಧಿಸಲು ಸಂದರ್ಭವೊದಗಿಸಿದುದು ನಿಮ್ಮ ವಿಶಾಲ ಹೃದಯತೆಯನ್ನೂ ನಿಮ್ಮ ಸಹಿಷ್ಣುತೆಯನ್ನೂ ಪ್ರತಿಬಿಂಬಿಸುತ್ತಿದೆ. ಆದುದರಿಂದ ನಿಮ್ಮ ಈ ನಿಲುವಿಗೆ ನಾನು ನಿಮಗೆ ಕೃತಜ್ಞನಾಗಿದ್ದೇನೆ.

ನಾನು ಈಗ ಇಸ್ಲಾಮಿನ ಸುಂದರ ಉಪದೇಶಗಳ ಬಗ್ಗೆ ಮಾತನಾಡಲು ಬಯಸುತ್ತೇನೆ. ಇಂದಿನ ಕಾಲದ ತುರ್ತು ಆವಶ್ಯಕತೆ ಜಾಗತಿಕ ಶಾಂತಿ ಸ್ಥಾಪನೆ ಆಗಿದೆ. ರಾಜಕಾರಣಿಗಳು ಮತ್ತು ವ್ಯಕ್ತಿಗಳು ಇದರ ಬಗ್ಗೆ ವೈಯಕ್ತಿಕವಾಗಿಯೂ ಸರಕಾರದ ಮೂಲಕವೂ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಿರಬಹುದು. ನೀವು ಉತ್ತಮ ಉದ್ದೇಶದಿಂದ ಕಾರ್ಯನಿರತರಾಗಿರಬಹುದು ಮತ್ತು ಆ ನಿಟ್ಟಿನಲ್ಲಿ ತಕ್ಕಮಟ್ಟಿಗೆ ಜಯಗಳಿಸಿರಬಹುದು. ನಿಮ್ಮ ಸರಕಾರ ಕಳೆದ ಹಲವು ವರ್ಷಗಳಲ್ಲಿ ಪ್ರಮುಖ ಶಕ್ತಿಶಾಲಿ ರಾಷ್ಟ್ರಗಳಿಗೆ ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪನೆ ಬಗ್ಗೆ ಸಲಹೆ ನೀಡಿರಲೂಬಹುದು.

ಇಂದು ಲೋಕದ ಪರಿಸ್ಥಿತಿ ಅತ್ಯಂತ ಅಪಾಯಕರವಾಗಿದೆ ಮತ್ತು ಲೋಕದಾದ್ಯಂತ ಬಹಳ ಆತಂಕವನ್ನು ಉಂಟುಮಾಡಿದೆ. ಕೆಲವು ಮುಖ್ಯ ಸಂಘರ್ಷಗಳು ಈಗ ಅರಬ್ ಲೋಕದಲ್ಲಿ ನಡೆಯುತ್ತಿವೆ. ಆದರೆ ಅಂತಹ ಸಂಘರ್ಷಗಳು ಅಲ್ಲಿಗೆಯೇ ಸೀಮಿತವಾಗಲಾರದೆಂದು ಬುದ್ಧಿಶಾಲಿಯಾದ ಯಾರಿಗಾದರೂ ಮನವರಿಕೆಯಾಗಬಹುದಾಗಿದೆ. ಒಂದು ಸರಕಾರ ಮತ್ತು ಅದರ ಪ್ರಜೆಗಳ ಮಧ್ಯೆ ಪ್ರಾರಂಭವಾಗಿರುವ ಸಂಘರ್ಷ ಭುಗಿಲೆದ್ದು ಅಂತರ್ರಾಷ್ಟ್ರೀಯ ಬಿಕ್ಕಟ್ಟಾಗಿ ಹೆಚ್ಚು ವ್ಯಾಪಕವಾಗಬಹುದಾಗಿದೆ. ಪ್ರಮುಖ ಶಕ್ತಿ ರಾಷ್ಟ್ರಗಳ ಎರಡು ಬಣಗಳು ಈಗಾಗಲೇ ರೂಪಗೊಳ್ಳುತ್ತಾ ಇವೆ. ಒಂದು ಬಣ ಸಿರಿಯಾ ಸರಕಾರವನ್ನೂ ಇನ್ನೊಂದು ಬಣ ವಿದ್ರೋಹಿಗಳನ್ನೂ ಬೆಂಬಲಿಸುತ್ತಿವೆ. ಈ ಪರಿಸ್ಥಿತಿ ಮುಸ್ಲಿಮ್ ದೇಶಗಳಿಗೆ ಬಹಳ ದೊಡ್ಡ ಬೆದರಿಕೆ ಒಡ್ಡುತ್ತಿದ್ದು ಲೋಕದ ಇತರ ಪ್ರದೇಶಗಳಿಗೂ ಬಹಳ ಅಪಾಯಕರವಾಗಿದೆ.

ಕಳೆದ ಶತಮಾನದಲ್ಲಿ ಸಂಭವಿಸಿದ ಹೃದಯ ವಿದ್ರಾವಕ ಎರಡು ಮಹಾಯುದ್ಧಗಳನ್ನು ನಾವು ಎಂದೂ ಮರೆತು ಬಿಡಬಾರದು. ಅವು ಉಂಟುಮಾಡಿದ ಮಹಾನಾಶ – ವಿಶಿಷ್ಟವಾಗಿ ದ್ವಿತೀಯ ಮಹಾಯುದ್ಧ ಉಂಟುಮಾಡಿದ ವಿನಾಶ – ಹಿಂದೆಂದೂ ಸಂಭವಿಸದಷ್ಟು ಭೀಕರವಾಗಿತ್ತು. ಪರವಮಾಣ್ವೇತರ ಸಮರಾಯುಧಗಳನ್ನು ಬಳಸಿ ಜನನಿಬಿಡ ಪಟ್ಟಣಗಳನ್ನು ಸಂಪೂರ್ಣವಾಗಿ ನಾಶಗೊಳಿಸಲಾಯಿತು. ಮಿಲಿಯಗಟ್ಟಲೆ ಜನರು ಕೊಲ್ಲಲ್ಪಟ್ಟರು. ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ಅತ್ಯಂತ ಭಯಾನಕ ಸರ್ವನಾಶವನ್ನು ಲೋಕವು ಕಂಡಿತು. ಜಪಾನ್ ದೇಶದ ಹಿರೋಶಿಮಾ ಮತ್ತು ನಾಗಸಾಕಿಗಳಿಗೆ ವರ್ಷಿಸಿದ ಅಣುಬಾಂಬ್‌ಗಳಿಂದ ಸಂಭವಿಸಿದಂತಹ ವಿನಾಶದ ಬಗ್ಗೆ ವಿವರಣೆಗಳನ್ನು ಆಲಿಸುವಾಗ ನಡುಕ ಉಂಟಾಗುತ್ತದೆ. ಆ ನಗರಗಳಲ್ಲಿ ಈಗ ಸ್ಥಾಪಿತವಾದ ಮ್ಯೂಸಿಯುಮ್‌ಗಳಲ್ಲಿ ಪ್ರದರ್ಶಿಸಲಾಗುವ ಚಿತ್ರಗಳು ಅಲ್ಲಿ ಸಂಭವಿಸಿದ ಮಹಾನಾಶದ ಬಗ್ಗೆ ನಮಗೆ ನೆನಪಿಸಿಕೊಡುತ್ತವೆ.

ದ್ವಿತೀಯ ಮಹಾಯುದ್ಧದಲ್ಲಿ ಅಂದಾಜು ಎಪ್ಪತ್ತು ಮಿಲಿಯ ಜನರು ಕೊಲ್ಲಲ್ಪಟ್ಟರು. ಅವರ ಪೈಕಿ ನಲ್ವತ್ತು ಮಿಲಿಯ ಜನರು ಸೈನಿಕರಾಗಿರಲಿಲ್ಲ; ನಾಗರಿಕರಾಗಿದ್ದರು. ಈ ಮಹಾಯುದ್ಧದಲ್ಲಿ ಸೈನಿಕರಿಗಿಂತ ಹೆಚ್ಚು ಸಾಮಾನ್ಯ ಜನರು ಬಲಿಯಾದರೆಂದು ಸ್ಪಷ್ಟವಾಗುತ್ತದೆ. ಯುದ್ಧವು ಕೊನೆಗೊಂಡ ನಂತರ ಸಹ ಮಿಲಿಯಾಂತರ ಜನರು ಮೃತರಾದರು. ಹೀಗೆ ಯುದ್ಧದ ಪರಿಣಾಮ ಅತ್ಯಂತ ಭಯಾನಕವಾಗಿತ್ತು. ಅಣುಬಾಂಬು ಪ್ರಯೋಗಿಸಿ ಅನೇಕ ವರ್ಷ ದಾಟಿಹೋದರೂ ಅದರ ದುಷ್ಪರಿಣಾಮಗಳು ನವಜಾತ ಶಿಶುಗಳಲ್ಲಿ ಕಾಣಿಸುತ್ತಾ ಇವೆ. ಆಧುನಿಕ ಲೋಕದಲ್ಲಿ ಚಿಕ್ಕ ದೇಶಗಳು ಕೂಡ ಅಣು ಬಾಂಬುಗಳನ್ನು ಹೊಂದಿವೆ. ಆ ದೇಶಗಳ ನಾಯಕರು ಯುದ್ಧ ಪ್ರಿಯರೂ ಆಗಿದ್ದಾರೆ. ಅಣು ಬಾಂಬು ಪ್ರಯೋಗಿಸಿದುದರಿಂದ ಉಂಟಾಗುವ ಮಹಾ ವಿನಾಶದ ಬಗ್ಗೆ ಅವರಿಗೆ ಪರಿವೆ ಇಲ್ಲ.

ಇಂದು ಘಟಿಸಬಹುದಾದ ಅಣ್ವಸ್ತ್ರ ಯುದ್ಧದ ಬಗ್ಗೆ ಊಹಿಸುವಾಗ ನಮಗೆ ದೊರಕುವ ಚಿತ್ರವು ಒಬ್ಬ ವ್ಯಕ್ತಿಯನ್ನು ಆಘಾತಗೊಳಿಸಿ ಸಂಪೂರ್ಣವಾಗಿ ಸ್ತಬ್ಧಗೊಳಿಸುತ್ತದೆ. ಇಂದು ಚಿಕ್ಕ ದೇಶಗಳ ಬಳಿಯಲ್ಲಿರುವ ಅಣುಬಾಂಬುಗಳು ದ್ವಿತೀಯ ಮಹಾಯುದ್ಧದಲ್ಲಿ ಬಳಸಲ್ಪಟ್ಟ ಅಣು ಬಾಂಬ್‌ಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿವೆ. ಸಂಘರ್ಷ ಮತ್ತು ಅಸ್ಥಿರತೆಯ ಇಂದಿನ ವಾತಾವರಣವು ಲೋಕದಲ್ಲಿ ಶಾಂತಿ ಸ್ಥಾಪಿಸಲು ಬಯಸಿ ಅದರ ಬಗ್ಗೆ ಪ್ರಯತ್ನಿಸುವವರಿಗೆ ಬಹಳ ಆತಂಕದಾಯಕವಾಗಿದೆ.

ಇಂದು ಲೋಕದ ಸ್ಥಿತಿ ಬಹಳ ಕರುಣಾಜನಕವಾಗಿದೆ. ಜನರು ಒಂದು ಹಂತದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಹೇಳುತ್ತಾರೆ. ಆದರೆ ಅದೇ ಜನರು ಇನ್ನೊಂದು ಹಂತದಲ್ಲಿ ಅಹಂಕಾರಭರಿತರಾಗಿ ದರ್ಪದಿಂದ ವರ್ತಿಸುತ್ತಾರೆ. ತಮ್ಮ ಮೇಲ್ಮೆಯನ್ನೂ ಶಕ್ತಿಯನ್ನೂ ಪ್ರದರ್ಶಿಸಲು ಪ್ರತಿಯೊಂದು ಶಕ್ತಿಶಾಲಿ ದೇಶದ ಸರಕಾರ ಏನನ್ನೂ ಮಾಡಲು ಹೇಸದವುಗಳಾಗಿವೆ. ದ್ವಿತೀಯ ಮಹಾಯುದ್ಧ ಕೊನೆಗೊಂಡ ನಂತರ ಲೋಕದಲ್ಲಿ ಶಾಶ್ವತ ಶಾಂತಿ ಸ್ಥಾಪಿಸಲು ಮತ್ತು ಮುಂದೆ ಯುದ್ಧಗಳಾಗದಂತೆ ಮಾಡಲು ಸಂಯುಕ್ತ ರಾಷ್ಟ್ರ ಸಂಘವನ್ನು ಸ್ಥಾಪಿಸಲಾಯಿತು. ಹಿಂದೆ ಸ್ಥಾಪಿತವಾಗಿದ್ದ ಲೀಗ್ ಆಫ್ ನೇಶನ್ಸ್ ಸೋತು ಹೋದ ಹಾಗೆ ಈಗ ಸ್ಥಾಪಿತವಾದ ಸಂಯುಕ್ತ ರಾಷ್ಟ್ರ ಸಂಘ (UNO)ದ ಸ್ಥಾನಮಾನಗಳು ಮತ್ತು ಗೌರವ ದಿನಂಪ್ರತಿ ಕುಸಿಯುತ್ತಾ ಹೋಗುತ್ತಿವೆ. ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸದಿದ್ದರೆ ಶಾಂತಿ ಸ್ಥಾಪನೆಗೋಸ್ಕರ ಎಷ್ಟು ಸಂಸ್ಥೆಗಳನ್ನು ರೂಪಿಸಿದರೂ ಅವುಗಳೆಲ್ಲವು ನಿಷ್ಫಲವಾಗುವುವು.

ಲೀಗ್ ಆಫ್ ನೇಶನ್ಸ್ ಸೋತುಹೋದ ಬಗ್ಗೆ ನಾನು ಹೇಳಿದೆ. ಪ್ರಥಮ ಮಹಾಯುದ್ಧ ಕೊನೆಗೊಂಡ ನಂತರ ಜಾಗತಿಕ ಶಾಂತಿಯನ್ನು ಸ್ಥಾಪಿಸಿ ರಕ್ಷಿಸಲು ಈ ಸಂಸ್ಥೆಯನ್ನು ರೂಪಿಸಲಾಯಿತು. ಈ ಸಂಸ್ಥೆಗೆ ದ್ವಿತೀಯ ಮಹಾಯುದ್ಧ ಪ್ರಾರಂಭವಾಗುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ಆ ಮಹಾಯುದ್ಧ ನಾನು ಇದರ ಮೊದಲು ಹೇಳಿದ ಹಾಗೆ ಮಹಾನಾಶವನ್ನುಂಟುಮಾಡಿತು. ನ್ಯೂಝಿಲೇಂಡ್‌ನ ಹನ್ನೊಂದು ಸಾವಿರ ಸೈನಿಕರು ಆ ಮಹಾಯುದ್ಧದಲ್ಲಿ ಕೊಲ್ಲಲ್ಪಟ್ಟರು. ನ್ಯೂಝಿಲೇಂಡ್ ಯುದ್ಧ ಕ್ಷೇತ್ರದಿಂದ ಬಹಳ ದೂರವಿದ್ದ ಕಾರಣ ದೇಶದ ಸಾಮಾನ್ಯ ಜನರು ಕೊಲ್ಲಲ್ಪಡಲಿಲ್ಲ. ನಾನು ಹಿಂದೆ ಹೇಳಿದ ಹಾಗೆ ದ್ವಿತೀಯ ಮಹಾಯುದ್ಧದಲ್ಲಿ ಕೊಲ್ಲಲ್ಪಟ್ಟ ಸೈನಿಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಾಮಾನ್ಯ ನಾಗರಿಕರು ಕೊಲ್ಲಲ್ಪಟ್ಟರು. ನೀವು ಯೋಚಿಸಿರಿ; ನಿಷ್ಕಳಂಕರಾದ ಅಸಂಖ್ಯಾತ ಪುರುಷರೂ ಮಹಿಳೆಯರೂ ಮಕ್ಕಳೂ ಅವರು ಯಾವುದೇ ಅಪರಾಧ ಮಾಡಿರಲಿಲ್ಲವಾದರೂ ಕೊಲ್ಲಲ್ಪಟ್ಟರು. ಈ ಕಾರಣದಿಂದ ಯುದ್ಧ ಪೀಡಿತ ದೇಶಗಳಲ್ಲಿ ಯುದ್ಧದ ಬಗ್ಗೆ ಜನರಲ್ಲಿ ದ್ವೇಷವು ಬೇರೂರಿರುತ್ತದೆ. ಒಂದು ದೇಶವು ಆಕ್ರಮಿಸಲ್ಪಟ್ಟರೆ ಆ ದೇಶವನ್ನು ಪ್ರೀತಿಸುವ ನಾಗರಿಕನು ತನ್ನ ದೇಶವನ್ನು ಪ್ರತಿರೋಧಿಸಲು ಮತ್ತು ಶತ್ರುಗಳಿಂದ ರಕ್ಷಿಸಲು ತ್ಯಾಗಗಳನ್ನು ಮಾಡಬೇಕಾದದ್ದು ಕಡ್ಡಾಯ ಕರ್ತವ್ಯವಾಗಿದೆ. ಆದರೆ ಸಂಘರ್ಷವು ಶಾಂತಿಯುತವಾಗಿ ಸಂಧಾನ ಮಾತುಕತೆ ಮತ್ತು ರಾಜತಂತ್ರದಿಂದ ಪರಿಹರಿಸಲ್ಪಡಲು ಸಾಧ್ಯವಿದ್ದರೆ ಅನಾವಶ್ಯಕವಾಗಿ ಮೃತ್ಯುವನ್ನೂ ಕೊಲ್ಲುವುದನ್ನೂ ಆಮಂತ್ರಿಸಬಾರದು. ಹಿಂದಿನ ಕಾಲದಲ್ಲಿ ಯುದ್ಧ ನಡೆದರೆ ಹೆಚ್ಚಾಗಿ ಸೈನಿಕರೇ ಕೊಲ್ಲಲ್ಪಡುತ್ತಿದ್ದರು. ನಾಗರಿಕರು ಬಹಳ ವಿರಳವಾಗಿ ಹತರಾಗುತ್ತಿದ್ದರು. ಇಂದಿನ ಕಾಲದ ಯುದ್ಧಗಳಲ್ಲಿ ಬಾಂಬ್ ದಾಳಿ, ವಿಷವಾಯು ಪ್ರಯೋಗ ಮತ್ತು ರಾಸಾಯನಿಕಗಳ ಬಳಕೆ ಮಾಡಲ್ಪಡುತ್ತಿದೆ. ಈ ಕಾರಣದಿಂದ ಇಂದಿನ ಕಾಲದ ಯುದ್ಧಗಳು ಹಿಂದಿನ ಕಾಲದವುಗಳಿಗಿಂತ ಸಂಪೂರ್ಣವಾಗಿ ವಿಭಿನ್ನವಾಗಿವೆ. ಇಂದಿನ ಯುದ್ಧಗಳು ಮಾನವರನ್ನೆಲ್ಲ ಭೂಲೋಕದಿಂದ ಅಳಿಸಿಬಿಡಲು ಶಕ್ತವಾಗಿವೆ. ಈ ಸಂದರ್ಭದಲ್ಲಿ, ಲೋಕದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಪವಿತ್ರ ಖುರ್‌ಆನಿನ ಒಂದು ಸುಂದರ ಉಪದೇಶವನ್ನು ಉಲ್ಲೇಖಿಸಲು ನಾನು ಬಯಸುತ್ತೇನೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

> ಒಳಿತು ಮತ್ತು ಕೆಡುಕು ಸಮಾನವಲ್ಲ. ಅತಿ ಉತ್ತಮವಾದ ಒಳಿತಿನ ಮೂಲಕ ನೀನು ಕೆಡುಕನ್ನು ತಡೆ. ಆಗ ನಿನ್ನ ಮತ್ತು ಅವನ ಮಧ್ಯೆ ಇರುವ ಶತ್ರುತ್ವ ನೀಗಿ ಅವನು ನಿನ್ನ ಆಪ್ತ ಮಿತ್ರನಾಗುತ್ತಾನೆ. (41:35)

ಪವಿತ್ರ ಖುರ್‌ಆನ್ ಹೀಗೆ ಉಪದೇಶಿಸುತ್ತದೆ: ಹಗೆತನ ಮತ್ತು ದ್ವೇಷವನ್ನು ನಿವಾರಿಸಲು ಚರ್ಚೆ ನಡೆಸಬೇಕು. ದಯೆಯಿಂದಲೂ ವಿವೇಕಪೂರ್ಣವಾಗಿಯೂ ಯಾರೊಂದಿಗಾದರೂ ಮಾತನಾಡಿದರೆ, ಅದರಿಂದ ಉತ್ತಮ ಪರಿಣಾಮ ಉಂಟಾಗುವುದು; ದ್ವೇಷಭರಿತರಾದವರ ದ್ವೇಷವು ತೊಲಗಿ ಹೋಗುವುದು.

ಇಂದಿನ ಕಾಲದಲ್ಲಿ ಜೀವಿಸುವ ನಾವು ಅತ್ಯಂತ ಪ್ರಗತಿ ಗಳಿಸಿದವರೆಂದೂ ಸುಸಂಸ್ಕೃತರೆಂದೂ ಅಭಿಮಾನಿಸುತ್ತೇವೆ. ನಾವು ಅನೇಕ ಅಂತರ್‍ರಾಷ್ಟ್ರೀಯ ನೆರವು ನೀಡುವ ಸಂಸ್ಥೆಗಳನ್ನು ಸ್ಥಾಪಿಸಿ ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದ್ದೇವೆ ಮತ್ತು ಮಾತೆಯರಿಗೆ ಆರೋಗ್ಯ ಸೇವೆ ನೀಡುತ್ತಿದ್ದೇವೆ. ಇವುಗಳಲ್ಲದೆ ಬೇರೆ ಅಸಂಖ್ಯಾತ ಉದಾರ ಸೇವೆಗಳನ್ನು ನೀಡುವ ಸಂಸ್ಥೆಗಳಿದ್ದು ಅವು ಮಾನವರ ಹಿತಕ್ಕೋಸ್ಕರ ಕರುಣೆಯಿಂದ ಸ್ಥಾಪಿತವಾಗಿವೆ. ಮಾನವರ ಹಿತಕ್ಕೋಸ್ಕರ ಇವುಗಳನ್ನೆಲ್ಲ ಮಾಡಿರುವ ನಾವು ಈ ಕಾಲದ ತುರ್ತು ಆವಶ್ಯಕತೆ ಬಗ್ಗೆ ಕಾಳಜಿ ವಹಿಸಬೇಕು; ನಮ್ಮನ್ನೂ ಇತರರನ್ನೂ ಯುದ್ಧಗಳ ಮಹಾ ವಿನಾಶಗಳಿಂದ ರಕ್ಷಿಸುವುದು ಹೇಗೆ ಎಂಬುದರ ಬಗ್ಗೆ ಚಿಂತಿಸಬೇಕು. ಅರುವತ್ತು ಎಪ್ಪತ್ತು ವರ್ಷಗಳ ಹಿಂದೆ ಇದ್ದುದಕ್ಕಿಂತ ಲೋಕವು ಈಗ ಹೆಚ್ಚು ಸಮೀಪವಾಗಿ ಪರಿಣಮಿಸಿದೆ. ಅರುವತ್ತು ಎಪ್ಪತ್ತು ವರ್ಷಗಳ ಹಿಂದೆ ನ್ಯೂಝಿಲೇಂಡ್ ಏಶಿಯಾದಿಂದಲೂ ಯುರೋಪಿನಿಂದಲೂ ಬಹಳ ದೂರವಿದ್ದ ಒಂದು ದೇಶವಾಗಿತ್ತು. ಈಗ ಅದು ಜಾಗತಿಕ ಸಮುದಾಯದಲ್ಲಿ ಸೇರಿರುವ ಒಂದು

ಅವಿಭಾಜ್ಯ ಭಾಗವಾಗಿದೆ. ಆದುದರಿಂದ ಒಂದು ಮಹಾಯುದ್ಧ ಪ್ರಾರಂಭಗೊಂಡರೆ ಯಾವ ದೇಶವೂ ಸುರಕ್ಷಿತವಾಗಿರಲಾರದು.

ನಿಮ್ಮ ನಾಯಕರೂ ನಿಮ್ಮ ರಾಜಕಾರಣಿಗಳೂ ನಿಮ್ಮ ದೇಶದ ರಕ್ಷಕರಾಗಿದ್ದಾರೆ. ದೇಶದ ಭದ್ರತೆ ಮತ್ತು ಪ್ರಗತಿಗೆ ಅವರು ಹೊಣೆಗಾರರಾಗಿದ್ದಾರೆ. ಅವರು ಯಾವಾಗಲೂ ಒಂದು ಮುಖ್ಯ ಅಂಶವನ್ನು ತಮ್ಮ ಮನಸ್ಸಿನಲ್ಲಿ ಇರಿಸುವುದು ಆವಶ್ಯಕವಾಗಿದೆ. ಸ್ಥಳೀಯವಾಗಿ ಪ್ರಾರಂಭವಾಗುವ ಯುದ್ಧಗಳು ವಿಸ್ತಾರಗೊಂಡು ವಿನಾಶವು ಎಲ್ಲ ಕಡೆಗಳಿಗೂ ವ್ಯಾಪಿಸುತ್ತದೆ. ಲೋಕದ ಮಹಾಶಕ್ತಿ ರಾಷ್ಟ್ರಗಳ ಸರಕಾರಗಳಿಗೆ ದೇವನು ಇತ್ತೀಚೆಗೆ ವಿವೇಕವನ್ನು ನೀಡಿದ್ದಕ್ಕೆ ನಾವು ಸರ್ವಶಕ್ತನಾದ ದೇವನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಯುದ್ಧವನ್ನು ತಡೆಗಟ್ಟಲು ಕೂಡಲೆ ಕ್ರಮ ಕೈಗೊಳ್ಳಬೇಕೆಂದು ಅವರು ನಿರ್ಧರಿಸಿದರು. ಇಲ್ಲದಿದ್ದರೆ ಮಹಾವಿನಾಶ ಸಂಭವಿಸುತ್ತಿತ್ತು. ರಷ್ಯದ ಅಧ್ಯಕ್ಷರು, ಇತರ ಶಕ್ತಿಶಾಲಿ ದೇಶಗಳು ಸಿರಿಯಾವನ್ನು ಆಕ್ರಮಿಸದಂತೆ ಬಹಳ ಯುಕ್ತತೆಯಿಂದ ತಡೆದರು. ಎಲ್ಲ ದೇಶಗಳನ್ನು ಅವು ದೊಡ್ಡದಾಗಿರಲೀ ಚಿಕ್ಕದಾಗಿರಲೀ ಅವುಗಳನ್ನೆಲ್ಲ ಸಮಾನವಾಗಿ ಕಾಣಬೇಕೆಂದು ಅವರು ಹೇಳಿದರು. ನ್ಯಾಯಪಾಲನೆ ಮಾಡದಿದ್ದರೆ ಮತ್ತು ಸಂಯುಕ್ತ ರಾಷ್ಟ್ರ ಸಂಘದ ಅನುಮತಿ ಇಲ್ಲದೆ ನೇರವಾಗಿ ಸ್ವತಂತ್ರವಾಗಿ ಕೆಲವು ದೇಶಗಳು ಯುದ್ಧ ಪ್ರಾರಂಭಿಸಿದರೆ ಸಂಯುಕ್ತ ರಾಷ್ಟ್ರ ಸಂಘವು ಲೀಗ್ ಆಫ್ ನೇಶನ್ಸ್‌ನ ಗತಿಯನ್ನು ಹೊಂದುವುದೆಂದು ಅವರು ಎಚ್ಚರಿಸಿದರು. ಅವರ ಈ ವಿಶ್ಲೇಷಣೆ ಸಂಪೂರ್ಣವಾಗಿ ಸರಿಯಾಗಿದೆ ಎಂದು ನಾನು ನಂಬುತ್ತೇನೆ. ಅವರ ಎಲ್ಲ ಧೋರಣೆಗಳನ್ನು ನಾನು ಅಂಗೀಕರಿಸುವುದಿಲ್ಲವಾದರೂ ಅವರ ವಿವೇಕಭರಿತ ಸಲಹೆಯನ್ನು ಅಂಗೀಕರಿಸಬೇಕು. ಅವರು ಒಂದು ಹೆಜ್ಜೆ ಮುಂದೆ ಹೋಗಿ ಭದ್ರತಾ ಮಂಡಳಿಯ ಐದು ಸ್ಥಿರ ಮಹಾಶಕ್ತಿ ದೇಶಗಳ ವೀಟೋ ಅಧಿಕಾರ ಕೊನೆಗೊಳಿಸಬೇಕೆಂದೂ ಎಲ್ಲ ದೇಶಗಳ ಮಧ್ಯೆ ನ್ಯಾಯ ಮತ್ತು ಸಮಾನತೆ ಸ್ಥಾಪಿಸಬೇಕೆಂದೂ ಹೇಳಬೇಕೆಂದು ನಾನು ಆಶಿಸುತ್ತೇನೆ.

ಕಳೆದ ವರ್ಷ ಅಮೇರಿಕದ ವಾಶಿಂಗ್ಟನ್ ಡಿ.ಸಿ. ಯ ಕ್ಯಾಪಿಟೋಲ್ ಹಿಲ್‌ನಲ್ಲಿ ಭಾಷಣ ಮಾಡುವ ಸಂದರ್ಭ ನನಗೆ ಲಭಿಸಿತು. ಅನೇಕ ಸೆನೆಟರ್‌ಗಳು, ಕಾಂಗ್ರೆಸ್ ಸಭೆಯ ಸದಸ್ಯರು, ಬುದ್ಧಿಶಾಲಿಗಳ ಕೂಟದ ಸದಸ್ಯರು, ಸಮಾಜದ ವಿವಿಧ ಕ್ಷೇತ್ರಗಳ ಇತರ ವಿದ್ಯಾಸಂಪನ್ನ ಗಣ್ಯರು ಭಾಗವಹಿಸಿದ್ದರು. ಎಲ್ಲ ಪಕ್ಷಗಳನ್ನೂ ಎಲ್ಲ ಜನರನ್ನೂ ಸಮಾನವಾಗಿ ಕಂಡು ಅವರೊಂದಿಗೆ ವರ್ತಿಸಿದರೆ ಮಾತ್ರ ನ್ಯಾಯಪಾಲನೆಯ ಕರ್ತವ್ಯ ಪೂರ್ಣಗೊಳ್ಳುವುದೆಂದು ನಾನು ಅವರೊಂದಿಗೆ ಸ್ಪಷ್ಟವಾಗಿ ಹೇಳಿದೆ. ನೀವು ದೊಡ್ಡ ಮತ್ತು ಚಿಕ್ಕ ದೇಶಗಳ ಮಧ್ಯೆ ತಾರತಮ್ಯತೆಯಿಂದ ವರ್ತಿಸುವುದಾದರೆ, ಶ್ರೀಮಂತ ಮತ್ತು ಬಡದೇಶಗಳೊಂದಿಗೆ ತಾರತಮ್ಯತೆಯಿಂದ ವರ್ತಿಸುವುದಾದರೆ, ನೀವು ವೀಟೋ ಅಧಿಕಾರವೆಂಬ ಅನ್ಯಾಯವನ್ನು ಮುಂದುವರಿಸುವುದಾದರೆ, ಲೋಕದಲ್ಲಿ ಅಶಾಂತಿಯೂ ಆತಂಕವೂ ವರ್ಧಿಸುವುವು. ಇದರ ಪರಿಣಾಮಗಳನ್ನು ನಾವು ಈಗಾಗಲೇ ಲೋಕದಲ್ಲಿ ಕಾಣುತ್ತಿದ್ದೇವೆ.


ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ನಾಯಕನೆಂಬ ನೆಲೆಯಲ್ಲಿ ನನಗೆ ಲೋಕದ ಗಮನವನ್ನು ಶಾಂತಿ ಸ್ಥಾಪನೆಯ ಕಡೆಗೆ ಹರಿಸುವ ಕರ್ತವ್ಯವಿದೆ. ಇಸ್ಲಾಮ್ ಎಂಬ ಪದದ ಅರ್ಥ ಶಾಂತಿ ಮತ್ತು ಭದ್ರತೆ ಎಂದಾಗಿದೆ. ಆದುದರಿಂದ ಶಾಂತಿ ಕಡೆಗೆ ಕರೆ ನೀಡುವುದು ನನ್ನ ಹೊಣೆಗಾರಿಕೆಯಾಗಿದೆ. ಕೆಲವು ಮುಸ್ಲಿಮ್ ದೇಶಗಳು ದ್ವೇಷಭರಿತ ತೀವ್ರವಾದವನ್ನು ಪ್ರೋತ್ಸಾಹಿಸುವುದಾದರೆ ಆ ಕಾರಣದಿಂದ ಇಸ್ಲಾಮ್ ಅಶಾಂತಿಯನ್ನೂ ಸಂಘರ್ಷವನ್ನೂ ಪ್ರೋತ್ಸಾಹಿಸುತ್ತದೆ ಎಂದು ನಿರ್ಧರಿಸಬಾರದು. ನಾನು ಈಗಾಗಲೇ ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನದಲ್ಲಿ ಶಾಂತಿ ಹೇಗೆ ಸ್ಥಾಪಿಸಬಹುದು ಎಂಬುದರ ಬಗ್ಗೆ ಮಾರ್ಗದರ್ಶನ ಇದೆ.

ಇಸ್ಲಾಮ್ ಧರ್ಮದ ಪ್ರವಾದಿ ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಯಾವಾಗಲೂ "ಸಲಾಮ್" ಎಂದು ಅಭಿವಂದಿಸಿ ಶಾಂತಿಯನ್ನು ಹರಡಲು ಹೇಳಿರುವರು. ಅವರು ಮುಸ್ಲಿಮೇತರರಾದ ಯಹೂದಿಯರಿಗೂ ಕ್ರೈಸ್ತರಿಗೂ ಇತರ ಧರ್ಮದವರಿಗೂ "ಸಲಾಮ್" (ಶಾಂತಿ) ಎಂದು ಹೇಳಿ ಅಭಿವಂದಿಸುತ್ತಿದ್ದರು. ಅವರು ಹೀಗೆ ವರ್ತಿಸಿದುದು ಎಲ್ಲ ಮನುಷ್ಯರು ಏಕದೇವನ ಸೃಷ್ಟಿಗಳೆಂದು ಮನವರಿಕೆ ಮಾಡಿಕೊಂಡುದರಿಂದಾಗಿದೆ. ದೇವನ ಒಂದು ಗುಣನಾಮ "ಅಸ್ಸಲಾಮ್" (ಶಾಂತಿಯ ಉದ್ಭವಸ್ಥಾನ) ಎಂದಾಗಿದೆ. ದೇವನು ಎಲ್ಲರಿಗೂ ಶಾಂತಿಯನ್ನೂ ಭದ್ರತೆಯನ್ನೂ ಬಯಸುತ್ತಾನೆ.

ಶಾಂತಿಗೆ ಸಂಬಂಧಿಸಿ ಕೆಲವು ಅಂಶಗಳನ್ನು ಇಸ್ಲಾಮ್ ಧರ್ಮ ತತ್ವಗಳಿಂದ ನಾನು ನಿಮಗೆ ವಿವರಿಸಿದೆನು. ಆದರೆ ಸಮಯದ ಕೊರತೆಯ ಕಾರಣ ನಾನು ಕೆಲವು ಅಂಶಗಳನ್ನು ಮಾತ್ರ ವಿಶದೀಕರಿಸಿದೆನು. ಇಸ್ಲಾಮ್ ಎಲ್ಲ ಜನರಿಗೂ ಶಾಂತಿ ಮತ್ತು ಭದ್ರತೆ ಒದಗಿಸುವ ಬಗ್ಗೆ ಅನೇಕ ಉಪದೇಶಗಳನ್ನೂ ಆಜ್ಞೆಗಳನ್ನೂ ನೀಡಿದೆ. ನ್ಯಾಯಪಾಲನೆಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

> ಓ ವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ. (5:9)

ಈ ವಚನದಲ್ಲಿ ಪವಿತ್ರ ಖುರ್‌ಆನ್ ನ್ಯಾಯಪಾಲನೆಯ



ಹಝ್ರತ್ ಖಲೀಫ, ಕನ್‌ವಲ್‌ಜಿತ್ ಬಕ್ಷಿ (MP) ಮತ್ತಿತರರು ನ್ಯೂಝಿಲೇಂಡ್ ಪಾರ್ಲಿಮೆಂಟ್‌ನ ಮುಂದೆ

ಅತ್ಯಂತ ಉನ್ನತ ಮಟ್ಟದ ಬಗ್ಗೆ ಆಜ್ಞಾಪಿಸಿದೆ. ತಮ್ಮನ್ನು ಮುಸ್ಲಿಮರೆಂದು ಹೇಳಿಕೊಳ್ಳುವವರಿಗೆ ಭೀಕರ ಕ್ರೂರಕೃತ್ಯಗಳನ್ನು ಮಾಡಲು ಈ ಆಜ್ಞೆ ಯಾವ ಅವಕಾಶವನ್ನೂ ನೀಡುವುದಿಲ್ಲ. ಇಸ್ಲಾಮ್ ಹಿಂಸಾಚಾರಿ ತೀವ್ರ ಧರ್ಮವೆಂದು ಚಿತ್ರಿಸುವವರಿಗೆ ಸಹ ಯಾವುದೇ ಅವಕಾಶ ಈ ವಚನ ನೀಡುವುದಿಲ್ಲ. ಪವಿತ್ರ ಖುರ್‌ಆನ್ ಅತ್ಯಂತ ಉನ್ನತ ಮಟ್ಟದ ನ್ಯಾಯಪಾಲನೆ ಮತ್ತು ವರ್ತನೆಯನ್ನು ಪ್ರತಿಪಾದಿಸಿದೆ. ಅದು ಹೀಗೆ ಹೇಳಿದೆ:

ಓ ವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಅವನು ಧನಿಕನಾಗಿರಲಿ ಯಾ ದರಿದ್ರನಾಗಿರಲಿ, ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಬಯಸುತ್ತಾನೆ. ಆದುದರಿಂದ ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ. ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗ ಪಡಿಸದೆ) ನುಣುಚಿಕೊಂಡರೆ (ತಿಳಿದುಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದವನಾಗಿದ್ದಾನೆ. (4:136)

ಇಂತಹ ತತ್ವಾಧಾರಿತ ಶ್ರೇಷ್ಠ ಮಟ್ಟದ ನ್ಯಾಯಪಾಲನೆಯಿಂದ ಮಾತ್ರ ತಳಮಟ್ಟದಿಂದ ಅಂತರ್ರಾಷ್ಟ್ರೀಯ ಮಟ್ಟದ ತನಕ ಶಾಂತಿ ಸ್ಥಾಪನೆ ಮಾಡಲು ಸಾಧ್ಯವಾಗುವುದು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಈ ತತ್ವವನ್ನು ಅನುಸರಿಸಿ ಎಲ್ಲ ಕಡೆಗೂ ಅದನ್ನು ವ್ಯಾಪಿಸಿದರೆಂದು ಚರಿತ್ರೆ ಸಾಕ್ಷ್ಯ ವಹಿಸುತ್ತದೆ. ಈ ಕಾಲಘಟ್ಟದಲ್ಲಿ ಹಝ್ರತ್ ಪೈಗಂಬರರ(ಸ) ನೈಜ ಶಿಷ್ಯನಾದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪಕ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರು ಈ ತತ್ವಗಳನ್ನು ಪ್ರಚಾರಗೊಳಿಸಿದರು ಮತ್ತು ತನ್ನ ಅನುಯಾಯಿಗಳು ಈ ತತ್ವಗಳನ್ನು ಪ್ರಚಾರಗೊಳಿಸಿ ಶಾಂತಿಯನ್ನು ಹರಡಲು ಆದೇಶಿಸಿದರು. ಸೃಷ್ಟಿಕರ್ತನ ಹಕ್ಕುಗಳನ್ನೂ ಅವನ ಸೃಷ್ಟಿಗಳ ಹಕ್ಕುಗಳನ್ನೂ ಈಡೇರಿಸುವ ಬಗ್ಗೆ ಲೋಕದ ಜನರಿಗೆ ಮನವರಿಕೆ ಮಾಡಿಕೊಡಲು ತನ್ನ ಅನುಯಾಯಿಗಳಿಗೆ ಅವರು ಉಪದೇಶಿಸಿದರು. ಇದೇ ಕಾರಣದಿಂದ ಅಹ್ಮದಿಯಾ ಜಮಾಅತ್ ಅಲ್ಲಾಹನ ಹಕ್ಕುಗಳನ್ನೂ ಅವನ ಸೃಷ್ಟಿಗಳ ಹಕ್ಕುಗಳನ್ನೂ ಈಡೇರಿಸುವ ಬಗ್ಗೆ ಮತ್ತು ನ್ಯಾಯಪಾಲನೆಯ ಉನ್ನತ ಮಟ್ಟವನ್ನು ಸ್ಥಾಪಿಸಲು ಒತ್ತಿ ಹೇಳುತ್ತಿದೆ.

ನಮ್ಮ ಪೈಕಿ ಪ್ರತಿಯೊಬ್ಬನು ನಮ್ಮ ಧರ್ಮ ಮತ್ತು ವಿಶ್ವಾಸ ಯಾವುದೆಂದು ಪರಿಗಣಿಸದೆ ಪರಸ್ಪರ ಒಬ್ಬರಿನ್ನೊಬ್ಬನ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಲಕ್ಷ್ಯ ನೀಡುವವರಾಗಲಿ ಮತ್ತು ಆ ಮೂಲಕ ಲೋಕವು ಶಾಂತಿ ಮತ್ತು ಸೌಹಾರ್ದದ ಧಾಮವಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತಾ, ನೀವು ನನ್ನನ್ನು ಆಮಂತ್ರಿಸಿದುದಕ್ಕೋಸ್ಕರ ಮತ್ತು ನನ್ನ ಮಾತುಗಳನ್ನು ಆಲಿಸಿದುದಕ್ಕೋಸ್ಕರ ಇನ್ನೊಮ್ಮೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

★

# ಉತ್ತಮ ಸಮುದಾಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಲಂಡನ್‌ನ 'ಬೈತುಲ್ ಫುತೂಹ್' ಮಸೀದಿಯಲ್ಲಿ 31–10–2014 ರಂದು ನೀಡಿದ ಜುಮುಅ ಖುತ್‌ಬದ ಸಾರಾಂಶ)

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: **"ಕುನ್‌ತುಮ್ ಖೈರ ಉಮ್ಮತಿನ್ ಉಖ್‌ರಿಜತ್ ಲಿನ್ನಾಸ್"** (ನೀವು ಮನುಷ್ಯ ವರ್ಗದ ಒಳಿತಿಗಾಗಿ ಸೃಷ್ಟಿಸಲ್ಪಟ್ಟ ಅತಿ ಉತ್ಕೃಷ್ಟ ಸಮುದಾಯವಾಗಿದ್ದೀರಿ.) ಮುಸ್ಲಿಮರ ಕೆಲಸಗಳಲ್ಲಿ ಅತ್ಯಂತ ಮಹತ್ವಪೂರ್ಣವಾದುದು ಲೋಕವು ಅವರಿಂದ ಪ್ರಯೋಜನವನ್ನು ಪಡೆಯಬೇಕು ಎಂಬುದಾಗಿದೆ. ಮುಸ್ಲಿಮರಿಂದ ಲೋಕಕ್ಕೆ ಒಳಿತು ತಲಪಬೇಕು, ಅವರಿಂದ ಯಾವ ಕೆಡುಕಾಗಲಿ ಲೋಕ ಅನುಭವಿಸಬಾರದು. ಆದರೆ ನಾವು ಈಗ ಕಾಣುತ್ತಿರುವುದೇನೆಂದರೆ, ಮುಸ್ಲಿಮ್ ಸರಕಾರಗಳು, ಮುಸ್ಲಿಮ್ ಗುಂಪುಗಳು ಮತ್ತು ಸಂಸ್ಥೆಗಳು ಲೋಕದಲ್ಲಿ ಎಂತಹ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದಾರೆಂದರೆ, ಲೋಕವು ಇಸ್ಲಾಮ್ ಎಂಬ ಹೆಸರಿನಿಂದೆ ಭಯಪಡುತ್ತಾ ಇದೆ. ಮುಸ್ಲಿಮರ ಬಗ್ಗೆ ಅದು ಭಯಭೀತವಾಗಿದೆ. ಈ ರೀತಿ ಭಯಪಡುತ್ತಾ ಇರುವಾಗ ಮುಸ್ಲಿಮರ ಮಾತುಗಳನ್ನು ಯಾರು ತಾನೆ ಆಲಿಸುವರು? ಮುಸ್ಲಿಮರಿಂದ ತಮಗೆ ಒಳಿತು ಲಭಿಸುವುದು ಎಂದು ಹೇಗೆ ತಾನೆ ಅವರು ಯೋಚಿಸುವರು? ಯಾರು ತಮ್ಮ ಸ್ವಂತ ಜನರ ಕತ್ತುಗಳನ್ನೇ ಕತ್ತರಿಸುತ್ತಾ ಇದ್ದಾರೆಯೋ, ನಿರಪರಾಧಿಗಳಾದ ಮಕ್ಕಳನ್ನೂ ಮಹಿಳೆಯರನ್ನೂ ವೃದ್ಧರನ್ನೂ ಯಾವುದೇ ವ್ಯತ್ಯಾಸವಿಲ್ಲದೆ ಕೊಲ್ಲುತ್ತಿದ್ದಾರೆಯೋ, ಯಾವುದೇ ಕಾರಣವಿಲ್ಲದೆ ಅನ್ಯಾಯದಿಂದ, ತಮ್ಮ ಅಭಿಪ್ರಾಯಗಳನ್ನು ಅನುಮೋದಿಸದವರನ್ನು ತಮ್ಮ ಗುಲಾಮರನ್ನಾಗಿ ಮಾಡುತ್ತಿದ್ದಾರೆಯೋ ಇಂತಹ ಜನರು ಮುಸ್ಲಿಮೇತರರ ಹಿತೈಷಿಗಳಾಗುವರೆಂದು ಹೇಗೆ ತಾನೆ ಪ್ರತೀಕ್ಷೆ ಮಾಡಲು ಸಾಧ್ಯ?

ಈ ಜನರು ಮಾಡುವ ಕೆಲಸಗಳ ಪರಿಣಾಮವಾಗಿ ಲೋಕವು ಮುಸ್ಲಿಮರ ಬಗ್ಗೆ ಭಯವನ್ನು ಹೊಂದಿದೆ. ಅಹ್ಮದಿಯರಾದ ನಮಗೆ ನಾಚಿಕೆಗೇಡಿನ ವಿಷಯವೂ ನಮಗೆ ದುಃಖದಾಯಕವೂ ಆಗಿರುವುದೇನೆಂದರೆ **"ರಹ್ಮತನ್ ಲಿಲ್‌ಆಲಮೀನ್"** ಆಗಿರುವ ನಮ್ಮ ಪ್ರಿಯ ಪೈಗಂಬರರಾದ ಹಝ್ರತ್ ಮುಹಮ್ಮದ್‌ರೊಂದಿಗೆ(ಸ) ತಾವು ಸಂಬಂಧಿಸಿದವರೆಂದು ಹೇಳಿಕೊಂಡು ಈ ದುರ್ಜನರು ದುಷ್ಕೃತ್ಯಗಳನ್ನು ಮಾಡುತ್ತಿದ್ದಾರೆ. ಈ ಜನರು ಇಸ್ಲಾಮ್ ಧರ್ಮಕ್ಕೆ ಅಪಕೀರ್ತಿ ಉಂಟುಮಾಡುತ್ತಿದ್ದಾರೆ. ಮಾತ್ರವಲ್ಲ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ನಡೆವಳಿಕೆಗಳನ್ನು ಸಹ ತಪ್ಪಾದ ರೀತಿಯಲ್ಲಿ ಲೋಕದ ಮುಂದೆ ಇರಿಸುವವರಾಗಿದ್ದಾರೆ. ಆದರೆ ಅಹ್ಮದಿಯರಾದ ನಾವು ಈ ಜನರ ಕೃತ್ಯಗಳಿಂದ ನಿರಾಶರಾಗುವುದಿಲ್ಲ. ಮುಸ್ಲಿಮೇತರರೊಡನೆ ಮಾತನಾಡುವ ಸಂದರ್ಭ ಲಭಿಸುವಾಗಲೆಲ್ಲ ನಾನು ಹೀಗೆ ಹೇಳುತ್ತೇನೆ: ಮುಸ್ಲಿಮರು ಈಗಿನ ಕಾಲದಲ್ಲಿ ಮಾಡುವ ಕುಕೃತ್ಯಗಳು ಇಸ್ಲಾಮ್ ಧರ್ಮ ಸತ್ಯ ಧರ್ಮ ಎನ್ನುವುದಕ್ಕೆ ಸಾಕ್ಷ್ಯಗಳಾಗಿವೆ. ಏಕೆಂದರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಈ ರೀತಿಯೆಲ್ಲ ಸಂಭವಿಸಲಿದೆಯೆಂದು ಮೊದಲೇ ಭವಿಷ್ಯ ನುಡಿದಿದ್ದರು. ಮುಂದೆ ಒಂದು ಕಾಲಘಟ್ಟದಲ್ಲಿ ಮುಸ್ಲಿಮರ ಸ್ಥಿತಿ ಹೀಗೆ ಆಗುವುದು ಎಂದು ಸ್ಪಷ್ಟವಾಗಿ ಭವಿಷ್ಯ ನುಡಿಯಲಾಗಿದೆ. ಮುಸ್ಲಿಮರ ಧಾರ್ಮಿಕ ಅವನತಿ ಯಾವಾಗ ಪ್ರಾರಂಭವಾಗುವುದು, ಎಷ್ಟುಕಾಲ ಈ ಅಂಧಕಾರದ ಪರಿಸ್ಥಿತಿ ಮುಂದುವರಿಯುವುದು, ಅನಂತರ ವಾಗ್ದತ್ತ ಮಸೀಹರು ಆಗಮಿಸುವರು ಎಂದೆಲ್ಲ ಭವಿಷ್ಯವಾಣಿಗಳಲ್ಲಿ ವಿವರಿಸಲಾಗಿದೆ. ವಾಗ್ದತ್ತ ಮಸೀಹರು ಇಸ್ಲಾಮಿನ ಸುಂದರವೂ ವಾಸ್ತವಿಕವೂ ಆಗಿರುವ ಉಪದೇಶಗಳನ್ನು ಲೋಕದಲ್ಲಿ ಜಾರಿಗೊಳಿಸುವರೆಂದೂ ಹೇಳಲಾಗಿದೆ. ಈ ಉಪದೇಶಗಳು ಪವಿತ್ರ ಖುರ್‌ಆನಿನಲ್ಲಿ ತನ್ನ ಮೂಲರೂಪದಲ್ಲಿ ಈಗಲೂ ಇವೆ. ಈ ಉಪದೇಶಗಳನ್ನು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅಕ್ಷರಶಃ ಅನುಸರಿಸಿರುವುದು ಅವರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ. ಈ ಬಿಗಡಾಯಿಸಿದ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿಗಳ ಪ್ರಕಾರ ವಾಗ್ದತ್ತ ಮಸೀಹರೂ ವಾಗ್ದತ್ತ ಮಹ್‌ದಿಯೂ ಆಗಿ ಒಬ್ಬ ಮಹಾನುಭಾವರು ಆಗಮಿಸಿದರೆಂದು ಅಹ್ಮದಿಯರಾದ ನಾವು ನಂಬುತ್ತೇವೆ. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಾಗ್ದತ್ತ ಮಹ್‌ದೀ ಮಸೀಹರ ಬಗ್ಗೆ ವಿವರಿಸಿದ ಭೂಮಿ ಮತ್ತು ಆಕಾಶದಲ್ಲಿ ಕಾಣಿಸಿಕೊಳ್ಳುವ ದೃಷ್ಟಾಂತಗಳು ಈಡೇರಿವೆ. ಈ ಮಹ್‌ದೀ ಮಸೀಹರು ನಮಗೆ ಇಸ್ಲಾಮ್ ಧರ್ಮದ ಸುಂದರ ಉಪದೇಶಗಳನ್ನು ಕಲಿಸಿದರು. ನಮ್ಮ ಹೃದಯಗಳನ್ನು ಬೆಳಗಿಸಿದರು. ಇಂದು ಅಹ್ಮದಿಯಾ ಜಮಾಅತ್ ಇಸ್ಲಾಮ್ ಧರ್ಮದ ಆ ಸುಂದರ ತತ್ವಗಳನ್ನು ಅನುಷ್ಠಾನಕ್ಕೆ ತರುತ್ತಾ ಇದೆ.

ನಾನು ಮೇಲೆ ವಿವರಿಸಿದಂತೆ ಮುಸ್ಲಿಮೇತರರ ಮುಂದೆ ಇದನ್ನು ಹೇಳುವಾಗ ಇಸ್ಲಾಮ್ ಧರ್ಮ ತಪ್ಪು ಧರ್ಮ ಅಲ್ಲವೆಂದೂ ಇಸ್ಲಾಮಿನ ಹೆಸರಲ್ಲಿ ಕೆಟ್ಟ ಕೆಲಸ ಮಾಡುವವರ ಕೃತ್ಯಗಳು ತಪ್ಪೆಂದೂ ಅವರಿಗೆ ಮನವರಿಕೆ ಆಗುತ್ತದೆ. ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾದುದೇನೆಂದರೆ ಲೋಕವನ್ನು ಒಳಿತಿನ ಕಡೆಗೆ ಕರೆಯುವುದು ಮತ್ತು ಪ್ರತಿಯೊಬ್ಬ ಮನುಷ್ಯನಿಗೆ ಒಳಿತನ್ನು ಬಯಸುವುದು ಪ್ರತಿಯೊಬ್ಬ ಅಹ್ಮದಿಗೆ ಕಡ್ಡಾಯವಾಗಿದೆ. ಏಕೆಂದರೆ ಅಲ್ಲಾಹನು ನಮಗೆ ಅನುಗ್ರಹವನ್ನು ದಯಪಾಲಿಸಿ ನಾವು ಹಝ್ರತ್ ಮಸೀಹ್ ಮೌಊದ್‌ರನ್ನು[ಅ] ಸ್ವೀಕರಿಸುವ ಭಾಗ್ಯವನ್ನು ನಮಗೆ ನೀಡಿದ್ದಾನೆ. ಶಾಂತಿಯಿಂದ ವಾಸಿಸುತ್ತಾ ಇರುವುದು ಮಾತ್ರ ನಮ್ಮ ಕೆಲಸವಲ್ಲ. ಕೆಟ್ಟ ಕೆಲಸಗಳಿಂದ ನಮ್ಮನ್ನು ಸ್ವಯಂ ತಡೆದು ಕೊಳ್ಳುವುದು ಮಾತ್ರ ನಮ್ಮ ಕೆಲಸವಲ್ಲ, ಕಲಹಗಳಿಂದ ದೂರ ಸರಿದು ನಿಲ್ಲುವುದು ಮಾತ್ರ ನಮ್ಮ ಕೆಲಸವಲ್ಲ. ಬದಲಾಗಿ, ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಮತ್ತು ಅದಕ್ಕೋಸ್ಕರ ಬಹಳವಾಗಿ ಪ್ರಯತ್ನ ಮಾಡುವುದು ಸಹ ನಮ್ಮ ಕೆಲಸವಾಗಿದೆ. ಲೋಕವನ್ನು ಗಲಭೆಗೊಂದಲಗಳಿಂದ ದೂರಸರಿಸಿ ಅದನ್ನು ರಕ್ಷಿಸಲು ಪ್ರಯತ್ನ ಮಾಡುವುದು ಸಹ ನಮ್ಮ ಕೆಲಸವಾಗಿದೆ. ಏಕೆಂದರೆ ಈ ಕೆಲಸ ವಾಗ್ದತ್ತ ಮಸೀಹರ ಕೆಲಸಗಳಲ್ಲಿ ಸೇರಿದುದಾಗಿದೆ. ಇಸ್ಲಾಮ್ ಧರ್ಮ ತತ್ವಗಳಿಗೆ ಅನುಸಾರವಾಗಿ ಲೋಕದಲ್ಲಿ ಹಿತಕರವಾದ ಉತ್ತಮ ಕೆಲಸಗಳನ್ನು ಪುನರಾರಂಭಿಸಲು ವಾಗ್ದತ್ತ ಮಸೀಹರನ್ನು ಕಳುಹಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್‌ರಿಗೆ ಬೈಅತ್ ಮಾಡಿದ ನಾವು ಅಲ್ಲಾಹನ ಆಜ್ಞೆ ಪ್ರಕಾರ ಕಾರ್ಯನಿರತರಾಗಬೇಕು. ನಾವು ಲೋಕಕ್ಕೆ ಹಿತವನ್ನು ಉಂಟುಮಾಡುವ ಮತ್ತು ಕೆಡುಕುಗಳನ್ನು ಲೋಕದಿಂದ ದೂರ ಸರಿಸುವ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಮಾಡಲು ಪ್ರಯತ್ನಿಸಬೇಕು. ನಾವು ಮುಸ್ಲಿಮರಿಗೆ ಒಳಿತನ್ನು ಹಾರೈಸುತ್ತೇವೆ. ಅವರಿಗೆ ಒಳ್ಳೆಯದಾಗಲಿ ಎಂದು ಆಶಿಸುತ್ತೇವೆ. ಅದೇ ರೀತಿ ನಾವು ಮುಸ್ಲಿಮೇತರರಿಗೋಸ್ಕರ ಸಹ ಹಿತವನ್ನು ಬಯಸುವವರಾಗಿದ್ದೇವೆ. ಅವರಿಗೆ ಒಳಿತನ್ನು ಕೋರುತ್ತೇವೆ. ನಾವು ಕ್ರೈಸ್ತರಿಗೂ ಯಹೂದಿಯರಿಗೂ ಹಿಂದುಗಳಿಗೂ ಇತರ ಧರ್ಮದ ಜನರಿಗೂ ಹಿತವನ್ನು ಆಶಿಸುತ್ತೇವೆ. ನಾವು ನಾಸ್ತಿಕರಾದ ಜನರಿಗೂ ಹಿತವನ್ನು ಬಯಸುವವರಾಗಿದ್ದೇವೆ. ಏಕೆಂದರೆ ನಾವು ಅವರಿಗೆಲ್ಲ ಅಲ್ಲಾಹನ ಸಾಮೀಪ್ಯವನ್ನು ಗಳಿಸುವ ಮಾರ್ಗವನ್ನು ತೋರಿಸಬೇಕಾಗಿದೆ. ಅಪರಾಧಿಗಳಾದ ಜನರಿಗೂ ಕಳ್ಳರಿಗೂ ಡಕಾಯಿತಿಗಾರರಿಗೂ ದೌರ್ಜನ್ಯಗಾರರಿಗೂ ನಾವು ಹಿತವನ್ನು ಕೋರುತ್ತೇವೆ. ಏಕೆಂದರೆ ಈ ಜನರೆಲ್ಲ ಸಕಲ ಲೋಕಗಳ ಪ್ರಭುವಿನ ದಾಸರಾಗಿದ್ದಾರೆ. ಅಲ್ಲಾಹನ ಎಲ್ಲ ದಾಸರಿಗೂ ನಾವು ಹಿತವನ್ನು ಕೋರುತ್ತೇವೆ. ಒಳ್ಳೆಯ ಮಾರ್ಗದಲ್ಲಿ ನಡೆಯಲು ಮತ್ತು ಕೆಟ್ಟ ಕೆಲಸಗಳಿಂದ ದೂರವಿರಲು ನಾವು ಅವರಿಗೆ ಮಾರ್ಗದರ್ಶನ ನೀಡುತ್ತೇವೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಸತ್ಯವಿಶ್ವಾಸಿಗಳ ಬಗ್ಗೆ "ಉಖ್‌ರಿಜತ್ ಲಿನ್ನಾಸ್" ಜನರ ಒಳಿತಿಗೋಸ್ಕರ ಮತ್ತು ಅವರಿಗೆ ಲಾಭದಾಯಕವಾಗಲು ಎಂದು ಹೇಳಿ ನಮ್ಮ ಕಾರ್ಯಕ್ಷೇತ್ರವನ್ನು ಬಹಳ ವಿಶಾಲಗೊಳಿಸಿದ್ದಾನೆ. ಲೋಕದ ಒಳಿತಿಗೋಸ್ಕರ, ಜನರಿಗೆ ಹಿತವನ್ನುಂಟುಮಾಡಲು ಮತ್ತು ಅವರನ್ನು ದೇವನ ಬಳಿಗೆ ತಲಪಲು ನಾವು ಸರಿಯಾದ ಮಾರ್ಗ ತೋರಿಸಬೇಕಾಗಿದೆ. ದೇವನ ಆಜ್ಞೆಗಳ ಪ್ರಕಾರ ವರ್ತಿಸಬೇಕೆಂದು ಅವರಿಗೆ ಉಪದೇಶಿಸಬೇಕಾಗಿದೆ. ಈ ಲೋಕದ ಜೀವಿತ ಒಂದು ದಿನ ಕೊನೆಗೊಳ್ಳಲಿದೆ ಎಂದೂ ಅನಂತರ ಪ್ರತಿಯೊಬ್ಬನೂ ತನ್ನ ಇಹಲೋಕದ ಕೆಲಸಗಳ ಪ್ರಕಾರ ಶಿಕ್ಷೆ ರಕ್ಷೆಗಳನ್ನು ಗಳಿಸುವನೆಂದೂ ಅವರಿಗೆ ತಿಳಿಸಬೇಕಾಗಿದೆ. ನೀವು ದೇವನೊಂದಿಗೆ ಸಂಬಂಧ ಸ್ಥಾಪಿಸಿರಿ, ನಿಮ್ಮ ಅಂತಿಮ ಗತಿ ಉತ್ತಮವಾಗಲಿ ಎಂದು ನಾವು ಜನರಿಗೆ ಉಪದೇಶಿಸಬೇಕಾಗಿದೆ.

ಆದರೆ ನಾವು ನಮ್ಮದೇ ಅಂತಿಮ ಗತಿಯ ಬಗ್ಗೆ ಸ್ವತಃ ಲಕ್ಷ್ಯ ನೀಡುವವರಾಗದೆ ಅನ್ಯರಿಗೆ ಉಪದೇಶಿಸಲು ಸಮರ್ಥರಾಗಲಾರೆವು. ಇದು ಬಹಳ ದೊಡ್ಡ ಕೆಲಸವಾಗಿದೆ. ನಾವು ಇದರ ಬಗ್ಗೆ ಚಿಂತಿಸಿ ನಮ್ಮನ್ನು ಸ್ವತಃ ಪರಿಶೀಲಿಸಿ ಈ ಕೆಲಸ ಈಡೇರಿಸಬೇಕಾಗಿದೆ. ಈ ಕೆಲಸ ಮಾಡುವಾಗ ನಾವು ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ನಾವು ಕಷ್ಟಗಳನ್ನು ಎದುರಿಸುತ್ತೇವೆ. ಅಹ್ಮದಿಯಾ ಜಮಾಅತಿನ ಚರಿತ್ರೆ ನಮಗೆ ತಿಳಿಸಿಕೊಡುವುದು ಏನೆಂದರೆ ನಾವು ಪ್ರತಿಯೊಂದು ಹೆಜ್ಜೆಯಲ್ಲೂ ಲೋಕದ ಜನರ ವಿರೋಧವನ್ನು ಎದುರಿಸುತ್ತಾ ಇದ್ದೇವೆ. ಈ ವಿಷಯ ನಮಗೆ ಮಾತ್ರ ವಿಶಿಷ್ಟವಾದುದಲ್ಲ. ಲೋಕದಲ್ಲಿ ಎಷ್ಟೆಲ್ಲ ಪ್ರವಾದಿಗಳು ಆಗಮಿಸಿದರೋ ಅವರೆಲ್ಲರೂ ಮತ್ತು ಅವರನ್ನು ನಂಬಿದವರು ವಿರೋಧಗಳನ್ನು ಎದುರಿಸಬೇಕಾಯಿತು. ಆ ಪ್ರವಾದಿಗಳು ಸೀಮಿತ ಪ್ರದೇಶಗಳಿಗೋಸ್ಕರ ಆಗಮಿಸಿದ ಕಾರಣ ಅವರು ಎದುರಿಸಿದ ವಿರೋಧಗಳು ಸಹ ಸೀಮಿತವಾಗಿದ್ದುವು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಸಕಲ ಲೋಕಗಳಿಗೋಸ್ಕರ ಕಳುಹಿಸಲ್ಪಟ್ಟವರಾಗಿದ್ದುದರಿಂದ ಅವರನ್ನು ಲೋಕದ ಸಕಲ ಜನರು ವಿರೋಧಿಸಿದರು ಮತ್ತು ಈಗಲೂ ವಿರೋಧಿಸುತ್ತಿದ್ದಾರೆ. ಹಝ್ರತ್ ಮಸೀಹ್ ಮೌಊದ್‌ರ ಕಾರ್ಯಕ್ಷೇತ್ರ ಕೂಡ ಹೀಗೆಯೇ ಇದೆ. ಏಕೆಂದರೆ ಅವರು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಗುಲಾಮರಾಗಿ ಆಗಮಿಸಿದರು. ಆದುದರಿಂದ ಅವರನ್ನು ಸಹ ಎಲ್ಲ ಜನಾಂಗದವರೂ ಎಲ್ಲ ಧರ್ಮಗಳ ಜನರೂ ವಿರೋಧಿಸಿದರು. ಈಗ ಸಹ ವಿರೋಧಿಸುತ್ತಾ

ಇದ್ದಾರೆ. ಕೆಲವು ಸ್ಥಳಗಳಲ್ಲಿ ಈ ವಿರೋಧ ಕಡಿಮೆ ಇದೆ. ಕೆಲವು ಸ್ಥಳಗಳಲ್ಲಿ ಹೆಚ್ಚು ಇದೆ. ವಿರೋಧದ ಈ ಶೃಂಖಲೆ ಎಂದೂ ಕೊನೆಗೊಳ್ಳದು. ಅಹ್ಮದಿಯಾ ಜಮಾಅತ್ ಲೋಕದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಮಾಡುವ ಪ್ರಯತ್ನಗಳನ್ನು ಪ್ರಶಂಸಿಸುವ ವ್ಯಕ್ತಿಗಳು ಇದ್ದಾರೆ. ಆದರೆ ಧರ್ಮದ ದೃಷ್ಟಿಯಲ್ಲಿ ಅಸಾಧಾರಣ ಅಭಿವೃದ್ಧಿ ನಮ್ಮ ಜಮಾಅತ್ ಗಳಿಸಲು ಪ್ರಾರಂಭವಾದರೆ ಜನಾಂಗಗಳ ವಿರೋಧವನ್ನು ಪಶ್ಚಿಮದ ದೇಶಗಳಲ್ಲೂ ನಾವು ಎದುರಿಸ ಬೇಕಾಗ ಬಹುದು. ಅಥವಾ ಕಡಿಮೆ ಪಕ್ಷ ಧರ್ಮಾವಲಂಬಿಗಳು ಎಂದು ಹೇಳಿಕೊಳ್ಳುವವರು ನಮ್ಮನ್ನು ವಿರೋಧಿಸುವರು. ಆದುದರಿಂದ ವಿದ್ಯಾಸಂಪನ್ನರಾದ ಜನರಿರುವ ಈ ದೇಶಗಳಲ್ಲಿ ನಮಗೆ ಯಾವಾಗಲೂ ಒಳಿತಿಗೆ ಉತ್ತರವಾಗಿ ಒಳಿತೇ ಸಿಗುವುದೆಂದು ನಾವು ಎಂದೂ ಭಾವಿಸಬಾರದು.

ಲೋಕ ನಮ್ಮೊಂದಿಗೆ ಅವರು ಇಚ್ಛಿಸುವ ಹಾಗೆ ವರ್ತಿಸಲಿ. ಅವರ ಕೆಲಸದ ರೀತಿ ಹಾಗೆ. ಆದರೆ ಅಲ್ಲಾಹನ ಬೆಂಬಲ ನಮಗಿರುವುದರಿಂದ ಮತ್ತು ಅಲ್ಲಾಹನು ನಮ್ಮನ್ನು ಖೈರುಉಮ್ಮತ್ – ಜನರ ಒಳಿತಿಗೋಸ್ಕರ ಸೃಷ್ಟಿಸಲಾದ ಉತ್ತಮ ಸಮುದಾಯವೆಂದು ಹೇಳಿದುದರಿಂದ ನಾವು ಒಳಿತನ್ನು ಹಂಚುವುದರಲ್ಲಿ ಎಂದೂ ಹಿಂದೆ ಸರಿಯಬಾರದು. ಇಸ್ಲಾಮ್ ಧರ್ಮ ಪ್ರಚಾರವೇ ನಾವು ಹಂಚಬೇಕಾದ ಒಳಿತಾಗಿದೆ. ಅಲ್ಲಾಹನ ಕಡೆಗೆ ಲೋಕವನ್ನು ಆಹ್ವಾನಿಸಬೇಕಾಗಿದೆ. ಇದಕ್ಕಿಂತ ಉತ್ತಮವಾದ ಒಳಿತು ಬೇರೆ ಏನಿದೆ? ಎಷ್ಟೊಂದು ಕೆಡುಕು ಮತ್ತು ಎಷ್ಟು ಮಾಲಿನ್ಯ, ಎಷ್ಟು ಅಶ್ಲೀಲತೆ, ಹಾಗೂ ಅಲ್ಲಾಹನ ಆಜ್ಞೆಗಳ ಎಷ್ಟು ಅಪಹಾಸ್ಯ ಈ ಕಾಲಘಟ್ಟದಲ್ಲಿ ನಡೆಯುತ್ತಿದೆ! ಸರಕಾರಗಳೂ ಮಾಧ್ಯಮಗಳೂ ಅವುಗಳನ್ನು ಎಷ್ಟು ಪ್ರಚಾರ ಮಾಡುತ್ತವೆ! ಈ ರೀತಿ ಹಿಂದೆಂದೂ ಲೋಕದಲ್ಲಿ ಕಂಡಿರಲಿಲ್ಲ. ಇಂದಿನ ಕಾಲದಲ್ಲಿ ಶೈತಾನನು ಎಷ್ಟು ತೀವ್ರವಾಗಿ ಆಕ್ರಮಣ ಮಾಡುತ್ತಿದ್ದಾನೆ! ಪ್ರಾಯಶಃ ಹಿಂದೆ ಎಂದೂ ಹೀಗೆ ಸಂಭವಿಸಿರಲಿಲ್ಲ. ಒಂದೇ ಸಮಯದಲ್ಲಿ ಲೋಕದ ಒಂದು ಧ್ರುವದಿಂದ ಇನ್ನೊಂದು ಧ್ರುವದ ತನಕ ಒಂದು ಸೆಕಂಡಿನೊಳಗೆ ಕೊಳಕು ತುಂಬಿದ ಚಿತ್ರಗಳು, ಕಥೆಗಳು ಮತ್ತು ಧ್ವನಿಗಳು ತಲಪುತ್ತವೆ. ನಾವು ಒಳಿತಿನ ಕುರಿತು ಶಬ್ದವನ್ನು ಉಚ್ಚಸ್ವರದಲ್ಲಿ ಹೇಳಿದರೆ ಅದು ಬಹುತೇಕ ಜನರ ಕಿವಿಗೆ ತಲಪುವುದೇ ಇಲ್ಲ. ಆದರೆ ಕೆಟ್ಟ ಶಬ್ದಗಳು ಕೂಡಲೇ ತಮ್ಮ ಪ್ರಭಾವವನ್ನು ಪ್ರಕಟಿಸುತ್ತವೆ. ನಮ್ಮ ಮಾತುಗಳ ಬಗ್ಗೆ ಯಾರಾದರೂ ಲಕ್ಷ್ಯ ನೀಡಿದರೂ ಸಹ ಅವರಲ್ಲಿ ಬಹುತೇಕ ಜನರು ಹೇಗಿದ್ದಾರೆಂದರೆ ಮಕ್ಕಳೊಂದಿಗೆ ಹೇಳುವಂತೆ "ಶಾಬಾಸ್, ನೀವು ಬಹಳ ಒಳ್ಳೆಯ ಕೆಲಸ ಮಾಡುತ್ತಿರುವಿರಿ" ಎಂದು ಹೇಳಿ ಅನಂತರ ನಮ್ಮೊಂದಿಗೆ ಈ ಜನರು ಸಂಪರ್ಕ ಕಡಿದು ಬಿಡುತ್ತಾರೆ.

ಆದುದರಿಂದ ನಾವು ಮನವರಿಕೆ ಮಾಡಿಕೊಳ್ಳಬೇಕಾದುದೇನೆಂದರೆ, ಯಾರಾದರೂ ಒಂದಿಷ್ಟು ನಮ್ಮ ಕೆಲಸಗಳನ್ನು ಪ್ರಶಂಸಿಸಿದರೆ ನಾವು ಮಕ್ಕಳ ಹಾಗೆ ಸಂತೋಷಗೊಂಡು ಕುಳಿತುಕೊಳ್ಳಬಾರದು. ಕೆಲವು ಜನರಿಗೆ ಸಂದೇಶ ತಲಪಿಸಿ ನಾವು ಬಹಳ ದೊಡ್ಡ ಕೆಲಸ ಮಾಡಿದೆವು ಎಂದು ಭಾವಿಸಬಾರದು. ಲೋಕಕ್ಕೆ ಒಳಿತನ್ನು ತಲಪಿಸಲು ಮತ್ತು ಕೆಡುಕುಗಳನ್ನು ದೂರ ಸರಿಸಲು ನಾವು ನಮ್ಮ ಪ್ರಯತ್ನಗಳನ್ನು ಅತ್ಯಂತ ಹೆಚ್ಚು ವರ್ಧಿಸಬೇಕು. ಮುಸ್ಲಿಮರ ಕಡೆಯಿಂದ, ಮುಸ್ಲಿಮೇತರರ ಕಡೆಯಿಂದ ಮತ್ತು ನಾಸ್ತಿಕರ ಕಡೆಯಿಂದ ನಮಗೆದುರಾಗುವ ವಿರೋಧಗಳನ್ನು ಮತ್ತು ಲೌಕಿಕ ಅಡ್ಡಿ ಆತಂಕಗಳನ್ನು ನಮ್ಮ ಮಾರ್ಗದಿಂದ ದೂರ ಸರಿಸಲು ಹೇಗೆ ಪ್ರಯತ್ನಿಸಬೇಕೆಂದರೆ ಬಿರುಗಾಳಿ ಕಸಕಡ್ಡಿಯನ್ನು ಹಾರಿಸುವ ಹಾಗೆ. ನಾವು ಎಷ್ಟು ಸಮಗ್ರವಾದ ಮತ್ತು ತೀವ್ರವಾದ ಪ್ರಯತ್ನ ಮಾಡಬೇಕೆಂದು ಇದರಿಂದ ಅಂದಾಜು ಮಾಡಬಹುದಾಗಿದೆ. ಪ್ರತಿಯೊಬ್ಬ ಅಹ್ಮದಿ ತನ್ನ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಇದಕ್ಕೆ ತನ್ನ ಪಾಲನ್ನು ಹಾಕುವುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್‌ರ ಕೆಲಸ ಲೋಕಕ್ಕೆ ಇಸ್ಲಾಮಿನ ಸಂದೇಶ ತಲಪಿಸುವುದಾಗಿದೆ. ಇದು ಒಳಿತನ್ನು ಹಂಚುವ ಕೆಲಸವಾಗಿದೆ. ನಮ್ಮ ಕೆಲಸ ಇದೇ ಆಗಿದೆ. ನಾವು ದೃಢವಾಗಿ ನಂಬುವುದೇನೆಂದರೆ, ಕೆಡುಕಿಗೆ ಪ್ರತಿಯಾಗಿ ನಾವು ಒಳಿತನ್ನು ತಲಪಿಸಿದರೆ ಈ ಜನರಿಂದಲೇ ಪ್ರೀತಿಯ ಬಿಂದುಗಳು ಹರಿಯಲು ತೊಡಗುವುವು. ಈ ಜನರು ಮುಹಮ್ಮದೀ ಮಸೀಹರ ಗುಲಾಮರಾಗುವರು.

ನಾವು ಯೋಚಿಸಬೇಕಾದ ಮತ್ತೊಂದು ಸಂಗತಿಯೆಂದರೆ, ಕೆಡುಕಿಗೆ ಪ್ರತಿಯಾಗಿ ನಾವು ಒಳಿತನ್ನು ಹಂಚುವಾಗ ಕೆಟ್ಟ ಸ್ವಭಾವದ ನಮ್ಮ ವಿರೋಧಿಗಳು ಹಾನಿ ಮತ್ತು ಹಗೆತನದ ಮೂಲಕ ಉತ್ತರ ನೀಡಬಹುದು. ಅವರು ಹಾಗೆಯೇ ಉತ್ತರ ನೀಡುತ್ತಿದ್ದಾರೆ. ಕೆಲವು ವಿರೋಧಿಗಳು ನಮ್ಮನ್ನು ಹೇಗೆ ನೋಡುತ್ತಿದ್ದಾರೆಂದರೆ, ಹುಲಿ ಕುರಿಯನ್ನು ನೋಡುವ ಹಾಗೆ – ತನ್ನ ಸ್ವಾಧೀನಕ್ಕೆ ಅದು ಹೇಗೆ ಬರುವುದೆಂದು.

ನಮ್ಮ ಸ್ಥಿತಿ ಹುಲಿ ಅಥವಾ ಚಿರತೆಯನ್ನು ಸಾಕುವವನ ಹಾಗೆ ಇದೆ. ಅದು ತಪ್ಪಿಸಿಕೊಂಡರೆ ಅದಕ್ಕೆ ಹಾನಿ ಆಗದ ಹಾಗೆ ಅದನ್ನು ಹಿಡಿಯಲು ಅದರ ಮಾಲಿಕನು ಇಚ್ಛಿಸುತ್ತಾನೆ. ಆದರೆ ಹುಲಿ ಅಥವಾ ಚಿರತೆ ತನ್ನ ಮಾಲಿಕನನ್ನೇ ಹಿಡಿದು ಹರಿದು ಹಾಕಲು ಬಯಸುತ್ತದೆ.

ಪಾಕಿಸ್ಥಾನ ಮತ್ತು ಇತರ ಕೆಲವು ದೇಶಗಳಲ್ಲಿ ಇಂತಹ ದುರ್ಜನರಿದ್ದಾರೆ. ಮೌಲವಿಗಳು ಮತ್ತು ಅವರ ಪ್ರಭಾವಕ್ಕೆ

ಪಾತ್ರರಾದವರು ನಮ್ಮ ವಿರುದ್ಧ ಸುಳ್ಳು ಹೇಳುತ್ತಾರೆ. ಅವರು ನಮ್ಮನ್ನು ಹರಿದು ಹಾಕಲು ಬಯಸುತ್ತಾರೆ. ಆದರೆ ನಾವು ಪ್ರಯತ್ನಿಸುವುದು ಅವರು ಸುರಕ್ಷಿತರಾಗಲಿ ಮತ್ತು ಅಲ್ಲಾಹನ ಹಿಡಿತಕ್ಕೆ ಒಳಗಾಗದಿರಲಿ ಎಂದಾಗಿದೆ. ಅವರು ನಮ್ಮನ್ನು ವಿರೋಧಿಸುವುದು ನಮ್ಮ ಮೇಲಿರುವ ಯಾವುದೇ ವೈಯಕ್ತಿಕ ಕಾರಣದಿಂದಲ್ಲ. ವಿವಿಧ ಸ್ಥಳಗಳಲ್ಲಿ ಅಹ್ಮದಿಯರಿಗೆ ಬೆದರಿಕೆಗಳು ಪ್ರತಿದಿನ ಬರುತ್ತಾ ಇರುತ್ತವೆ. "ನಿಮ್ಮನ್ನು ಹಾಗೆ ಮಾಡುವೆವು, ಹೀಗೆ ಮಾಡುವೆವು. ಆದುದರಿಂದ ನೀವು ಅಹ್ಮದಿಯ್ಯತನ್ನು ಕೈಬಿಟ್ಟು ನಮ್ಮ ಜೊತೆಗೆ ಸೇರಿಕೊಳ್ಳಿರಿ, ಅದೇ ನಿಮಗೆ ಉತ್ತಮವಾಗಿದೆ" ಎಂದೆಲ್ಲ ಹೇಳಲಾಗುತ್ತದೆ.


ಆದುದರಿಂದ ಈ ಜನರ ವಿರೋಧ ಅಹ್ಮದಿಯ್ಯತಿನೊಂದಿಗೆ ಆಗಿರುತ್ತದೆ. ಯಾವುದೇ ವೈಯಕ್ತಿಕ ಕಾರಣದಿಂದಲ್ಲ. ಅಹ್ಮದಿಯ್ಯತನ್ನು ವಿರೋಧಿಸುವುದೇಕೆಂದರೆ, ಅಹ್ಮದಿಯ್ಯತ್ ಅಭಿವೃದ್ಧಿ ಹೊಂದುತ್ತಾ ಇರುವುದು ಅವರಿಗೆ ಸ್ಪಷ್ಟವಾಗಿ ಕಾಣಿಸುತ್ತಾ ಇದೆ. ಅಹ್ಮದಿಯ್ಯತ್ ಅಭಿವೃದ್ಧಿ ಹೊಂದಿದರೆ ಅವರ ಸ್ವಾರ್ಥ ಹಿತಾಸಕ್ತಿಗಳಿಗೆ ಹಾನಿ ಉಂಟಾಗುವುದು. ಜನರು ಅವರ ಕಡೆಗೆ ಬರುವುದು ಕಡಿಮೆಯಾಗುವುದು. ಅಹ್ಮದಿಯ್ಯತ್ ಅಭಿವೃದ್ಧಿ ಹೊಂದುತ್ತಾ ಇರುವಾಗ ಈ ಜನರ ಸ್ಥಾನಗಳು ನಷ್ಟವಾಗುತ್ತಾ ಹೋಗುವುವು. ಅವರಿಗೆ ಸ್ಪಷ್ಟವಾಗಿ ಕಾಣಿಸುತ್ತಿದೆ – ಅಹ್ಮದಿಯಾ ಜಮಾಅತ್ ಈ ರೀತಿ ಅಭಿವೃದ್ಧಿ ಹೊಂದುತ್ತಾ ಇದ್ದರೆ ನಾಳೆ ತಮ್ಮನ್ನು ಇವರು ಸ್ವಾಧೀನಕ್ಕೊಳಪಡಿಸುವರು ಎಂದು.

ನಾನು ಇದರ ಮೊದಲು ಹೇಳಿದ ಹಾಗೆ ಪಶ್ಚಿಮದ ದೇಶಗಳಲ್ಲಿ ಮತ್ತು ಪಶ್ಚಿಮದ ದೇಶಗಳ ಪ್ರಭಾವಕ್ಕೊಳಗಾಗಿರುವ ದೇಶಗಳಲ್ಲಿ ನಮ್ಮ ಜಮಾಅತಿನ ಅಭಿವೃದ್ಧಿ ನಮ್ಮ ಜಮಾಅತಿನ ವಿರುದ್ಧ ಇವರು ಯೋಜನೆಗಳನ್ನು ರೂಪಿಸಲು ಕಾರಣವಾಗಬಹುದು. ಪ್ರಾಯಶಃ ನಮ್ಮ ಜಮಾಅತ್ ಆಡಳಿತವನ್ನು ಸ್ವಾಧೀನಪಡಿಸಬಯಸುತ್ತದೆ ಎಂದು ಆ ದೇಶದವರು ಯೋಚಿಸಬಹುದು. ಆದರೆ ಅಹ್ಮದಿಯಾ ಜಮಾಅತ್ ಹಬ್ಬಿದರೆ ಆ ದೇಶಗಳನ್ನು ಸ್ವಾಧೀನಕ್ಕೊಳಪಡಿಸಲಾರದು. ಬದಲಾಗಿ ಅಹ್ಮದಿಯಾ ಜಮಾಅತ್ ಆ ದೇಶಗಳಲ್ಲಿ ಶಾಂತಿ ಮತ್ತು ಸುರಕ್ಷೆಯನ್ನು ಮೊದಲಿಗಿಂತ ಹೆಚ್ಚಾಗಿ ಸ್ಥಾಪಿಸುವುದಕ್ಕೆ ಮಾರ್ಗವಾಗುವುದು. ಮುಸ್ಲಿಮ್ ದೇಶಗಳ ಮುಸ್ಲಿಮರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧನಾದ ಗುಲಾಮರೊಂದಿಗೆ ಸಂಬಂಧ ಸ್ಥಾಪಿಸಬೇಕೆಂದು ನಾವು ಹೇಳುವಾಗ ನಮ್ಮ ಉದ್ದೇಶ ಅವರನ್ನು ಲೌಕಿಕ ಕಷ್ಟಗಳಿಂದ ದೂರಸರಿಸಿ ಅವರ ಉತ್ತಮ ಗತಿಗೋಸ್ಕರವಾಗಿದೆ. ಇದೇ ರೀತಿ ಲೋಕದ ಇತರ ಧರ್ಮಗಳ ಜನರನ್ನು ಸಹ ಅಲ್ಲಾಹನ ಕೋಪದಿಂದ ರಕ್ಷಿಸಲು ನಾವು ಬಯಸುತ್ತೇವೆ.

ಮುಹಮ್ಮದೀ ಮಸೀಹರ ಗುಲಾಮರು ಇಂದು ಮಾಡಬೇಕಾದ ಕೆಲಸವೇನೆಂದರೆ, ಅಲ್ಲಾಹನ ಅನುಗ್ರಹವನ್ನು ಗಳಿಸಿ ಜಾಣ್ಮೆಯಿಂದಲೂ ಕಠಿಣ ಪರಿಶ್ರಮದಿಂದಲೂ ಇಸ್ಲಾಮಿನ ಜನಹಿತಕಾರಿ, ಉತ್ತಮ ಉಪದೇಶಗಳನ್ನು ಪ್ರತಿಯೊಂದು ಹೃದಯದಲ್ಲೂ ಬೇರೂರುವಂತೆ ಮಾಡಬೇಕು. ಅದಕ್ಕೋಸ್ಕರ ಧಾರಾಳ ಪ್ರಯತ್ನ ಮಾಡಬೇಕು. ಇದಕ್ಕೋಸ್ಕರ ಲೋಕದ ಎಲ್ಲಾ ಸ್ಥಳಗಳಲ್ಲೂ ದಾಯಿಯಾನೆ ಇಲಲ್ಲಾಹ್ (ಅಲ್ಲಾಹನ ಕಡೆಗೆ ಆಮಂತ್ರಿಸುವವರ) ಸಂಖ್ಯೆಯನ್ನು ವರ್ಧಿಸಿ ಅವರನ್ನು ಕಾರ್ಯನಿರತರನ್ನಾಗಿ ಮಾಡುವ ಆವಶ್ಯಕತೆ ಇದೆ.

ಜಮಾಅತಿನ ಸದಸ್ಯರು ಮತ್ತು ಜಮಾಅತಿನ ಆಡಳಿತ ವ್ಯವಸ್ಥೆ ಈ ವಿಷಯದ ಬಗ್ಗೆ ಲಕ್ಷ್ಯ ನೀಡುವಂತೆ ಅಲ್ಲಾಹನು ಭಾಗ್ಯ ನೀಡಿ ಅನುಗ್ರಹಿಸಲಿ – ಆಮೀನ್. ★


## ಹೊಸ ಪುಸ್ತಕ




**ಖಾತಮುನ್ನಬಿಯ್ಯೀನ್**
**ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್**
**ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು**
**ಸ್ತುತಿಸುವ ಅರಬಿ ಗೀತೆ**

ಸಂಪರ್ಕಿಸಿರಿ :
**BAITUL HUDA,**
**AHMADIYYA MUSLIM JUMMA'AT.,**
**HILL ROAD, MADIKERI, KARNATAKA - 571 516**

# ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು

ಸರ್ವಶಕ್ತನಾದ ದೇವನ ಅಸ್ತಿತ್ವದ ವಿಷಯವು ಅತ್ಯಂತ ಮುಖ್ಯವಾಗಿದೆ. ಧರ್ಮದ ಕೇಂದ್ರ ಬಿಂದು ಸರ್ವಶಕ್ತನಾದ ದೇವನಾಗಿದ್ದಾನೆ. ಧಾರ್ಮಿಕ ಸೌಹಾರ್ದವನ್ನು ಬೆಳೆಸಲು, ವಿವಿಧ ಧರ್ಮಗಳ ಜನರನ್ನು ಒಗ್ಗೂಡಿಸಲು, ಎಲ್ಲರೂ ಸೇರಿಕೊಂಡು ನಾಸ್ತಿಕವಾದವನ್ನು ಖಂಡಿಸಲು, ಸರ್ವಶಕ್ತನಾದ ದೇವನ ಬಗ್ಗೆ ವಿಶ್ವಾಸವನ್ನು ವರ್ಧಿಸಲು ಮತ್ತು ನಮ್ಮ ಜೀವಿತದ ಉದ್ದೇಶಲಕ್ಷ್ಯವನ್ನು ಗಳಿಸಲು ಈ ವಿಷಯದ ಬಗ್ಗೆ ಜ್ಞಾನ ಗಳಿಸುವುದು ಆವಶ್ಯಕವಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

ಹೇಳು: "ಓ ಗ್ರಂಥದವರೇ, ನಮಗೂ ನಿಮಗೂ ಮಧ್ಯೆ ಒಪ್ಪಿಗೆಯಿರುವ ವಿಚಾರದೆಡೆಗೆ (ಎಂದರೆ) ಏಕದೇವನಲ್ಲದೆ ಯಾರನ್ನೂ ಆರಾಧಿಸುವುದಿಲ್ಲ, ಅವನಿಗೆ ಯಾರನ್ನೂ ಸಹಭಾಗಿಯಾಗಿ ಭಾವಿಸಲಿಕ್ಕಿಲ್ಲ, ಅವನ ಹೊರತು ನಮ್ಮಲ್ಲಿ ಕೆಲವರು ಬೇರೆ ಕೆಲವರನ್ನು ಒಡೆಯರನ್ನಾಗಿ ಪರಿಗಣಿಸಲಿಕ್ಕಿಲ್ಲ ಎಂಬ ವಿಚಾರದೆಡೆಗೆ ಬನ್ನಿರಿ." (3:65)

ಲೋಕದಲ್ಲಿ ಅಪರಾಧಗಳು ವರ್ಧಿಸುವ ಮತ್ತು ಗಲಭೆ ಗೊಂದಲಗಳ ಮೂಲಕಾರಣ ಜನರ ಹೃದಯಗಳಲ್ಲಿ ದೇವನ ಅಸ್ತಿತ್ವದ ಬಗ್ಗೆ ವಿಶ್ವಾಸವಿಲ್ಲದಿರುವುದಾಗಿದೆ. ಆದುದರಿಂದ ಈ ವಿಷಯವು ಲೋಕದಲ್ಲಿ ಶಾಂತಿ ಸ್ಥಾಪನೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಪವಿತ್ರಖುರ್‌ಆನ್ ಹೇಳುವ ಹಾಗೆ, ದೇವನು ಶಾಂತಿಯ ಸಾಮ್ರಾಟನೂ ಭದ್ರತೆ ದಯಪಾಲಿಸುವವನೂ ಆಗಿದ್ದಾನೆ. (ಪವಿತ್ರಖುರ್‌ಆನ್ 59:24)

ನಮ್ಮ ನೇತಾರರಾದ ಹಝ್ರತ್ ಮುಹಮ್ಮದ್ ಪೈಗಂಬರ್[ಸ] (ಅವರ ಮೇಲೆ ಅಲ್ಲಾಹನ ಶಾಂತಿಯೂ ಅನುಗ್ರಹವೂ ಸುರಿಸಲ್ಪಡಲಿ) ಅವರ ಆಗಮನದ ಉದ್ದೇಶಲಕ್ಷ್ಯ ಲೋಕದ ಜನರನ್ನು, ಸರ್ವಶಕ್ತನಾದ ದೇವನ ಕಡೆಗೆ ಆಗಮಿಸಲು ಕರೆ ನೀಡುವುದಾಗಿತ್ತು. ಹಝ್ರತ್ ಪೈಗಂಬರರನ್ನು[ಸ] ಸಂಬೋಧಿಸಿ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

ಹೇಳು: "ಇದು ನನ್ನ ಮಾರ್ಗವಾಗಿದೆ. ನಾನು ಅಲ್ಲಾಹನ ಕಡೆಗೆ ನಿಮ್ಮನ್ನು ಆಮಂತ್ರಿಸುತ್ತೇನೆ. ನಾನು ಮತ್ತು ನನ್ನನ್ನು ಅನುಸರಿಸುವವರು ಸಂಶಯಾತೀತ ಜ್ಞಾನವನ್ನು ಹೊಂದಿರುವೆವು. ನಾನು ಅಲ್ಲಾಹನ ಪಾವಿತ್ರ್ಯವನ್ನು ಕೊಂಡಾಡುತ್ತೇನೆ. ನಾನು ಬಹುದೇವಾರಾಧಕರಲ್ಲಿ ಸೇರಿದವನಲ್ಲ." (12:109)

ಲೋಕದ ಅಂತಿಮ ಕಾಲಘಟ್ಟದಲ್ಲಿ ವಾಗ್ದತ್ತ ಮಹ್‌ದೀ ಮಸೀಹ್ (ಧರ್ಮೋದ್ಧಾರಕ) ಆಗಮಿಸುವರೆಂದೂ ಅವರ ಮುಖ್ಯ ಕೆಲಸ ಲೋಕದಲ್ಲಿ ನೈಜ ಇಸ್ಲಾಮ್ ಧರ್ಮ ವಿಶ್ವಾಸ ಸ್ಥಾಪನೆ ಮಾಡುವುದಾಗಿದೆ ಎಂದೂ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಭವಿಷ್ಯ ನುಡಿದಿರುವರು. ಧಾರ್ಮಿಕ ವಿಶ್ವಾಸವು ಲೋಕದಿಂದ ಮೇಲೇರಿ ಸುರಯ್ಯಾ (ಕೃತಿಕಾ) ನಕ್ಷತ್ರವನ್ನು ತಲಪಿದರೂ ವಾಗ್ದತ್ತ ಮಸೀಹರು ಅದನ್ನು ಭೂಮಿಗೆ ಮರಳಿ ತರುವರು ಎಂದು ಸಹ ಹಝ್ರತ್ ಪೈಗಂಬರರು[ಸ] ಹೇಳಿದುದಾಗಿ ಹದೀಸು ಗ್ರಂಥಗಳಲ್ಲಿ ವರದಿಯಾಗಿದೆ. (ಬುಖಾರಿ ಮತ್ತು ಮುಸ್ಲಿಮ್ ನೋಡಿರಿ.)

* ಪ್ರೊಫೆಸರ್ ಡಾಕ್ಟರ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್



ಪಂಜಾಬ್ ರಾಜ್ಯದ ಖಾದಿಯಾನ್ ಎಂಬಲ್ಲಿ ಜನಿಸಿದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] (ಅವರ ಮೇಲೆ ಶಾಂತಿ ಇರಲಿ) ವಾಗ್ದತ್ತ ಮಸೀಹರೆಂದು ನಾವು ನಂಬುತ್ತೇವೆ. ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದ ಅವರ ಮೂಲಕವೇ ಲೋಕದಲ್ಲಿ ಧಾರ್ಮಿಕ ಪುನಶ್ಚೇತನವು ಲೋಕದ ಅಂತಿಮ ಕಾಲಘಟ್ಟದಲ್ಲಿ ಈಡೇರುವುದು ದೇವನಿಂದ ನಿಗದಿಪಡಿಸಲಾಗಿದೆ. ಆದುದರಿಂದ ದೇವನ ಅಸ್ತಿತ್ವ ಸಾಬೀತುಗೊಳಿಸುವ ವಿಷಯ ಅಹ್ಮದಿಯಾ ಜಮಾಅತ್‌ಗೆ ಅತ್ಯಂತ ಪ್ರಿಯವಾದುದಾಗಿದೆ. ಇದನ್ನು ಅಹ್ಮದಿಯಾ ಜಮಾಅತ್‌ನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್[ರ] ಹೀಗೆ ಒಂದು ಉರ್ದು ಪದ್ಯದಲ್ಲಿ ಸುಂದರವಾಗಿ ಪ್ರಕಟಿಸಿರುವರು:

ಮೆರೀ ರಾತ್ ದಿನ್ ಬಸ್ ಯಹೀ ಎಕ್ ಸದಾ ಹೈ

ಕೆ ಇಸ್ ಆಲಮೇ ಕೌನ್ ಕಾ ಎಕ್ ಖುದಾ ಹೈ.

ಅರ್ಥ: ರಾತ್ರಿ ಹಗಲು ನಾನು ಹೇಳುವುದು ಹೀಗೆಯೇ ಆಗಿದೆ–

ಈ ವಿಶ್ವಕ್ಕೊರ್ವ ದೇವನಿರುವನೆಂದು.

ವಿಶ್ವವು ದೇವನ ಅಸ್ತಿತ್ವದ ಬಗ್ಗೆ ಇರುವ ಸಾಕ್ಷ್ಯಾಧಾರವಾಗಿದೆ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ.

ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ ರಾತ್ರಿ – ಹಗಲುಗಳ ರೂಪಾಂತರದಲ್ಲೂ ದಿಟವಾಗಿಯೂ ಬುದ್ಧಿಶಾಲಿಗಳಿಗೆ (ಹಲವು) ದೃಷ್ಟಾಂತಗಳಲ್ಲಿ. (3:191)

ಆಕಾಶಗಳ ಮತ್ತು ಭೂಮಿಯ ಸೃಷ್ಟಿ ಹಾಗೂ ನಿಮ್ಮ ಭಾಷೆ ಮತ್ತು ವರ್ಣಗಳ ವೈವಿಧ್ಯ – ಇದು ಸಹ ಅವನ ದೃಷ್ಟಾಂತಗಳಲ್ಲಿ ಸೇರಿದೆ. ಜ್ಞಾನಿಗಳಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ. (30:23)

ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನ ಕುರಿತು ನಿಮಗೆ ಸಂಶಯವೇ? (14:11)

ಆಕಾಶಗಳ ಮತ್ತು ಭೂಮಿಯ ಸೃಷ್ಟಿಯ ಬಗ್ಗೆ ಅಧ್ಯಯನ ನಡೆಸಿದರೆ ಅವುಗಳ ಸೃಷ್ಟಿಕರ್ತನ ಅಸ್ತಿತ್ವದ ಬಗ್ಗೆ ಮನವರಿಕೆ ಆಗುವುದೆಂದು ಮೇಲಿನ ಪವಿತ್ರ ಖುರ್‌ಆನ್ ವಚನಗಳು ಸೂಚಿಸುತ್ತವೆ. ವಿಜ್ಞಾನ ಮತ್ತು ವಿಜ್ಞಾನಿಗಳು ಈ ವಿಷಯದ ಬಗ್ಗೆ ಪ್ರಕಟಿಸಿದ ಕೆಲವು ಅಭಿಪ್ರಾಯಗಳನ್ನು, ನಾನು ದೇವನ ಸಹಾಯವನ್ನು ಬೇಡಿಕೊಂಡು ನಿಮ್ಮ ಮುಂದೆ ಇರಿಸುತ್ತೇನೆ.

## ವಿಜ್ಞಾನ ಮತ್ತು ಧರ್ಮ

ವಿಶಿಷ್ಟವಾಗಿ ಗಮನಿಸಬೇಕಾದುದೇನೆಂದರೆ, ಹಝ್ರತ್

ಮುಹಮ್ಮದ್ ಪೈಗಂಬರರ(ಸ) ಆಗಮನದ ನಂತರ ಮುಸ್ಲಿಮರು ಬಹಳ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಿ ವಿಜ್ಞಾನವನ್ನು ಬಹಳ ಅಭಿವೃದ್ಧಿಗೊಳಿಸಿದರು. ಅವರು ದೇವನ ಅಸ್ತಿತ್ವವನ್ನು ನಂಬುವವರಾಗಿದ್ದರು ಮತ್ತು ಅವರು ವಿಜ್ಞಾನದ ಮೂಲಕ ದೇವನ ಬಗ್ಗೆ ತಳಸ್ಪರ್ಶಿ ಜ್ಞಾನಗಳಿಸಿದರು. ಉದಾರಣೆಗೆ, ವಿಖ್ಯಾತ ಅರಬಿ ಗಗನಶಾಸ್ತ್ರಜ್ಞರಾಗಿದ್ದ ಅಬ್ದುಲ್ಲಾ ಮುಹಮ್ಮದ್ ಇಬ್ನು ಜರೀರ್ ಅಲ್ ಬತ್ತಾನೀ ಆಕಾಶ ಕಾಯಗಳ ಬಗ್ಗೆ ಕ್ರಿ.ಶ. 878ರಿಂದ 918ರ ತನಕ ನಲ್ವತ್ತು ವರ್ಷಗಳ ಕಾಲ ಸಂಶೋಧನೆ ನಡೆಸಿದ್ದರು. ಅವರು ಹೀಗೆ ಹೇಳಿದ್ದರು:

ನಕ್ಷತ್ರಗಳ ಬಗ್ಗೆ ಮಾಡಿದ ವೈಜ್ಞಾನಿಕ ಸಂಶೋಧನೆಗಳು ದೇವನ ಏಕತ್ವವನ್ನೂ ಅತ್ಯುನ್ನತ ದೇವ ಜಾಣ್ಮೆಯನ್ನೂ ಮನವರಿಕೆ ಮಾಡಿಸಿಕೊಡುತ್ತವೆ.

(ಹಿಸ್ಟರಿ ಆಫ್ ಎಸ್ಟ್ರೋನೊಮಿ. ಲೇಖಕ: A. PENNEKOEK, INTER SCIENCE, NEW YORK 1961.)

ಅನಂತರ ಕ್ರಿಸ್ತಶಕ ಹದಿನೇಳನೇ ಶತಮಾನದಲ್ಲಿ ಭೂಮಿ ವಿಶ್ವದ ಕೇಂದ್ರವಲ್ಲ ಎಂದು ವಿಜ್ಞಾನಿಗಳು ಪ್ರತಿಪಾದಿಸಿದಾಗ, ಯುರೋಪಿನ ಕ್ರೈಸ್ತ ಪಾದರಿಗಳು ಆ ಅಭಿಪ್ರಾಯವನ್ನು ಖಂಡಿಸಿದರು. ಧರ್ಮ ಮತ್ತು ವಿಜ್ಞಾನ ಪರಸ್ಪರ ವಿರುದ್ಧಾಭಿಪ್ರಾಯಗಳನ್ನು ಹೊಂದಿವೆ ಎಂದು ಸಾಮಾನ್ಯವಾಗಿ ನಂಬಲಾಗಿತ್ತು. ಆದರೆ ಇಂದಿನ ಕಾಲಘಟ್ಟದಲ್ಲಿ, ಅನೇಕ ವಿಜ್ಞಾನಿಗಳು ಧರ್ಮ ಮತ್ತು ವಿಜ್ಞಾನ ಪರಸ್ಪರ ವಿರುದ್ಧವಾಗಿವೆ ಎಂದು ನಂಬುವುದಿಲ್ಲ. ಅನೇಕ ವಿಜ್ಞಾನಿಗಳು ವಾಸ್ತವಿಕವಾಗಿಯೂ ದೇವನಿದ್ದಾನೆಂದು ನಂಬುತ್ತಾರೆ.

ಎವಿಡೆನ್ಸ್ (EVIDENCE – ಸಾಕ್ಷ್ಯಾಧಾರಗಳು) ಎಂಬ ಪುಸ್ತಕ 1959ರಲ್ಲಿ ಯು.ಎಸ್.ಎ.ದಲ್ಲಿ ಪ್ರಕಟವಾಗಿದೆ.

ವಿಜ್ಞಾನದ ವಿವಿಧ ಕ್ಷೇತ್ರಗಳ ಪ್ರಸಿದ್ಧರಾದ ನಲ್ವತ್ತು ವಿಜ್ಞಾನಿಗಳು ಆ ಪುಸ್ತಕದಲ್ಲಿ ದೇವನು ಅಸ್ತಿತ್ವದಲ್ಲಿರುವನೆಂಬ ತಮ್ಮ ಅಭಿಪ್ರಾಯಗಳನ್ನು ತಮ್ಮ ಪ್ರಬಂಧಗಳಲ್ಲಿ ವಿವರಿಸಿದ್ದಾರೆ. ಈ ಪುಸ್ತಕದ ಪೂರ್ಣ ಶೀರ್ಷಿಕೆ The Evidence of God in an Expanding Universe (ವಿಸ್ತಾರಗೊಳ್ಳುತ್ತಿರುವ ವಿಶ್ವದಲ್ಲಿ ದೇವನ ಅಸ್ತಿತ್ವದ ಬಗ್ಗೆ ಸಾಕ್ಷ್ಯಾಧಾರಗಳು). ಈ ಪುಸ್ತಕ ಭಾರತದಲ್ಲಿ 1968ರಲ್ಲಿ ಪ್ರಕಟಗೊಂಡಿತು. (ವಿತರಕರು: POCKETS DISTRIBUTING CO. 11 OAK LANE, FORT,BOMBAY -1.) ಈ ಪುಸ್ತಕದ ಸಂಪಾದಕ ಮಿಸ್ಟರ್ ಜಾನ್ ಕ್ಲೋವರ್ ಮೋನ್‌ಸ್ಮ ತನ್ನ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ:

"ಈ ಪುಸ್ತಕದ ಮೂಲಭೂತ ಪ್ರತಿಪಾದನೆ, ಅದು ಪ್ರತಿಪಾದಿಸುವ ಮುಖ್ಯ ಅಂಶ ಹೀಗಿದೆ: ನೈಸರ್ಗಿಕ ವಾಸ್ತವಾಂಶಗಳನ್ನು ವೀಕ್ಷಿಸುವ ಮೂಲಕ, ವೈಜಾನಿಕ ಸಾಕ್ಷ್ಯಾಧಾರಗಳ ಮೂಲಕ ಒಂದು ಅತಿಮಾನುಷ ಮಹಾಶಕ್ತಿ ಇದೆ ಎಂದು ವಿಜ್ಞಾನವು ಸಾಬೀತುಗೊಳಿಸಬಲ್ಲುದು. ಈ ಮಹಾಶಕ್ತಿ ಏನೆಂದು ಸ್ಪಷ್ಟವಾಗಿ ಅದು ವಿವರಿಸಲಾರದು. ಅದರ ವಾಸ್ತವಿಕ ಗುರುತನ್ನು ಗೊತ್ತು ಹಚ್ಚಲು ವಿಶಿಷ್ಟ ದೇವವಾಣಿ (ಬೈಬಲ್) ಆವಶ್ಯಕವಾಗಿದೆ. ಆದರೆ ಒಂದು ಮೂಲ ಪ್ರತಿಪಾದನೆಯಿಂದ ಮುಂದುವರಿದ ವಿಜ್ಞಾನಿಗಳು ನಾಸ್ತಿಕವಾದದ ಹೃದಯವನ್ನು ಬಲಯುತವಾಗಿ ಭೇದಿಸಿದ್ದಾರೆ."

ನಾನು ಮೇಲೆ ಉಲ್ಲೇಖಿಸಿದ ಪುಸ್ತಕದಿಂದ ಉದ್ಧರಣಿಗಳನ್ನು ನೀಡಲು ಬಯಸುತ್ತೇನೆ. ಏಕೆಂದರೆ, ನಮಗೆ ಅತ್ಯಂತ ಪ್ರಿಯರಾದ ನಮ್ಮ ಗುರುವರ್ಯರಾದ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ನಮಗೆ ಉಪದೇಶಿಸಿರುವರು:

ಜಾಣ್ಮೆಯ ಮಾತು ಸತ್ಯವಿಶ್ವಾಸಿಯ ಕಳೆದು ಹೋದ ವಸ್ತುವಾಗಿದೆ. ಅದನ್ನು ಕಂಡರೆ ಅದನ್ನು ತೆಗೆದುಕೊಳ್ಳುವ ಅಧಿಕಾರ ಆತನಿಗಿದೆ. (ತಿರ್ಮಿದಿ)

ಆದುದರಿಂದ ವಿವೇಕಭರಿತ ಮಾತು ನಮಗೆ ಎಲ್ಲಿಂದ ದೊರೆತರೂ ನಾವು ಅದನ್ನು ತೆಗೆದುಕೊಳ್ಳುತ್ತೇವೆ.

ಮ್ಯಾಕ್ಸ್ ಪ್ಲಾಂಕ್ (MAX PLANCK) ಇಪ್ಪತ್ತನೆಯ ಶತಮಾನದ ಪ್ರಖ್ಯಾತ ವಿಜ್ಞಾನಿಯಾಗಿದ್ದರು. ಅಣು ಬಗ್ಗೆ ಸಂಶೋಧನೆ ನಡೆಸಿದ ಅವರಿಗೆ 1920ರಲ್ಲಿ ನೋಬೆಲ್ ಪ್ರೈಝ್ ಲಭಿಸಿತ್ತು. ಧರ್ಮ ಮತ್ತು ವಿಜ್ಞಾನ ಪರಸ್ಪರ ಸಹಕರಿಸಿ ಸರ್ವಶಕ್ತ ದೇವನ ಅಸ್ತಿತ್ವದ ಜ್ಞಾನದ ಕಡೆಗೆ ಒಯ್ಯುತ್ತವೆ ಎಂದು ಅವರು ಅಭಿಪ್ರಾಯ ಸೂಚಿಸಿದ್ದರು. ಅವರು ಹೀಗೆ ಹೇಳಿದರು:

"ಧರ್ಮ ಮತ್ತು ನೈಸರ್ಗಿಕ ವಿಜ್ಞಾನ ಜೊತೆಗೂಡಿ ಸಂದೇಹವಾದ, ಧಾರ್ಮಿಕ ದುರಭಿಮಾನ ಮತ್ತು ಅಂಧವಿಶ್ವಾಸದ ವಿರುದ್ಧ ನಿರಂತರವಾಗಿಯೂ ಅವಿರಾಮವಾಗಿಯೂ ಹೋರಾಟ ನಡೆಸುತ್ತಿವೆ. ಹೋರಾಟ ನಡೆಸುವಾಗ ಘೋಷಣೆ 'ದೇವನ ಕಡೆಗೆ' ಎಂದಾಗಿತ್ತು ಮತ್ತು ಇದೆ ಘೋಷಣೆಯೊಂದಿಗೆ ಮುಂದೆ ಸಾಗುವುದು."

(ಎವಿಡೆನ್ಸ್ – ಪುಟ 247)

ಡಾಕ್ಟರ್ ಜೋರ್ಜ್ ಅರ್ಲ್ ಡೇವಿಸ್, ಫಿಸಿಸಿಸ್ಟ್ (ಭೌತಶಾಸ್ತ್ರಜ್ಞ), ಅಮೇರಿಕದ ಮಿನ್ನೆಸೋಟ ಯುನಿವರ್ಸಿಟಿ ಹೀಗೆ ಬರೆಯುತ್ತಾರೆ:

"ವಿಜ್ಞಾನದ ವಲಯದಲ್ಲಿ ನಾಸ್ತಿಕತೆ ಇರುವುದನ್ನು ಅಲ್ಲಗಳೆಯಲಾಗದು. ವಿಜ್ಞಾನಿಗಳಲ್ಲದವರಿಗಿಂತ ವಿಜ್ಞಾನಿಗಳಾದವರಲ್ಲಿ ಹೆಚ್ಚು ವ್ಯಾಪಕವಾಗಿ ನಾಸ್ತಿಕವಾದ ಇದೆ ಎಂಬ ಜನರ ಅಭಿಪ್ರಾಯ ಎಂದೂ ಸಾಬೀತಾಗಿಲ್ಲ. ಅನೇಕ ವಿಜ್ಞಾನಿಗಳು ಸ್ವತಃ ಮೊದಲು ಹೊಂದಿದ್ದ ಕಲ್ಪನೆಗೆ ವಿರುದ್ಧವಾಗಿರುವ ವಾಸ್ತವಿಕತೆಯಾಗಿದೆ ಇದು."

(ಎವಿಡೆನ್ಸ್– ಪುಟ 70)

ಡಾಕ್ಟರ್ ಎಚ್.ಟಿ. ಸ್ಟೆಟ್‌ಸನ್, ಅಮೇರಿಕದ ಒಹೈಯೋದ ಪರ್ಕಿನ್ಸ್ ಒಬ್‌ಸರ್‌ವೇಟರಿಯ ಮಾಜಿ ಡೈರೆಕ್ಟರ್ ಹೀಗೆ ಬರೆದಿದ್ದಾರೆ:

"ವಿಜ್ಞಾನ ಕ್ಷೇತ್ರದ ಪ್ರಮುಖರಲ್ಲಿ ಹಲವರು ಧರ್ಮದ ನಿಷ್ಠಾವಂತ ಅನುಯಾಯಿಗಳಾಗಿದ್ದಾರೆಂಬುದು ಗಮನಾರ್ಹವಾಗಿದೆ. ಗೆಲಿಲಿಯೋ, ನ್ಯೂಟನ್, ಫೆರಡೇ, ಕೆಲ್‌ವಿನ್ ಮತ್ತು ಪ್ಯಾಶ್ಚರ್ ಮೊದಲಾದವರು ಅವರಲ್ಲಿ ಸೇರಿದ್ದಾರೆ."

(ಮ್ಯಾನ್ ಆ್ಯಂಡ್ ದಿ ಸ್ಟಾರ್ಸ್ – ಲೇಖಕ:H.T.STETSON- ಪುಟ 214)

ಅಹ್ಮದಿಯಾ ಜಮಾಅತಿನ ಸ್ಥಾಪಕರ ಪುತ್ರರಾದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ತನ್ನ ಉರ್ದು ಪುಸ್ತಕ "ಹಮಾರಾ ಖುದಾ"ದಲ್ಲಿ ಹೀಗೆ ಬರೆದಿರುವರು:

"ದೇವನ ಅಸ್ತಿತ್ವದ ಬಗೆಗಿನ ವಿಶ್ವಾಸದ ಕುರಿತು ಹೇಳುವುದಾದರೆ, ಅನೇಕ ವಿಜ್ಞಾನಿಗಳು ದೇವನನ್ನು ನಂಬುತ್ತಿದ್ದರೆಂದು ತಿಳಿದು ಬರುತ್ತದೆ. ಬಹಳ ಕಡಿಮೆ ಸಂಖ್ಯೆಯ ವಿಜ್ಞಾನಿಗಳು ದೇವನ ಅಸ್ತಿತ್ವವನ್ನು ನಿರಾಕರಿಸುತ್ತಾರೆ. ದೇವನ ಅಸ್ತಿತ್ವವನ್ನು ನಿರಾಕರಿಸದವರ ಸಂಖ್ಯೆಹೆಚ್ಚಾಗಿದೆ."

ಅನೇಕ ವಿಜ್ಞಾನಿಗಳು ದೇವನ ಅಸ್ತಿತ್ವದಲ್ಲಿ ನಂಬಿಕೆ ಹೊಂದಿರುವರೆಂದು ನನಗೆ ನನ್ನ ಸ್ವಂತ ಅನುಭವದಿಂದ ತಿಳಿದಿದೆ.

ಉಸ್ಮಾನಿಯಾ ಯುನಿವರ್ಸಿಟಿಯ ಪ್ರೊಫೆಸರ್ ಆಫ್ ಫಿಸಿಕ್ಸ್ (ಭೌತಶಾಸ್ತ್ರದ ಪ್ರೊಫೆಸರ್) ಮತ್ತು ಅದರ ವೈಸ್‌ಚಾನ್ಸಿಲರ್ ಆಗಿದ್ದ ಡಾಕ್ಟರ್ ರಾವಡ ಸತ್ಯನಾರಾಯಣ ಅವರ ಮಾರ್ಗದರ್ಶನದಲ್ಲಿ ನಾನು ಸಂಶೋಧನೆ ಪ್ರಾರಂಭಿಸಿದೆ ಮತ್ತು ಪ್ರೊಫೆಸರ್ ನೆಲ್ಸನ್ ಲಿಂಬರ್ ಅವರ ನೇತೃತ್ವದಲ್ಲಿ ನಾನು ಪಿಎಚ್.ಡಿ.ಗೆ ಸಂಶೋಧನೆ ಮುಂದುವರಿಸಿದೆ. ಇವರಿಬ್ಬರೂ ದೇವನ ಬಗ್ಗೆ ದೃಢವಿಶ್ವಾಸ ಹೊಂದಿದವರಾಗಿದ್ದರು.

## ವಿಶ್ವದ ಉದ್ಭವ

ವಿಶ್ವದ ಉದ್ಭವ ಹೇಗೆ ಸಂಭವಿಸಿತು ಎಂಬುದರ ಬಗ್ಗೆ ಮೂರು ಸಾಧ್ಯತೆಗಳಿವೆ:

(1) ವಿಶ್ವ ಅನಾದಿಯಿಂದಲೇ ಅಸ್ತಿತ್ವದಲ್ಲಿತ್ತು.

(2) ವಿಶ್ವವು ನಾಸ್ತಿಯಿಂದ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂತು.

(3) ವಿಶ್ವವು ಬುದ್ಧಿಶಾಲಿಯಾದ ಸರ್ವೋಚ್ಚ ಸರ್ವಶಕ್ತ ಅಸ್ತಿತ್ವದಿಂದ ಸೃಷ್ಟಿಸಲ್ಪಟ್ಟಿತು. ಆ ಸರ್ವಶಕ್ತನನ್ನು ನಾವು ದೇವನೆಂದು ಕರೆಯುತ್ತೇವೆ.

ವಿಜ್ಞಾನವು ಮೇಲೆ ಪ್ರಸ್ತಾಪಿಸಿದ ಮೂರು ಸಾಧ್ಯತೆಗಳಲ್ಲಿ ಮೊದಲಿನ ಎರಡು ಸಾಧ್ಯತೆಗಳನ್ನು ಬೆಂಬಲಿಸುವುದಿಲ್ಲ ಎಂದೂ ಮೂರನೆಯದನ್ನು ಬೆಂಬಲಿಸುತ್ತದೆ ಎಂದೂ ಸಾಕ್ಷ್ಯಾಧಾರಗಳ ಮೂಲಕ ವಿವರಿಸುವೆನು.

## ವಿಶ್ವವು ಅನಾದಿಕಾಲದಿಂದ ಅಸ್ತಿತ್ವದಲ್ಲಿರಲಿಲ್ಲ

ಇಪ್ಪತ್ತನೆಯ ಶತಮಾನದಲ್ಲಿ ಖಗೋಳಶಾಸ್ತ್ರದ ಎಷ್ಟು ಪ್ರಗತಿ ಉಂಟಾಯಿತೆಂದರೆ ವಿಶ್ವದ ಪ್ರಾಯವನ್ನು ಅಂದಾಜುಮಾಡಲಾಗಿದೆ. ಹೊಸ ವೀಕ್ಷಣೆಗಳ ಫಲವಾಗಿ ಈ ಪ್ರಾಯದ ಅಂದಾಜನ್ನು ಪರಿಷ್ಕರಿಸಬಹುದಾಗಿದೆ. ಆದರೆ ನೈಸರ್ಗಿಕ ನಿಯಮಗಳ ವೀಕ್ಷಣೆಗಳಿಂದ ವಿಶ್ವದ ಪ್ರಾಯವನ್ನು ಅಂದಾಜು ಮಾಡಲು ಸಾಧ್ಯವಾದುದು ಇಪ್ಪತ್ತನೆಂತು ಶತಮಾನದ ಸಂಶೋಧನೆಗಳಲ್ಲಿ ಅತ್ಯಂತ ಮಹತ್ವಪೂರ್ಣವಾದುದಾಗಿದೆ. ಇದು ಪವಿತ್ರಖುರ್‌ಆನಿನಲ್ಲಿ ಉಲ್ಲೇಖಿಸಲಾದ ಭವಿಷ್ಯವಾಣಿಯ ಭವ್ಯ ಈಡೇರಿಕೆಯೂ ಆಗಿದೆ. ಪವಿತ್ರಖುರ್‌ಆನ್ ಹೇಗೆ ಹೇಳಿದೆ:

"ಆಕಾಶದ ಚರ್ಮ ಸುಲಿಯಲ್ಪಡುವಾಗ" (81:12)

ಇದು ಖಗೋಳಶಾಸ್ತ್ರದ ಪ್ರಗತಿಯನ್ನು ಸೂಚಿಸುತ್ತದೆ. ಹಿಂದಿನ ಶತಮಾನಗಳಲ್ಲಿ ವಿಶ್ವದ ಪ್ರಾಯವನ್ನು ಕಂಡುಹಿಡಿಯಲು ಸಾಧ್ಯವಿರಲಿಲ್ಲ, ವಾಸ್ತವಿಕ ಸಂಗತಿ ಏನೆಂದರೆ, ಹತ್ತೊಂಬತ್ತನೆಯ ಶತಮಾನದ ತನಕ ಖಗೋಳಶಾಸ್ತ್ರಜ್ಞರಿಗೆ ಗ್ಯಾಲಕ್ಸಿ (ಆಕಾಶಗಂಗೆ) ಏನೆಂದು ತಿಳಿದಿರಲಿಲ್ಲ.

ಇಂದಿನ ಕಾಲದಲ್ಲಿ ನಮಗೆ ಲಭಿಸಿದ ಜ್ಞಾನದ ಪ್ರಕಾರ, ವಿಶ್ವದ ಪ್ರಾಯ ಹದಿನೈದು ಬಿಲಿಯನ್ ವರ್ಷಗಳಾಗಿವೆ. ಒಂದು ವಸ್ತುವಿನ ಪ್ರಾಯವನ್ನು ಗೊತ್ತುಹಚ್ಚಬಹುದಾದರೆ ಆ ವಸ್ತು ಅನಾದಿಯಿಂದ ಅಸ್ತಿತ್ವದಲ್ಲಿರಲಿಲ್ಲ ಎಂದು ಸ್ಪಷ್ಟವಾಗುತ್ತವೆ. ಆದುದರಿಂದ ನಮ್ಮ ವಿಶ್ವ ಸಹ ಅನಾದಿಯಿಂದ ಅಸ್ತಿತ್ವದಲ್ಲಿರಲಿಲ್ಲ.

ವಿಶ್ವದ ಪ್ರಾಯವನ್ನು ನಿರ್ಧರಿಸಿರುವುದು ಗಗನ ವೀಕ್ಷಣೆಗಳಿಂದಾಗಿದೆ. ನಮ್ಮ ವಿಶ್ವವು ಅಸಂಖ್ಯಾತ ಗ್ಯಾಲಕ್ಸಿಗಳನ್ನು ಹೊಂದಿವೆ ಎಂದು ಕಂಡುಕೊಳ್ಳಲಾಗಿದೆ. ಪ್ರತಿಯೊಂದು ಗ್ಯಾಲಕ್ಸಿಯಲ್ಲಿ ಬಿಲಿಯನ್‌ಗಟ್ಟಲೆ ನಕ್ಷತ್ರಗಳು ನಮ್ಮ ಸೂರ್ಯನ ಹಾಗೆ ಇವೆ. 1929ರಲ್ಲಿ ಪ್ರೊಫೆಸರ್ ಎಲ್ವೆನ್‌ಹಬ್ಲ್ ಗ್ಯಾಲಕ್ಸಿಗಳ ಗುಂಪುಗಳನ್ನು ವೀಕ್ಷಿಸಿದಾಗ ಗ್ಯಾಲಕ್ಸಿಗಳು ಪರಸ್ಪರ ಅತಿವೇಗದಿಂದ ಅವುಗಳು ಪರಸ್ಪರ ಹೊಂದಿರುವ ದೂರದ ಪ್ರಮಾಣಕ್ಕೆ ಸರಿಯಾಗಿ ದೂರಕ್ಕೆ ಚಲಿಸುವುದಾಗಿ ಕಂಡು ಹಿಡಿದರು. ಇದರಿಂದ ಸ್ಪಷ್ಟವಾಗುವುದೇನೆಂದರೆ, ಬಹಳ ಪುರಾತನ ಕಾಲದಲ್ಲಿ ಅವು ಪರಸ್ಪರ ಬಹಳ ಸಮೀಪವಾಗಿ ಇದ್ದುವು. ಸಾಮಾನ್ಯವಾಗಿ ಅಂಗೀಕರಿಸಲ್ಪಡುವ ಒಂದು ಅಭಿಪ್ರಾಯವೇನೆಂದರೆ, ಅಂದಾಜು ಹದಿನೈದು ಬಿಲಿಯನ್ ವರ್ಷಗಳ ಹಿಂದೆ ಗ್ಯಾಲಕ್ಸಿಗಳ ನಿರ್ಮಾಣಗಳಿಗೆ ಕಾರಣವಾದ ಪದಾರ್ಥವು ಒಂದೇ ಸ್ಥಳದಲ್ಲಿ ಇತ್ತು. ಅದು ಅತ್ಯಂತ ತಾಪಭರಿತವೂ ಗಾಢವೂ ಆಗಿತ್ತು. ಆಗ ಒಂದು ಮಹಾಸ್ಫೋಟ ಉಂಟಾಯಿತು. ಆಗ ಆ ಪದಾರ್ಥವು ಅನೇಕ ಭಾಗಗಳಾಗಿ ಚದುರಿಹೋದುವು ಮತ್ತು ಆ ಭಾಗಗಳು ಒಂದು ಇನ್ನೊಂದರಿಂದ ದೂರ ಸರಿದುವು. ಈ ಭಾಗಗಳಿಂದ ಗ್ಯಾಲಕ್ಸಿಗಳು ಮತ್ತು ನಕ್ಷತ್ರಗಳು ಅಸ್ತಿತ್ವಕ್ಕೆ ಬಂದವು. 1965ರಲ್ಲಿ ಪೆಂಜಿಯಸಿನ್‌ದ್ ವಿಲ್ಸನ್ ಒಂದು ರೇಡಿಯೋ ರೆಡಿಯೇಶನನ್ನು ಕಂಡುಹಿಡಿದರು. ಅದರ ತಾಪದ ಬ್ಲಾಕ್‌ಬೋಡಿ ರೇಡಿಯೇಶನ್ ಮೂರು ಕೆಲ್ವಿನ್ ಡಿಗ್ರಿಗಳಷ್ಟಿತ್ತು. ಈ ಕಂಡು ಹಿಡಿತವು ಮೇಲಿನ ವಾದವನ್ನು ಪುರಸ್ಕರಿಸುತ್ತದೆ.

ಅಮೇರಿಕದ ವಿಜ್ಞಾನಿ ಡಾಕ್ಟರ್ ಹ್ಯಾರಿ ಎಲ್. ಶಿಪ್‌ಮ್ಯಾನ್ (ಯುನಿವರ್ಸಿಟಿ ಆಫ್ ಡೆಲವರೆ) ಬ್ಲ್ಯಾಕ್ ಹೋಲ್ಸ್, ಕ್ವಸಾರ್ಸ್ ಆ್ಯಂಡ್ ಯೂನಿವರ್ಸ್ (BLACK HOLES, QUASARS AND UNIVERSE) ಎಂಬ ಪುಸ್ತಕದಲ್ಲಿ ಕೊನೆಯದಾಗಿ ಹೀಗೆ ಹೇಳುತ್ತಾರೆ:

"ಬಿಗ್ ಬ್ಯಾಂಗ್ ತಿಯರಿ (ಮಹಾಸ್ಫೋಟ ಸಿದ್ಧಾಂತ) ಒಂದು ಪ್ರಶ್ನೆಗೆ ಉತ್ತರ ಕೊಡದೆ ಬಿಟ್ಟಿದೆ. ಮಹಾಸ್ಫೋಟ ಸಂಭವಿಸಲು ಕಾರಣವಾದ ಪದಾರ್ಥವನ್ನು ಯಾರು ಸೃಷ್ಟಿಸಿದರು? ಇದಕ್ಕೆ ಖಗೋಳ ಶಾಸ್ತ್ರಜ್ಞರಲ್ಲಿ ಉತ್ತರವಿಲ್ಲ. ವಿಶ್ವದ ಉದ್ಭವದ ಪ್ರಾರಂಭಿಕ ಕ್ಷಣಗಳ ಕಡೆಗೆ ನಾವು ಹಿಂದಿರುಗಿ ನೋಡಬಹುದು. ಆದರೆ ನಮ್ಮ ನೋಟ ಅಲ್ಲಿಯೇ ನಿಲ್ಲುತ್ತದೆ. ಈ ಪುಸ್ತಕ ದಾರ್ಶನಿಕನಿಗೂ ಧರ್ಮಶಾಸ್ತ್ರಜ್ಞನಿಗೂ ಸೃಷ್ಟಿಯ ಬಗ್ಗೆ ಒಂದು ಸಮಸ್ಯೆಯನ್ನು ಪರಿಹರಿಸಲು ಸಹಾಯ ನೀಡುತ್ತದೆ." (ಪುಟ 288)

ಪವಿತ್ರ ಖುರ್‌ಆನ್ ಸರ್ವಶಕ್ತನಾದ ದೇವನ ಅಸ್ತಿತ್ವದ ಬಗ್ಗೆ ಹೀಗೆ ಹೇಳುತ್ತದೆ:

"ಕೊನೆಗೆ ಎಲ್ಲವೂ ನಿನ್ನ ಪ್ರಭುವಿನ ಬಳಿಗೆ ಬಂದು ಸೇರುವುವು."
(53:43)

ಪವಿತ್ರ ಖುರ್‌ಆನ್ ದೇವನ ಅಸ್ತಿತ್ವದ ಬಗ್ಗೆ ಬಹಳ ಸ್ಪಷ್ಟವಾಗಿ ಹೀಗೆ ಹೇಳುತ್ತದೆ:

"ಅವಿಶ್ವಾಸಿಗಳು ಕಾಣುವುದಿಲ್ಲವೇ – ಆಕಾಶಗಳೂ ಭೂಮಿಯೂ ಅನ್ಯೋನ್ಯ ಒಟ್ಟುಗೂಡಿಕೊಂಡಿದ್ದುವು. ಮತ್ತೆ ನಾವು ಅವುಗಳನ್ನು ಬೇರ್ಪಡಿಸಿದೆವು. ಪ್ರತಿಯೊಂದು ಜೀವಿಯನ್ನು ನಾವು ನೀರಿನಿಂದ ಸೃಷ್ಟಿಸಿದೆವು. ಅವರು ನಂಬುವುದಿಲ್ಲವೇ?" (21:31)

(ಈ ವಚನದ ಬಗ್ಗೆ ಅತ್ಯುತ್ತಮ ವ್ಯಾಖ್ಯಾನಕ್ಕೋಸ್ಕರ The Bible, the Quran and Science, ಲೇಖಕ : 6MAURICE BUCAILLE ನೋಡಿರಿ.)

ಭೌತಶಾಸ್ತ್ರದ ಎಂಟ್ರೊಪಿ ನಿಯಮದಿಂದ ವಿಶ್ವವು ಅನಾದಿಯಿಂದ ಅಸ್ತಿತ್ವದಲ್ಲಿರಲಿಲ್ಲ ಎಂದು ನಿಷ್ಕರ್ಷಿಸಲಾಗಿದೆ. ಈ ನಿಯಮ ಹೀಗೆ

ಪ್ರತಿಪಾದಿಸುತ್ತದೆ: ಬಿಸಿ ಪದಾರ್ಥಗಳು ಮತ್ತು ಅದಕ್ಕಿಂತ ತಣ್ಣಗಿರುವ ಪದಾರ್ಥಗಳು ಪರಸ್ಪರ ತಾಗಿಕೊಂಡಿದ್ದರೆ ಶಕ್ತಿಯು ಬಿಸಿ ಪದಾರ್ಥದಿಂದ ತಣ್ಣಗಿರುವುದಕ್ಕೆ ಹರಿಯುವುದು. ಕೊನೆಗೆ ಎಲ್ಲ ಪದಾರ್ಥಗಳ ತಾಪಮಾನ ಸಾರ್ವತ್ರಿಕವಾಗಿ ಸಮಾನವಾಗಿರುವುದು, ಪ್ರಯೋಜನಕರವಾದ ಶಕ್ತಿಯು ಇಲ್ಲದಾಗುವುದು ಮತ್ತು ಜೀವನವೇ ಇಲ್ಲದಾಗುವುದು. ಎಂಟ್ರೋಪಿ ನಿಯಮ ಮತ್ತು ಮಹಾಸ್ಫೋಟಕ್ಕೆ ಸಂಬಂಧಿಸಿ ಡಾಕ್ಟರ್ ಎಡ್ವಿನ್ ಲೂತರ್ ಕೆಸ್ಸೆಲ್ (ಪ್ರೊಫೆಸರ್ ಆಫ್ ಬಯೋಲಜಿ, ಯುನಿವರ್ಸಿಟಿ ಆಫ್ ಸಾನ್ ಫ್ರಾನ್ಸಿಸ್ಕೋ) ಹೀಗೆ ಬೆಳಕು ಬೀರಿರುವರು:

"ಇಲ್ಲಿ ವಿವರಿಸಲಾದ ವೈಜ್ಞಾನಿಕ ಸಾಕ್ಷ್ಯಗಳನ್ನು ಎಲ್ಲ ವಿಜ್ಞಾನಿಗಳು ಪ್ರಾಮಾಣಿಕವಾಗಿ, ಪೂರ್ವಗ್ರಹವಿಲ್ಲದೆ ತಮ್ಮ ಸ್ವಂತ ಸಂಶೋಧನೆಗಳನ್ನು ಮೌಲ್ಯ ಮಾಪನ ಮಾಡುವ ಹಾಗೆ ಮೌಲ್ಯ ಮಾಪನ ಮಾಡಲು ಸಿದ್ಧರಾಗುವುದಾದರೆ; ಅವರು ತಮ್ಮ ಭಾವೋದ್ವೇಗಗಳ ಮೇಲೆ ತಮ್ಮ ವಿವೇಕ ಅಧಿಕಾರ ಚಲಾಯಿಸುವಂತೆ ಮಾಡುವುದಾದರೆ; ಅವರು ಒಬ್ಬ ದೇವನಿದ್ದಾನೆ ಎಂದು ನಂಬಲು ನಿರ್ಬಂಧಿಸಲ್ಪಡುವರು. ವಾಸ್ತವಿಕಾಂಶಗಳಿಗೆ ಅನುಯೋಜ್ಯವಾದ ತೀರ್ಪು ಇದೇ ಆಗಿರುತ್ತದೆ. ತೆರೆದ ಮನಸ್ಸಿನಿಂದ ವಿಜ್ಞಾನವನ್ನು ಅಧ್ಯಯನ ಮಾಡುವುದಾದರೆ ಪ್ರಥಮ ಕಾರಣದ ಆವಶ್ಯಕತೆಯನ್ನು ಸೂಚಿಸುವುದು. ಇದನ್ನೇ ನಾವು ದೇವನೆಂದು ಹೇಳುತ್ತೇವೆ." (ಎವಿಡೆನ್ಸ್ – ಪುಟ 52)

ನಮ್ಮ ವಿಶ್ವ ಅನಾದಿಕಾಲದಿಂದ ಅಸ್ತಿತ್ವದಲ್ಲಿತ್ತೆಂಬ ಅಭಿಪ್ರಾಯವನ್ನು ರಸಾಯನಶಾಸ್ತ್ರ ಸಹ ವಿರೋಧಿಸುತ್ತದೆ. ರಸಾಯನ ಶಾಸ್ತ್ರಜ್ಞ ಡಾಕ್ಟರ್ ಜಾನ್ ಕ್ಲೀವ್‌ಲೇಂಡ್ (ಪ್ರೊಫೆಸರ್ ಆಫ್ ಕೆಮಿಸ್ಟ್ರಿ) ಹೀಗೆ ಬರೆದಿದ್ದಾರೆ:

"ಪದಾರ್ಥವು ಅಸ್ತಿತ್ವರಹಿತವಾಗುತ್ತಾ ಇದೆ, ಕೆಲವು ಅತ್ಯಂತ ನಿಧಾನವಾಗಿಯೂ ಬೇರೆ ಕೆಲವು ಅತ್ಯಂತ ವೇಗವಾಗಿಯೂ ಎಂದು ರಸಾಯನ ಶಾಸ್ತ್ರ ಬಹಿರಂಗಪಡಿಸುತ್ತದೆ. ಆದುದರಿಂದ ಪದಾರ್ಥದ ಅಸ್ತಿತ್ವ ಅನಾದಿ ಅಲ್ಲ. ಇದರ ಪರಿಣಾಮವಾಗಿ ಸ್ಪಷ್ಟವಾಗುವುದೇನೆಂದರೆ ಪದಾರ್ಥಕ್ಕೆ ಒಂದು ಪ್ರಾರಂಭವಿರಬೇಕಾಗಿದೆ.

(ಎವಿಡೆನ್ಸ್ – ಪುಟ 41)

ವಿಶ್ವದಲ್ಲಿ ರೇಡಿಯೋ ಏಕ್ಟಿವ್ ಮೂಲವಸ್ತುಗಳು ಇರುವುದರಿಂದ ವಿಶ್ವವು ಅನಾದಿಕಾಲದಿಂದ ಅಸ್ತಿತ್ವದಲ್ಲಿರಲಿಲ್ಲ ಎಂದು ಸೂಚಿಸಲ್ಪಡುತ್ತದೆ.

ಡಾಕ್ಟರ್ ಡೊನಾಲ್ಡ್ ರೋಬರ್ಟ್‌ಕಾರ್ (ಜಿಯೋ ಕೆಮಿಸ್ಟ್) ಹೀಗೆ ಬರೆಯುತ್ತಾರೆ:"ವಿಶ್ವವು ಅನಾದಿಯಾಗಿದ್ದುದಾದರೆ ಅದರಲ್ಲಿ ರೇಡಿಯೋ ಆಕ್ಟಿವ್ ವಸ್ತುಗಳು ಬಾಕಿಯಾಗಿ ಉಳಿಯುತ್ತಿರಲಿಲ್ಲ."

(ಎವಿಡೆನ್ಸ್ – ಪುಟ 134)

ಸಂಕ್ಷಿಪ್ತವಾಗಿ ಹೇಳುವುದಾದರೆ, ಖಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಭೂಗರ್ಭಶಾಸ್ತ್ರ ಇವೆಲ್ಲವೂ ವಿಶ್ವವು ಅನಾದಿಯಿಂದ ಇತ್ತೆಂಬ ಅಭಿಪ್ರಾಯವನ್ನು ಒಮ್ಮತದೊಂದಿಗೆ ತಿರಸ್ಕರಿಸುತ್ತವೆ.

ದೇವನ ಅಸ್ತಿತ್ವವನ್ನು ನಂಬದ ವಿಜ್ಞಾನಿಗಳು ಏನು ಹೇಳುತ್ತಾರೆ? ಎಂಬ ಪ್ರಶ್ನೆ ಕೇಳಬಹುದಾಗಿದೆ. ಡಾಕ್ಟರ್ ವಿ. ಎನ್. ಕೊಮೊರೋವ್ (Dr. V. N . KOMOROV) ತನ್ನ ಫ್ಯಾಸ್ಸಿನೇಟಿಂಗ್ ಎಸ್ಟ್ರೋನೊಮೀ (FASCINATING ASTRONOMY) ಎಂಬ ಪುಸ್ತಕದಲ್ಲಿ ಸೋವಿಯಟ್ ಯೂನಿಯನಿನ ಒಬ್ಬ ಪ್ರಮುಖ ದಾರ್ಶನಿಕ Pyotr Fedoseyev ಹೇಳಿದ ಮಾತುಗಳನ್ನು ಹೀಗೆ ಉಲ್ಲೇಖಿಸುತ್ತಾರೆ:

"ಲೌಕಿಕ ದರ್ಶನಶಾಸ್ತ್ರ, ಭೌತಿಕ ಲೋಕದ ಸೃಷ್ಟಿ ಒಂದು ಸರ್ವಶ್ರೇಷ್ಠ ಪ್ರಜ್ಞೆ ಅಥವಾ ಶಕ್ತಿಯಿಂದ ಸೃಷ್ಟಿಸಲ್ಪಟ್ಟಿತೆಂದು ಒಪ್ಪುವುದಿಲ್ಲ. ಈ ವಿಶ್ವವು ಇಪ್ಪತ್ತು ಬಿಲಿಯನ್ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿತು ಎಂದು ನಾವು ಅಂಗೀಕರಿಸುವುದಾದರೆ, ದಾರ್ಶನಿಕ ನಿಲುವು ಅನುಸರಿಸಿ ಮುಖ್ಯವಾಗಿ ತಿಳಿದುಕೊಳ್ಳಬೇಕಾದುದೇನೆಂದರೆ, ಇದರ ಮೂಲ ಪದಾರ್ಥವು ಬೃಹತ್ ಗಾತ್ರದಲ್ಲಿ ಸ್ವಯಂ ಸೃಷ್ಟಿಗೊಂಡಿತು. ಇದನ್ನು ಭೌತಿಕಶಾಸ್ತ್ರವು ಸ್ಪಷ್ಟರೂಪದಲ್ಲಿ ವಿಶದೀಕರಿಸಬೇಕಾಗಿದೆ. ಹಲವು ವಿಶ್ವಗಳು ಸಂಕೀರ್ಣ ವ್ಯವಸ್ಥೆಯೊಂದಿಗೆ ಅಸ್ತಿತ್ವಕ್ಕೆ ಬಂದುದನ್ನು ಸಹ ಕಲ್ಪಿಸಬಹುದಾಗಿದೆ. ಪ್ರಕೃತಿ ವಿಜ್ಞಾನಿಗಳು ಇಷ್ಟರವರೆಗೆ ಸಂಗ್ರಹಿಸಿದ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ಮಾಡುವ ಕಲ್ಪನೆಗಳಿಂದ ದಾರ್ಶನಿಕ ಕಲ್ಪನೆಗಳನ್ನು ಬೇರೆಯಾಗಿ ತಿಳಿದುಕೊಳ್ಳಬೇಕಾಗಿದೆ. ದಾರ್ಶನಿಕ ಕಲ್ಪನೆಗಳಲ್ಲಿ ವಿಶ್ವದ ಅಧ್ಯಯನ ಮಾಡುವಾಗ ಪ್ರಕೃತಿಶಾಸ್ತ್ರ ಮುಂದೆ ಕಂಡುಹಿಡಿಯಬಹುದಾದ ಎಲ್ಲ ರಹಸ್ಯಗಳೂ ಅಡಕವಾಗಿವೆ."

(The Fascinating Astronomy - Page 137)

ಮೇಲಿನ ಉಲ್ಲೇಖದಿಂದ ಸ್ಪಷ್ಟವಾಗುವುದೇನೆಂದರೆ, ದೇವನ ಅಸ್ತಿತ್ವವನ್ನು ನಿರಾಕರಿಸುವವರ ಬಳಿಯಲ್ಲಿ ತಮ್ಮ ವಾದವನ್ನು ಬೆಂಬಲಿಸುವ ಯಾವ ಸಾಕ್ಷ್ಯಾಧಾರವೂ ಇಲ್ಲ, ಅವರು ತಮ್ಮ ಸಿದ್ಧಾಂತಗಳಿಗನುಸಾರವಾಗಿ ಮಾತ್ರ ವಾದಿಸುತ್ತಾರೆ. ವಿಶ್ವದ ನಿರ್ಮಾಣಕ್ಕೆ ಕಾರಣವಾದ ಮೂಲ ಪದಾರ್ಥ ಎಲ್ಲಿಂದ ಅಸ್ತಿತ್ವಕ್ಕೆ ಬಂತು ಎಂದು ಅವರಿಗೆ ತಿಳಿದಿಲ್ಲ. ಅವರು ತಮ್ಮ ದಾರ್ಶನಿಕ ಮನೋಭಾವದ ಕಾರಣದಿಂದ ಪ್ರತೀಕ್ಷೆ ಮಾಡುವುದೇನೆಂದರೆ, ವಿಜ್ಞಾನವು ಮುಂದಿನ ಕಾಲದಲ್ಲಿ ಇದಕ್ಕೆ ಉತ್ತರವನ್ನು ಒದಗಿಸಿಕೊಡುವುದು. ಮುಂದಿನಕಾಲದಲ್ಲಿ ವಿಜ್ಞಾನವು ಮೂಲ ಪದಾರ್ಥವು ಉದ್ಭವಿಸಿದ ಮೂಲವನ್ನು ಕಂಡು ಹಿಡಿದರೆ, ದೇವ ವಿಶ್ವಾಸಿಗಳು, ಆ ಮೂಲವು ಹೇಗೆ ಅಸ್ತಿತ್ವಕ್ಕೆ ಬಂತು? ಎಂದು ಕೇಳುವರು.

ಪವಿತ್ರ ಖುರ್‌ಆನಿನ "ಎಲ್ಲ ಕಾರ್ಯಕಾರಣ ಸರಣಿಗಳು ನಿನ್ನ ಪ್ರಭುವಿನಲ್ಲಿ ಕೊನೆಗೊಳ್ಳುತ್ತವೆ" (53:54) ಇದರ ವ್ಯಾಖ್ಯಾನವಾಗಿ ವಾಗ್ದತ್ತ ಮಸೀಹ್[ಅ] ಹೀಗೆ ಹೇಳುತ್ತಾರೆ:

"ಈ ಬ್ರಹ್ಮಾಂಡದಲ್ಲಿ ಗೋಚರಾಗೋಚರಗಳಾದ ಎಲ್ಲವೂ ಕಾರ್ಯಕಾರಣ ವ್ಯವಸ್ಥೆಯಿಂದ ಕೂಡಿವೆಯೆಂಬ ವಿಚಾರ ಸೂಕ್ಷ್ಮವಾಗಿ ಪರಿಶೀಲಿಸಿದರೆ ಕಾಣಬಹುದಾಗಿದೆ. ಈ ವ್ಯವಸ್ಥೆಯ ಸಾರ್ವತ್ರಿಕವಾದ ಪ್ರವರ್ತನೆಯೇ ನಾವು ಕಾಣುವ ವಿವಿಧ ವೈಜಾನಿಕ ಹಾಗೂ ತತ್ವಜ್ಞಾನಗಳ ಸೃಷ್ಟಿಗೂ ಬೆಳವಣಿಗೆಗೂ ಕಾರಣವಾಗಿದೆ. ಸೃಷ್ಟಿ ಲೋಕದ ಯಾವ ಅಂಶವೂ ಈ ಕಾರ್ಯಕಾರಣ ಸಂಬಂಧದ ವ್ಯವಸ್ಥೆಯಿಂದ ಹೊರತಾಗಿಲ್ಲ. ಕೆಲವು, ಇನ್ನು ಕೆಲವಕ್ಕೆ ಮೂಲ ಕಾರಣವಾಗಿಯೂ ಕೆಲವು, ಶಾಖೆಗಳಾಗಿಯೂ ಇರುತ್ತವೆ. ಆದಿಕಾರಣ ಹೊರತು ಪ್ರತಿಯೊಂದು ಕಾರ್ಯವೂ ಮತ್ತೊಂದು ಕಾರಣವನ್ನು ಅವಲಂಬಿಸಿದೆ. ಆ ಕಾರಣವು ಇನ್ನೊಂದು ಕಾರ್ಯದ ಪರಿಣಾಮವಾಗಿದೆ. ಹೀಗೆ ಈ ಕಾರ್ಯಕಾರಣ ಸರಣಿ ಹಿಂದಕ್ಕೆ ಹೋಗುತ್ತಲಿರುತ್ತದೆ. ಆದರೆ ಅನಂತವಲ್ಲದ ಈ ಪ್ರಪಂಚದಲ್ಲಿ ನಡೆಯುತ್ತಿರುವ ಈ ಕಾರ್ಯಕಾರಣ ಸರಣಿ ಅನಂತವಾಗಿರಲು ಅಸಾಧ್ಯವಾದುದರಿಂದ ಅದು ಎಲ್ಲಿಯಾದರೂ ಒಂದುಕಡೆ ಕೊನೆಗೊಳ್ಳಲೇ ಬೇಕಾಗಿದೆ. ಹೀಗೆ ಅತ್ಯಂತ ಕೊನೆಯ ಆ ಕಾರಣ ಪ್ರಪಂಚದ ಸೃಷ್ಟಿಕರ್ತನಾಗಿದ್ದಾನೆ. 'ಎಲ್ಲ ಕಾರ್ಯಕಾರಣ ಸರಣಿಗಳು ನಿನ್ನ ಪ್ರಭುವಿನಲ್ಲಿ ಕೊನೆಗೊಳ್ಳುತ್ತವೆ' ಎಂಬ ಪವಿತ್ರ ಖುರ್‌ಆನಿನ ವಚನ ಈ ಅಂತಿಮ ಕಾರಣದೆಡೆಗೆ ನಮ್ಮ ಗಮನವನ್ನು

ಸೆಳೆಯುತ್ತದೆ." (ಇಸ್ಲಾಮೀ ಉಸೂಲ್ ಕೀ ಫಲಾಸಫೀ–ಇಸ್ಲಾಂ ಧರ್ಮ ತತ್ವಜ್ಞಾನ 1993 ಪುಟ 73)

## ವಿಶ್ವವು ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬರಲಿಲ್ಲ

ವಿಶ್ವವು ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂದಿತು ಎಂದು ಹೇಳುವುದು ಅಂಗೀಕಾರಾರ್ಹವಲ್ಲ. ಏಕೆಂದರೆ ವಿಶ್ವ ವ್ಯವಸ್ಥೆಯಲ್ಲಿ ಕಂಡುಬರುವ ಅಪ್ರತಿಮ ಬುದ್ಧಿಶಾಲಿತ್ವವು ಈ ವಾದವನ್ನು ಪುರಸ್ಕರಿಸುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) "ಏನು, ನಿಮ್ಮನ್ನು ಸೃಷ್ಟಿಸುವುದು ಕಷ್ಟವೋ? ಅಥವಾ ಅವನು ಸೃಷ್ಟಿಸಿದ ಆಕಾಶವನ್ನೋ?" (ಪವಿತ್ರ ಖುರ್‌ಆನ್ 79:28) ಎಂಬ ವಚನಕ್ಕೆ ಬರೆದ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ:

"ವಿಶ್ವದ ಸುವ್ಯವಸ್ಥೆಯು ತನ್ನ ಅಸ್ತಿತ್ವಕ್ಕೆ ಸಾಕ್ಷ್ಯಾಧಾರವಾಗಿದೆ ಎಂದು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ. ಮಹಾ ಅದ್ಭುತದಿಂದ ಕೂಡಿದ ಈ ಸುವ್ಯವಸ್ಥೆ ಒಬ್ಬ ಸೃಷ್ಟಿಕರ್ತನ ಕೈ ವರ್ತಿಸುತ್ತದೆ ಎಂಬುದನ್ನು ತೋರಿಸುವುದಿಲ್ಲವೇ? ಎಂದು ಅವನು ಕೇಳುತ್ತಾನೆ. ಅದರ ಪ್ರತಿಯೊಂದು ಭಾಗ ಇನ್ನೊಂದು ಭಾಗವನ್ನು ಅವಲಂಬಿಸಿದೆ. ಯಾವುದೂ ಸ್ವತಂತ್ರವಾಗಿಲ್ಲ. ಅಣುಗಳ ಸಂಯೋಜನೆಯಿಂದ ಈ ಅದ್ಭುತಕರವಾದ ವಿಶ್ವವು ಅಸ್ತಿತ್ವಕ್ಕೆ ಬಂದಿತೆಂದು ವಿಜ್ಞಾನಿಗಳು ಹೇಳುತ್ತಾರೆ. ವಿವಿಧ ಅಣುಗಳು ಸರಿಯಾದ ರೀತಿಯಲ್ಲಿ ಒಗ್ಗೂಡಿ ನಮ್ಮ ಆವಶ್ಯಕತೆಗಳನ್ನು ಈಡೇರಿಸಿದವು ಎಂದು ನಾವು ಅಂಗೀಕರಿಸುತ್ತೇವೆ. ಈ ಲೋಕವನ್ನು ಸೃಷ್ಟಿಸಲು ಅಣುಗಳು ಒಟ್ಟಿಗೆ ಸೇರಿದವು ಎಂದು ನಾವು ಒಪ್ಪುತ್ತೇವೆ. ಆದರೆ ದೇವನಿಲ್ಲವಾದರೆ ಅಣುಗಳು ಸರಿಯಾದ ರೀತಿಗಳಲ್ಲಿ ಒಗ್ಗೂಡಿಸಲ್ಪಟ್ಟು ನಮ್ಮ ಆವಶ್ಯಕತೆಗಳು ಈಡೇರುವಂತೆ ಮಾಡಿದುದು ಹೇಗೆ? ಮನುಷ್ಯನ ಆವಶ್ಯಕತೆಗಳು ಈಡೇರುವಂತೆ ಅಣುಗಳು ಒಗ್ಗೂಡಿದುದು ಆಕಸ್ಮಿಕವಾಗಲು ಸಾಧ್ಯವಿಲ್ಲ.

"ಈ ವಿಶ್ವದ ಹಿನ್ನೆಲೆಯಲ್ಲಿ ಬೇರೆ ಒಂದು ಅಸ್ತಿತ್ವ ಕಾರ್ಯನಿರ್ವಹಿಸುತ್ತದೆ ಎಂದು ನಾವು ಒಪ್ಪಿಕೊಳ್ಳಬೇಕು. ಉದಾಹರಣೆಗೆ, ನಾವು ಒಂದು ಸ್ಥಳದಲ್ಲಿ ಒಂದು ಚರ್ಮದ ತುಂಡನ್ನು ಕಂಡರೆ ಅದು ಆಕಸ್ಮಿಕವಾಗಿ ಅಲ್ಲಿಗೆ ಬಂದಿರಬಹುದು ಎಂದು ಹೇಳಬಹುದು. ಆದರೆ ಚರ್ಮವನ್ನು ಬೂಟು, ಸೋಫಾ, ಕುರ್ಚಿ ಮತ್ತು ಇನ್ನಿತರ ಆವಶ್ಯಕತೆಗಳಿಗೆ ಬಳಸಿರುವುದಾಗಿ ಕಂಡರೆ ಅದು ಆಕಸ್ಮಿಕವಾಗಿ ಹಾಗೆ ಸಂಭವಿಸಿತೆಂದು ಹೇಳಲು ಸಾಧ್ಯವಿಲ್ಲ. ಹಾಗೆ ಸಂಪೂರ್ಣವಾದ ಒಂದು ಸುವ್ಯವಸ್ಥೆ ಆಕಸ್ಮಿಕವೆಂದು ಹೇಳಲಾಗದು. ಕಣ್ಣಿನ ಬಗ್ಗೆ ಹೇಳುವುದಾದರೆ, ಸರ್ವಶಕ್ತನಾದ ದೇವನು ಕಣ್ಣನ್ನು ಸೃಷ್ಟಿಸಿದನು. ಅದು ಬೆಳಕಿನ ಸಹಾಯವಿಲ್ಲದೆ ಕಾಣಲಾರದು ಎಂಬ ಗುಣವನ್ನು ಅದರಲ್ಲಿರಿಸಿದನು. ಭೂಮಿಯಿಂದ ಮಿಲಿಯಾಂತರ ಮೈಲುಗಳಷ್ಟು ದೂರ ಸೂರ್ಯನನ್ನು ಸೃಷ್ಟಿಸಿ ನಮ್ಮ ಕಣ್ಣುಗಳು ಕಾಣಲು ಬೆಳಕನ್ನು ಒದಗಿಸಿದನು. ಇದೇ ರೀತಿ ಮನುಷ್ಯನ ಇತರ ಆವಶ್ಯಕತೆಗಳನ್ನು ಈಡೇರಿಸುವ ವ್ಯವಸ್ಥೆ ಮಾಡಲಾಗಿದೆ. ಮನುಷ್ಯನ ಯಾವುದೇ ಸಹಜ ಆವಶ್ಯಕತೆಯನ್ನು ಈಡೇರಿಸುವ ವ್ಯವಸ್ಥೆ ಮಾಡದೆ ಸರ್ವಶಕ್ತನಾದ ದೇವನು ಬಿಟ್ಟಿಲ್ಲ. ಮನುಷ್ಯನ ಕೆಲವು ಆವಶ್ಯಕತೆಗಳು ಈಡೇರುವಂತೆ ಮನುಷ್ಯನಲ್ಲಿಯೇ ವ್ಯವಸ್ಥೆ ಮಾಡಲಾಗಿದೆ. ಕೆಲವು ಆವಶ್ಯಕತೆಗಳು ಅವನ ಹೊರಗಿನ ವಾತಾವರಣದ ಮೂಲಕ ಈಡೇರುತ್ತವೆ. ಬೇರೆ ಕೆಲವು ಆವಶ್ಯಕತೆಗಳು ಈಡೇರುವ ವ್ಯವಸ್ಥೆಯನ್ನು ಮಿಲಿಯಾಂತರ ಮೈಲುಗಳಷ್ಟು ದೂರದಲ್ಲಿ ಏರ್ಪಡಿಸಲಾಗಿದೆ. ಈ ವ್ಯವಸ್ಥೆ ಎಷ್ಟು ಪರಿಪೂರ್ಣವಾಗಿದೆ ಎಂದರೆ ಇಂತಹ ವ್ಯವಸ್ಥೆ ಆಕಸ್ಮಿಕವಾಗಿ ಸಂಭವಿಸಿದೆಂದು ಯಾವ ಮನುಷ್ಯನಿಗೂ ಚಿಂತಿಸಲು ಸಾಧ್ಯವಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: ಓ ಮನುಷ್ಯರೇ, ನೀವು ಭೂಮಿ ಮತ್ತು ಆಕಾಶದಲ್ಲಿ ಮಾಡಲಾದ ಸುವ್ಯವಸ್ಥೆಯನ್ನು ನೋಡಿರಿ. ಅದು ನಿಮ್ಮ ಸೃಷ್ಟಿಯ ಕೆಲಸಕ್ಕಿಂತ ಹೆಚ್ಚು ಕಷ್ಟಕರವಾದುದೆಂದು ಕಾಣಿಸುವುದಿಲ್ಲವೇ? ಒಂದು ವಿಷಯ ಆಕಸ್ಮಿಕವೆಂದು ಹೇಳಬಹುದು. ಎರಡು ಸಂಭವಗಳು ಆಕಸ್ಮಿಕ ಎನ್ನಬಹುದು. ಆದರೆ ಸಂಪೂರ್ಣ ವಿಶ್ವವ್ಯವಸ್ಥೆ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂತು ಎಂದು ಹೇಗೆ ತಾನೇ ಹೇಳಲು ಸಾಧ್ಯ?" (ತಫ್‌ಸೀರ್ ಕಬೀರ್ – ಅಧ್ಯಾಯ 79 ವಚನ 28ರ ವ್ಯಾಖ್ಯಾನ.)

ಸರ್ವಶಕ್ತನಾದ ದೇವನ ಅಸ್ತಿತ್ವವನ್ನು ಪ್ರತಿಪಾದಿಸಿ ಪವಿತ್ರ ಖುರ್‌ಆನ್ ಉಲ್ಲೇಖಿಸಿದುದನ್ನು ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರು ಸರಳವಾಗಿ ಮೇಲಿನಂತೆ ವಿವರಿಸಿದುದನ್ನೇ ವಿವಿಧ ವಿಜ್ಞಾನಿಗಳು ವಿವರಿಸಿದ್ದಾರೆ.

ಸರ್ ಐಸಾಕ್ ನ್ಯೂಟನ್ ಲೋಕದಲ್ಲಿ ಜನಿಸಿದ ವಿಜ್ಞಾನಿಗಳಲ್ಲಿ ಅತ್ಯಂತ ಶ್ರೇಷ್ಠರೆಂದು ಗಣಿಸಲ್ಪಟ್ಟಿದ್ದಾರೆ. ಅವರು ಹೇಳುವುದೇನೆಂದರೆ, ದೇವನ ಬಗ್ಗೆ ವಿಶ್ವಾಸವನ್ನು ಹೊಂದದೆ ವಿಶ್ವಸೃಷ್ಟಿಯನ್ನು ವಿವರಿಸಲು ಸಾಧ್ಯವಿಲ್ಲ. ಅವರು ಹೀಗೆ ಹೇಳಿದರು:

"ಸೂರ್ಯ, ಗ್ರಹಗಳು, ಧೂಮಕೇತು ಮೊದಲಾದುವುಗಳ ಸುಂದರ ವ್ಯವಸ್ಥೆ ಬುದ್ಧಿಶಾಲಿಯೂ ಶಕ್ತಿಶಾಲಿಯೂ ಆದ ಒಂದು ಅಸ್ತಿತ್ವದಿಂದಲೇ ಹೊರಬರಲು ಸಾಧ್ಯ." (Our Solar System and Stellar Universe, by Charles Whyte P.131 Charles Griffin & Co. Ltd London 1923)

ವಿಜ್ಞಾನಿ ನ್ಯೂಟನ್‌ರ ಕಾಲಘಟ್ಟದಲ್ಲಿ ನೈಸರ್ಗಿಕ ನಿಯಮಗಳ ಅಧ್ಯಯನವನ್ನು ನೇಚುರಲ್ ಫಿಲಾಸಫಿ (Natural Philosophy) ಎಂದು ಕರೆಯಲಾಗುತ್ತಿತ್ತು. ನ್ಯೂಟನ್ ಪ್ರಕಾರ, ವಿಶ್ವದ ಅಧ್ಯಯನದಿಂದ ದೇವನ ಅಸ್ತಿತ್ವವನ್ನು ನಿಷ್ಕರ್ಷಿಸುವುದು ನ್ಯಾಚುರಲ್ ಫಿಲಾಸಫಿಯ ಕ್ಷೇತ್ರಕ್ಕೆ ಸೇರಿದುದಾಗಿತ್ತು. ಆದರೆ ಮುಂದಿನ ಕಾಲಘಟ್ಟದಲ್ಲಿ ಜ್ಞಾನವು ವಿವಿಧ ಭಾಗಗಳಾಗಿ ವಿಂಗಡಿಸಲ್ಪಟ್ಟಾಗ ವಿಜ್ಞಾನಿಯ ಅಧ್ಯಯನವು ಪದಾರ್ಥಗಳಿಗೆ ಸೀಮಿತಗೊಳಿಸಲ್ಪಟ್ಟಿತು. ದೇವನು ಇದ್ದಾನೋ ಇಲ್ಲವೋ ಎನ್ನುವ ಪ್ರಶ್ನೆ ವಿಜ್ಞಾನ ಕ್ಷೇತ್ರದಿಂದ ಹೊರಗಿರುವುದಾಗಿ ಗಣಿಸಲ್ಪಟ್ಟಿತು. ಆದರೆ ಇಪ್ಪತ್ತನೆಯ ಶತಮಾನದ ವಿಜ್ಞಾನಿಗಳು ದೇವಾಸ್ತಿತ್ವದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ.

ಇಪ್ಪತ್ತನೆಯ ಶತಮಾನದ ಶ್ರೇಷ್ಠ ಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದ ಡಾಕ್ಟರ್ ಆಲ್ಬರ್ಟ್ ಐನ್‌ಸ್ಟೈನ್ ಜೊತೆ ಕೆಲಸ ಮಾಡಲು ಸಂದರ್ಭ ಲಭಿಸಿದ್ದ ಡಾಕ್ಟರ್ ಇನ್‌ಫೆಲ್ಡ್, ಐನ್‌ಸ್ಟೈನ್ ಬಗ್ಗೆ ಹೀಗೆ ಹೇಳುತ್ತಾರೆ:

"ಅವರಿಗೆ (ಐನ್‌ಸ್ಟೈನ್‌ರಿಗೆ) ಯಾವುದಾದರೂ ಹೊಸ ಭಾವನೆ ಸ್ಫುರಿಸಿದಾಗ ಅವರು ತನ್ನನ್ನೇ ಹೀಗೆ ಪ್ರಶ್ನಿಸುತ್ತಿದ್ದರು: ದೇವನು ಲೋಕವನ್ನು ಈ ರೀತಿ ಸೃಷ್ಟಿಸಿರಬಹುದೇ? ಅಥವಾ ಈ ಗಣಿತ ಸಿದ್ಧಾಂತ ದೇವನಿಗೆ ಅರ್ಹವಾಗಿದೆಯೇ?"

(Quest, by Leopold Infeld, page 212)

ವಿಶ್ವದ ಸೌಂದರ್ಯ ಮತ್ತು ವೈಭವದಿಂದ ಮೋಹಪರವಶರಾಗಿ

ಮತ್ತು ಅದರಲ್ಲಿ ಅಡಕವಾದ ಅಗಾಧವಾದ ಬುದ್ಧಿಮತ್ತೆಯಿಂದ ಪ್ರಭಾವಿತರಾಗಿ ಡಾಕ್ಟರ್ ಐನ್‌ಸ್ಟೈನ್ ಹೀಗೆ ಹೇಳುತ್ತಾರೆ:

"ಅತ್ಯಂತ ಸುಂದರ ಮತ್ತು ಅತ್ಯಂತ ಗಾಢವಾದ ಭಾವೋದ್ವೇಗವನ್ನು ನಾವು ಅನುಭವಿಸುತ್ತಿರುವುದು ನಿಗೂಢವಾಗಿದೆ. ಅದು ಎಲ್ಲ ವಿಜ್ಞಾನವನ್ನು ಬಿತ್ತುವಂತಹದಾಗಿದೆ. ಇಂತಹ ಭಾವೋದ್ವೇಗಗಳಿಗೆ ಅಪರಿಚಿತನಾಗಿರುವವನು, ವಿಶ್ವವನ್ನು ಆಶ್ಚರ್ಯ ಚಕಿತನಾಗಿ ನೋಡಿ ಭಾವಪರವಶನಾಗದವನು ಮೃತ ಸಮಾನನೇ ಆಗಿದ್ದಾನೆ. ನಾವು ಯಾವುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವೋ, ಅದು ವಾಸ್ತವಿಕವಾಗಿಯೂ ಇದೆ ಎಂದು ತಿಳಿದುಬರುತ್ತದೆ. ಅದು ಅತ್ಯಂತ ಉನ್ನತ ಮಟ್ಟದ ಬುದ್ಧಿಶಾಲಿತ್ವದಿಂದ ತನ್ನನ್ನು ಪ್ರಕಟಿಸುತ್ತದೆ. ಅದರ ಅತ್ಯಂತ ಪ್ರಕಾಶಮಾನವಾದ ಸೌಂದರ್ಯವನ್ನು ನಮ್ಮ ಮಂದ ಇಂದ್ರಿಯಗಳು ಈ ಜ್ಞಾನವನ್ನು ಪ್ರಾಕೃತ ಮಟ್ಟದಲ್ಲಿಯೇ ಗಳಿಸಲು ಸಾಧ್ಯವಾಗುತ್ತದೆ. ನೈಜ ಧಾರ್ಮಿಕತೆಯ ಕೇಂದ್ರದಲ್ಲಿ ಈ ಭಾವನೆಯು ಇದೆ."

ಅವರು ಪುನಃ ಹೇಳುತ್ತಾರೆ: "ನಮ್ಮ ಧರ್ಮ ಸೀಮಾತೀತ ಶ್ರೇಷ್ಠ ಸ್ಫೂರ್ತಿಯ ಬಗ್ಗೆ ಮೆಚ್ಚಿಗೆ ಸೂಚಿಸುವುದಾಗಿದೆ. ಅದನ್ನು ನಮ್ಮ ಬಲಹೀನ ಮನಸ್ಸು ಅರ್ಥಮಾಡಿಕೊಳ್ಳುವಷ್ಟು ಸ್ವಲ್ಪ ಮಟ್ಟಿಗೆ ವಿವರಣೆಯೊಂದಿಗೆ ತನ್ನನ್ನು ಪ್ರಕಟಿಸುತ್ತದೆ. ಒಂದು ಶ್ರೇಷ್ಠ ವೈಚಾರಿಕ ಶಕ್ತಿಯು ನಾವು ಪೂರ್ಣವಾಗಿ ಮನವರಿಕೆ ಮಾಡಿಕೊಳ್ಳಲು ಅಸಾಧ್ಯವಾಗಿ ಈ ವಿಶ್ವದಲ್ಲಿದೆ ಎಂಬ ಗಾಢವಾದ ಭಾವನಾತ್ಮಕ ವಿಶ್ವಾಸ ದೇವನ ಬಗ್ಗೆ ನನ್ನ ಅಭಿಪ್ರಾಯವನ್ನು ರೂಪಿಸುತ್ತದೆ." (The Universe and Dr.Einstein, by Lincoln Benett page 18. Mentor 1950.)

ವಿಶ್ವದ ಉದ್ಭವ ಮತ್ತು ಜೀವೋದಯ ವಿಜ್ಞಾನದ ಎರಡು ಮೂಲಭೂತ ಸಂಶೋಧನೆಯ ಸಮಸ್ಯೆಗಳಾಗಿವೆ. ನಾನು ವಿಶ್ವದ ಉದ್ಭವಕ್ಕೆ ಸಂಬಂಧಿಸಿ ಸೂಚನೆ ನೀಡಿದ್ದೇನೆ. ನಾನು ಜೀವೋದಯದ ವಿಷಯವನ್ನು ಇನ್ನು ಮುಂದೆ ಸ್ವಲ್ಪ ಮಟ್ಟಿಗೆ ವಿವರಿಸುವೆನು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ನೀವು ಅಲ್ಲಾಹನ ಅಸ್ತಿತ್ವವನ್ನು ಹೇಗೆ ಅಲ್ಲಗಳೆಯ ಬಲ್ಲಿರಿ? ನೀವು ನಿರ್ಜೀವರಾಗಿದ್ದಾಗ ಅವನು ನಿಮಗೆ ಜೀವ ನೀಡಿದನು." (2:29)**

ಇದೇ ವಾದವನ್ನು ನಾವು ಒಬ್ಬ ವಿಜ್ಞಾನಿಯ ಶಬ್ದಗಳಲ್ಲಿ ಆಲಿಸುವ. ಪ್ರಿನ್ಸ್‌ಟನ್ ಯುನಿವರ್ಸಿಟಿಯ ಪ್ರೊಫೆಸರ್ ಎಡ್‌ವಿನ್ ಕೊಂಕ್ಲಿನ್ ಎಂಬ ಪ್ರಸಿದ್ಧ ಜೀವಶಾಸ್ತ್ರಜ್ಞ (ಬಯೋಲಜಿಸ್ಟ್) ಹೀಗೆ ಹೇಳುತ್ತಾರೆ:

"ಜೀವೋದಯವು ಆಕಸ್ಮಿಕವಾಗಿ ಸಂಭವಿಸಿತೆಂದು ಹೇಳುವುದು ಒಂದು ಮುದ್ರಾಣಾಲಯವು ಸ್ಫೋಟಗೊಂಡು ಅದರ ಪರಿಣಾಮವಾಗಿ ಒಂದು ಬೃಹತ್ ನಿಘಂಟು ಅಸ್ತಿತ್ವಕ್ಕೆ ಬಂತು ಎನ್ನುವ ಹಾಗಿದೆ." (Evidence - Page 174)

ಈ ಅಭಿಪ್ರಾಯವನ್ನು ಬೆಂಬಲಿಸಿ ರಸಾಯನಶಾಸ್ತ್ರದಲ್ಲಿ ಸಂಶೋಧಕರಾದ ಡಾಕ್ಟರ್. ಎಡ್‌ಮಂಡ್ ಕಾರ್ಲ್ ಕೋರ್ನ್‌ಫೆಲ್ಡ್ ಹೀಗೆ ಹೇಳುತ್ತಾರೆ:

"ನಾನು ನಿಸ್ಸಂಕೋಚವಾಗಿ ಪ್ರೊಫೆಸರ್ ಎಡ್ವಿನ್ ಕೊಂಕ್‌ಲಿನ್‌ರ ಅಭಿಪ್ರಾಯವನ್ನು ಅನುಮೋದಿಸುತ್ತೇನೆ. ನನ್ನ ದೃಢನಂಬಿಕೆ ಏನೆಂದರೆ ಒಬ್ಬ ದೇವನಿದ್ದಾನೆ, ಅವನು ಯೋಜನೆ ರೂಪಿಸಿ ವಿಶ್ವವನ್ನು ಸೃಷ್ಟಿಸಿದನು ಮತ್ತು ಅವನೇ ಅದನ್ನು ಪಾಲಿಸುತ್ತಿದ್ದಾನೆ."

(Evidence - Page 174)

ರಸಾಯನ ಶಾಸ್ತ್ರಕ್ಕೆ ಸಂಬಂಧಿಸಿದ ತನ್ನ ಜ್ಞಾನದ ಬೆಳಕಿನಲ್ಲಿ ಪ್ರೊಫೆಸರ್ ಕೋರ್ನ್‌ಫೆಲ್ಡ್ ಹೀಗೆ ಹೇಳುತ್ತಾರೆ:

"ಪ್ರಕೃತಿಯಲ್ಲಿ ಒಂದು ಶ್ರೇಷ್ಠ ಸೃಷ್ಟಿಕಾರಕ ಬುದ್ಧಿ ಇದೆ ಎಂದು ನಾವು ನಂಬುತ್ತೇವೆ ಎಂದು ಒಪ್ಪಿಕೊಳ್ಳುವೆವು. ಹೀಗಲ್ಲವಾದರೆ ವಿಶ್ವವು ಆಕಸ್ಮಿಕವಾಗಿ, ಆಕಸ್ಮಿಕವಾಗಿ ಮಾತ್ರ ಅಸ್ತಿತ್ವಕ್ಕೆ ಬಂದಿತೆಂದು ನಂಬಬೇಕಾದೀತು. ಆಶ್ಚರ್ಯಕರವಾದ ಸಂಕೀರ್ಣತೆಯ ಜೊತೆಗೆ ಕ್ರಮಬದ್ಧತೆಯನ್ನು ಜೀವರಸಾಯನಶಾಸ್ತ್ರದಲ್ಲಿ – ವಿಶಿಷ್ಟವಾಗಿ ಜೀವವ್ಯವಸ್ಥೆಯಲ್ಲಿ – ವೀಕ್ಷಿಸಿದವನಿಗೆ ಆಕಸ್ಮಿಕವೆಂಬ ಅಭಿಪ್ರಾಯ. ಅತ್ಯಂತ ಅಸಂಗತವಾದುದಾಗಿದೆ. ಜೀವಕಣಗಳ ರಚನೆಯ ವಿಜ್ಞಾನ ಮತ್ತು ಕಣಗಳ ಪರಸ್ಪರ ಸಂಬಂಧಗಳ ಬಗ್ಗೆ ಅಧ್ಯಯನವನ್ನು ಮುಂದುವರಿಸಿದಂತೆ ಅವುಗಳನ್ನು ನಿರ್ಮಿಸಿದವನ ಆವಶ್ಯಕತೆ ಬಗ್ಗೆ ನಂಬಿಕೆ ವರ್ಧಿಸುತ್ತದೆ....... ಮನುಷ್ಯ ನಿರ್ಮಿತ ಒಂದು ಸರಳ ಉಪಕರಣಕ್ಕೆ ಒಬ್ಬ ಯೋಜನೆಗಾರ ಮತ್ತು ನಿರ್ಮಾಪಕನ ಆವಶ್ಯಕತೆ ಇದೆ. ಹತ್ತುಸಾವಿರ ಪಟ್ಟು ಬೃಹತ್ತಾದ ಮತ್ತು ಅತ್ಯಂತ ಸೂಕ್ಷ್ಮವೂ ಸಂಕೀರ್ಣವೂ ಆಗಿರುವ ಉಪಕರಣ ಸ್ವಯಂ ನಿಯೋಜಿತವೂ ಸ್ವಯಂ ನಿರ್ಮಿತವೂ ಸ್ವಯಂ ವೃದ್ಧಿಗೊಳಿಸಲ್ಪಟ್ಟದ್ದೂ ಆಗುವುದಾದರೂ ಹೇಗೆ?

"(Evidence - Page 176)

ವಾಗ್ದತ್ತ ಮಸೀಹ್(ಅ) ಚಲೋದಾಗಿ ಹೀಗೆ ಹೇಳಿರುವರು:

**"ಓ ನನ್ನ ಪ್ರಿಯ ದೇವಾ, ಪ್ರತಿಯೊಂದು ದಿಕ್ಕಿನಲ್ಲಿ ನಿನ್ನ ಶಕ್ತಿ ಪ್ರದರ್ಶನ ಅದ್ಭುತಕರವಾಗಿದೆ. ನಾವು ಯಾವ ದಿಕ್ಕಿಗೆ ಅಭಿಮುಖೀಕರಿಸಿದರೂ ನಿನ್ನನ್ನು ದರ್ಶಿಸುತ್ತೇವೆ."**

ವಿಜ್ಞಾನಿಗಳು ಪ್ರಕೃತಿ ನಿಯಮಗಳನ್ನು ಕಂಡುಹಿಡಿಯಲು ಪರಿಶ್ರಮಿಸುತ್ತಾರೆ. ನಿಯಮಗಳು ಇರುವುದರಿಂದ ಅವುಗಳನ್ನು ಜಾರಿಗೊಳಿಸಿದವನೊಬ್ಬನಿದ್ದಾನೆಂದು ಸ್ಪಷ್ಟವಾಗುತ್ತದೆ. ಯುನಿವರ್ಸಿಟಿ ಆಫ್ ಮಿನ್ನೆಸೋಟ್‌ನ ಪ್ರೊಫೆಸರ್ ಡಾಕ್ಟರ್ ಜಾನ್ ಕ್ಲೀವ್‌ಲೇಂಡ್ ಕೋರ್‌ತ್ರೇನ್ ಹೀಗೆ ಹೇಳುತ್ತಾರೆ:

" ಪದಾರ್ಥ ಮತ್ತು ಶಕ್ತಿ ಇವುಗಳ ಅಧ್ಯಯನದಿಂದ ಸ್ಥಿರವಾಗಿ ಹಿಂದೆ ತಿಳಿದುಬಂದುದು ಮತ್ತು ಈಗ ತಿಳಿದುಬರುತ್ತಿರುವುದು ಏನೆಂದರೆ ನಿರ್ಜೀವ ಪದಾರ್ಥಗಳು ಸಹ ಪ್ರಕೃತಿ ನಿಯಮಗಳನ್ನು ಅನುಸರಿಸುತ್ತವೆ." (Evidence - Page 38)

ಅವರು ಪುನಃ ಹೇಳುತ್ತಾರೆ:

"ನಿರ್ಜೀವ ಪದಾರ್ಥಗಳು ಆಕಸ್ಮಿಕವಾಗಿ ಉದ್ಭವಿಸಿದುವು ಎಂದೂ ಈ ವಿಶ್ವ ತಾನಾಗಿಯೇ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂತೆಂದೂ ಅದರ ಸುವ್ಯವಸ್ಥೆ ತಾನಾಗಿಯೇ ಸ್ಥಾಪಿತವಾಯಿತೆಂದೂ ಹೀಗೆಯೇ ತಾನಾಗಿಯೇ ಮುಂದುವರಿಯುವುದೆಂದೂ ಜ್ಞಾನಿಯೂ ವೈಚಾರಿಕನೂ ಆಗಿರುವವನು ನಂಬಲು ಸಾಧ್ಯವೇ? ಖಂಡಿತವಾಗಿಯೂ ಅದರ ಉತ್ತರ 'ಸಾಧ್ಯವಿಲ್ಲ' ಎಂದೇ ಆಗಿದೆ." (Evidence - Page 41).

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ತನ್ನ ಗ್ರಂಥವಾದ "ಹಮಾರಾ ಖುದಾ" ದಲ್ಲಿ ಹೀಗೆ ಬರೆದಿದ್ದಾರೆ:

"ವಿಶ್ವದ ವ್ಯವಸ್ಥೆಯನ್ನು ಅಧ್ಯಯನ ಮಾಡುವಾಗ ಅದು ತಾನಾಗಿಯೇ ಅಸ್ತಿತ್ವಕ್ಕೆ ಬರಲಿಲ್ಲ ಎಂಬ ನಿರ್ಧಾರಕ್ಕೆ ಮನುಷ್ಯನು ಬರುವಂತೆ ಮಾಡುತ್ತದೆ. ಅದು ಮಹೋನ್ನತವಾದ ಒಂದು ಸತ್ತೆಯ ನಿರ್ಧಾರ ಮತ್ತು ಶಕ್ತಿಯ ಮೂಲಕ ಅಸ್ತಿತ್ವಕ್ಕೆ ಬಂತು."

(ಹಮಾರಾಖುದಾ – ಪುಟ 65)

1985ರಲ್ಲಿ ನಾನು ಇಟಲಿ ಸಂದರ್ಶಿಸಿದ್ದೆ. 1985 ಒಕ್ಟೋಬರ್ ದಿನಾಂಕ ಒಂದರಂದು ಒಂದು ಸತ್ಕಾರ ಸಮಾರಂಭವನ್ನು, ನಮ್ಮ ಜಮಾಅತಿನ ಚತುರ್ಥ ಖಲೀಫರಾಗಿದ್ದ ಹಝ್ರತ್‌ಮಿರ್ಝಾ ತಾಹಿರ್ ಅಹ್ಮದ್ ಅವರನ್ನು ಗೌರವಿಸಲು ನೋಬೆಲ್ ಪ್ರಶಸ್ತಿ ವಿಜೇತ ಪ್ರೊಫೆಸರ್ ಅಬ್ದುಸ್ಸಲಾಮ್ ಅವರು ವೆರೋನ ನಗರದ ಉತ್ತಮ ಹೋಟೇಲೊಂದರಲ್ಲಿ ಏರ್ಪಡಿಸಿದ್ದರು. ಆ ಸಮಾರಂಭದಲ್ಲಿ ನಾನು ಸಹ ಹಾಜರಿದ್ದೆನು. ಹಝ್ರತ್ ಖಲೀಫತುಲ್ ಮಸೀಹ್‌ರವರು ವಿಜ್ಞಾನಕ್ಕೆ ಸಂಬಂಧಿಸಿದ ಒಂದು ವಿಷಯದ ಕಡೆಗೆ ತಮ್ಮ ಭಾಷಣದಲ್ಲಿ ಬೆಳಕು ಬೀರಿದರು. ಹುಝೂರರು (ಹಝ್ರತ್ ಖಲೀಫತುಲ್ ಮಸೀಹ್) ಹೀಗೆ ಹೇಳಿದರು: "ನೀರಿನ ತಾಪಮಾನವನ್ನು ತಗ್ಗಿಸಿದಾಗ ಅದರ ಸಾಂದ್ರತೆ ವರ್ಧಿಸುತ್ತದೆ. ಆದರೆ ನೀರಿನ ತಾಪಮಾನವನ್ನು ನಾಲ್ಕು ಡಿಗ್ರಿ ಸೆಂಟಿಗ್ರೇಡ್‌ಗಿಂತ ತಗ್ಗಿಸಿದಾಗ ನೀರಿನ ಸಾಂದ್ರತೆ ವರ್ಧಿಸುವುದಕ್ಕೆ ಬದಲಾಗಿ ತಗ್ಗುತ್ತದೆ. ಈ ವೈಶಿಷ್ಟ್ಯದ ಕಾರಣದಿಂದ ಚಳಿಗಾಲದಲ್ಲಿ ಸಾಗರ ಹಿಮಾಚ್ಛಾದಿತವಾಗುವಾಗ ಸಾಗರದ ಮೇಲ್ಪದರದಲ್ಲಿರುವ ಹಿಮಗಡ್ಡೆಗಳ ಕೆಳಗೆ ಇರುವ ನೀರಿನ ಸಾಂದ್ರತೆ ಮೇಲ್ಭಾಗದ ಹಿಮಗಡ್ಡೆಗಳ ಸಾಂದ್ರತೆಗಿಂತ ಹೆಚ್ಚಾಗಿರುತ್ತದೆ. ಆದುದರಿಂದ ತೀವ್ರ ಚಳಿಗಾಲದಲ್ಲಿ ಕೂಡ ಜಲಚರಗಳಿಗೆ ನೀರು ದೊರಕುತ್ತದೆ ಮತ್ತು ಅವು ಸುರಕ್ಷಿತವಾಗಿರುತ್ತವೆ. ನೀರಿನ ಈ ಕೌತುಕಕರವಾದ ಗುಣ ದೇವನ ಬುದ್ಧಿಶಾಲಿತ್ವವನ್ನು ಪ್ರಕಟಿಸುತ್ತದೆ ಮತ್ತು ದೇವನಿದ್ದಾನೆಂದು ಸಾಬೀತುಗೊಳಿಸುತ್ತದೆ."

ಕೆನಡದ ಮೆನಿಟೋಬ ಯುನಿವರ್ಸಿಟಿಯ ಬಯೋಫಿಸಿಕ್ಸ್‌ನ ಪ್ರೊಫೆಸರ್ ಡಾಕ್ಟರ್ ಫ್ರಾಂಕ್ ಅಲ್ಲೆನ್, ಮೇಲೆ ಉಲ್ಲೇಖಿಸಿದ ವಿಷಯದ ಬಗ್ಗೆ ತನ್ನ ಪ್ರಬಂಧದಲ್ಲಿ ಗಮನ ಸೆಳೆದಿದ್ದು ಅದು ದೇವನ ಅಸ್ತಿತ್ವಕ್ಕೆ ಸಾಕ್ಷ್ಯಾಧಾರ ಎಂದು ಪ್ರತಿಪಾದಿಸಿದ್ದಾರೆ:

ನೀರಿನ ನಾಲ್ಕು ವಿಶಿಷ್ಟ ಗುಣಗಳು ಹೀಗಿವೆ– ಕಡಿಮೆ ತಾಪಮಾನದಲ್ಲಿ ಅದು ಆಮ್ಲಜನಕವನ್ನು ಬಹಳ ಪ್ರಮಾಣದಲ್ಲಿ ಹೀರುತ್ತದೆ. ಅದರ ಅತ್ಯಂತ ಹೆಚ್ಚು ಸಾಂದ್ರತೆ 4 ಡಿಗ್ರಿ ಸೆಂಟಿಗ್ರೇಡ್ ತನಕ ಇರುತ್ತದೆ. ಈ ಕಾರಣದಿಂದ ಸರೋವರಗಳೂ ನದಿಗಳೂ ಜಲಮಯವಾಗಿರುತ್ತವೆ. ಹಿಮವು ನೀರಿಗಿಂತ ಕಡಿಮೆ ಸಾಂದ್ರತೆ ಹೊಂದಿರುವುದರಿಂದ ಅದು ನೀರಿನ ಮೇಲೆ ಇರುತ್ತದೆ. ನೀರು ಹಿಮಗಡ್ಡೆಯಾಗುವಾಗ ಉಷ್ಣವು ಬಹಳ ಬಿಡುಗಡೆ ಹೊಂದುತ್ತದೆ. ಅದು ಸಾಗರಗಳಲ್ಲಿ, ಸರೋವರಗಳಲ್ಲಿ ಮತ್ತು ನದಿಗಳಲ್ಲಿ ಜೀವಿಗಳನ್ನು ದೀರ್ಘವಾದ ಚಳಿಗಾಲದಲ್ಲಿ ರಕ್ಷಿಸುತ್ತದೆ." (The Origin of the World - by Chance or Design? - Evidence page 21)

ಇನ್ನೊಬ್ಬ ವಿಜ್ಞಾನಿ ಡಾಕ್ಟರ್ ತೋಮಸ್ ಡೇವಿಸ್ ಪಾರ್ಕ್ಸ್ (ರಸಾಯನ ಶಾಸ್ತ್ರಜ್ಞ) ಹೀಗೆ ಹೇಳುತ್ತಾರೆ:

"ನೀರು ಮಾತ್ರ ಮಂಜುಗಡ್ಡೆಯಾಗುವಾಗ ಹಗುರವಾಗುತ್ತದೆ. ಇದು ಜೀವ ರಕ್ಷಣೆಗೆ ಅತ್ಯಂತ ಮಹತ್ವಪೂರ್ಣವಾಗಿದೆ."

(Evidence - page 75)

ನೀರು ಮಂಜುಗಡ್ಡೆಯಾಗುವಾಗ ಅದರ ಸಾಂದ್ರತೆ ಕಡಿಮೆಯಾಗುವ ಕಾರಣ ಸಾಗರಗಳಲ್ಲಿರುವ ಜಲಜೀವಿಗಳು ಸುರಕ್ಷಿತವಾಗಿರುತ್ತವೆ. ಇದರ ಹಿನ್ನೆಲೆಯಲ್ಲಿ ಅಗಾಧವಾದ ಬುದ್ಧಿಶಾಲಿತ್ವ ಇರುವುದಾಗಿ ಕಾಣಿಸುವುದಿಲ್ಲವೇ?

ಸಮುದ್ರಗಳಲ್ಲಿರುವ ಮೀನುಗಳಿಗೆ ಮಾತ್ರವಲ್ಲ, ಎಲ್ಲ ಪ್ರಾಣಿಗಳಿಗೋಸ್ಕರ ಸಹ ಯೋಗ್ಯ ವ್ಯವಸ್ಥೆಗಳನ್ನು ಮಾಡಿರುವುದಾಗಿ ನಾವು ಕಾಣುತ್ತೇವೆ. ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ ಒಂದು ಪದ್ಯದಲ್ಲಿ ಇದರ ಬಗ್ಗೆ ಹೀಗೆ ಹೇಳಿದ್ದಾರೆ:

"ಸಾಗರಗಳ ಮೀನುಗಳಿಗೆ, ಹಾರುವ ಪಕ್ಷಿಗಳಿಗೆ,
ಸಾಕು ಪ್ರಾಣಿಗಳಿಗೆ ಮತ್ತು ಕಾಡುಮೃಗಗಳಿಗೆ
ಇವೆಲ್ಲವುಗಳಿಗೂ ಅವನು (ದೇವನು) ಆಹಾರ ಒದಗಿಸುತ್ತಾನೆ.
ಅವನ ಖಜಾನೆಗಳು ಎಂದೂ ಖಾಲಿಯಾಗಲಾರವು.
ಅವನು ಜೀವಂತವಾಗಿದ್ದು, ಇತರರನ್ನು ಜೀವಂತವಾಗಿರಿಸುತ್ತಾನೆ.
ಅವನು ಸ್ವಯಂ ಪೂರ್ಣನಾಗಿದ್ದು ಎಲ್ಲರಿಗೂ ಸಂರಕ್ಷಣೆ
ನೀಡುತ್ತಾನೆ."

ನಮ್ಮ ವಿಶ್ವವು ದೀರ್ಘಕಾಲದ ವಿಕಾಸ ಪ್ರಕ್ರಿಯೆಯ ನಂತರ ಇಂದಿನ ಸ್ಥಿತಿಗೆ ತಲುಪಿದೆ. ಅತ್ಯಂತ ಸೂಕ್ಷ್ಮವಾದ ಇಲೆಕ್ಟ್ರೋನುಗಳು ಮತ್ತು ಪ್ರೋಟೋನುಗಳು ಅಣುಗಳಾಗಿಯೂ ಕಣಗಳಾಗಿಯೂ ಪರಿವರ್ತಿತಗೊಂಡವು. ಅನಂತರ ಅಮೀನೋ ಆಮ್ಲಗಳು ಉತ್ಪಾದಿಸಲ್ಪಟ್ಟು ಜೀವವು ಉದ್ಭವಿಸಿತು. ಕೊನೆಗೆ ಬುದ್ಧಿಶಾಲಿಯಾದ ಮನುಷ್ಯನು ಅಸ್ತಿತ್ವಕ್ಕೆ ಬಂದನು.

ಯು.ಎಸ್.ಎ ಮಿಚಿಗನ್ ಯುನಿವರ್ಸಿಟಿಯ ನ್ಯಾಚುರಲ್ ಸೈಯನ್ಸಸ್ ಪ್ರೊಫೆಸರ್ ಮಿಲಿಯಮ್ ನೋಬ್ಲೋಚ್ ಹೀಗೆ ಹೇಳುತ್ತಾರೆ:

"ನಾನು ದೇವನ ಅಸ್ತಿತ್ವವನ್ನು ನಂಬುತ್ತೇನೆ. ಏಕೆಂದರೆ ಪ್ರಥಮ ಪ್ರೋಟೋನುಗಳೂ ಇಲೆಕ್ಟ್ರೋನುಗಳೂ ಆಕಸ್ಮಿಕವಾಗಿ ಉದ್ಭವಿಸಿದವು ಎಂದು ನಾನು ಯೋಚಿಸುವುದಿಲ್ಲ. ಪ್ರಥಮ ಅಣು ಅಥವಾ ಅಮೀನೋ ಆಸಿಡ್ ಅಥವಾ ಪ್ರಥಮ ಜೀವಧಾತು ಅಥವಾ ಪ್ರಥಮ ಬೀಜ ಅಥವಾ ಪ್ರಥಮ ಮೆದುಳು ಆಕಸ್ಮಿಕವಾಗಿ ಉದ್ಭವಿಸಿದುವು ಎಂದು ನಾನು ನಂಬುವುದಿಲ್ಲ. ನಾನು ದೇವನನ್ನು ನಂಬುತ್ತೇನೆ. ಏಕೆಂದರೆ ಪ್ರಪಂಚದಲ್ಲಿರುವ ವಸ್ತುಗಳಿಗೆ ಅವನ ದಿವ್ಯ ಅಸ್ತಿತ್ವವೇ ತರ್ಕಬದ್ಧ ವಿವರಣೆಯಾಗಿದೆ." (Evidence - page 89)

ಈ ವಿಶ್ವವನ್ನು ಜ್ಞಾನಭರಿತ ಬುದ್ಧಿಶಾಲಿಯಾದ ಒಂದು ಶ್ರೇಷ್ಠ ಅಸ್ತಿತ್ವವು ಸೃಷ್ಟಿಸಿದೆ ಎಂದು ನಾವು ಅಂಗೀಕರಿಸುವುದಿಲ್ಲವಾದರೆ ನಾವು ಹೀಗೆ ನಂಬಬೇಕಾಗಬಹುದು: ನಿರ್ಜೀವ ವಸ್ತುಗಳು ನಮಗಿಂತ ಹೆಚ್ಚು ಬುದ್ಧಿಶಾಲಿಗಳಾಗಿವೆ. ಅವುಗಳ ಪರಸ್ಪರ ಸಹಕಾರದಿಂದ ಸೂರ್ಯ, ಚಂದ್ರ, ಪರ್ವತಗಳು ಮತ್ತು ಸಾಗರಗಳು ನಿರ್ಮಿಸಲ್ಪಟ್ಟವು. ಆದರೆ ಇಂದಿನ ಅತ್ಯಂತ ಅಭಿವೃದ್ಧಿ ಹೊಂದಿದ ವೈಜ್ಞಾನಿಕ ಯುಗದಲ್ಲಿ ಕೂಡ ಬುದ್ಧಿಶಾಲಿ ಮನುಷ್ಯರಾದ ನಾವೆಲ್ಲರೂ ಒಗ್ಗೂಡಿ ಒಂದು ಕ್ರಿಮಿಯ ಕಾಲವನ್ನು ಕೂಡ ನಿರ್ಮಿಸಲಾರೆವು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ವಿಶ್ವವು ಒಬ್ಬ ಶಕ್ತಿಶಾಲಿ, ಸರ್ವಜ್ಞ ದೇವನ ಅಸ್ತಿತ್ವದ ಕಡೆಗೆ ಸ್ಪಷ್ಟವಾಗಿ ಸೂಚಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

" 'ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದುದು ಯಾರು?' ಎಂದು ನೀನು ಅವರೊಡನೆ ಕೇಳಿದರೆ, 'ಪ್ರತಾಪಶಾಲಿಯೂ ಸರ್ವಜ್ಞನೂ ಆದವನು ಅವುಗಳನ್ನು ಸೃಷ್ಟಿಸಿದ್ದಾನೆ' ಎಂದು ಅವರು ಖಂಡಿತವಾಗಿಯೂ ಹೇಳುವರು." (43:10)

## ಪ್ರಕೃತಿಯಲ್ಲಿ ಪ್ರಕಟವಾಗುವ ಬುದ್ಧಿಶಾಲಿತ್ವ

ದೇವನ ಸೃಷ್ಟಿಯಲ್ಲಿ ಯಾವುದೇ ನ್ಯೂನತೆ ಇಲ್ಲವೆಂದು ಪವಿತ್ರ ಖುರ್‌ಆನ್ ಒತ್ತಿ ಹೇಳಿದೆ. ಅದು ಹೀಗೆ ಹೇಳುತ್ತದೆ:

"ಅವನು (ಅಲ್ಲಾಹನು) ಏಳು ಆಕಾಶಗಳನ್ನು ಕ್ರಮಬದ್ಧವಾಗಿ ಸೃಷ್ಟಿಸಿರುವನು. ಪರಮ ದಯಾವಂತನ (ಅಲ್ಲಾಹನ) ಸೃಷ್ಟಿ ಕಾರ್ಯದಲ್ಲಿ ಯಾವ ಅಸಂಬದ್ಧತೆಯನ್ನೂ ನೀನು ಕಾಣಲಾರೆ. ನೀನು ಪುನಃ ನೋಡು. ಏನಾದರೂ ಲೋಪದೋಷವಿದೆಯೋ? ನೀನು ಪುನಃ ಎರಡು ಸಲ ದೃಷ್ಟಿ ಹರಿಸಿ ನೋಡು. ದೃಷ್ಟಿ ಸೋತು, ಬಳಲಿ ನಿನ್ನಡೆಗೆಯೇ ಮರುಳುವುದು." (67:4, 5)

ಪ್ರಕೃತಿಯು ಪ್ರದರ್ಶಿಸುವ ಅದ್ಭುತ ಬುದ್ಧಿಶಾಲಿತ್ವದ ಕಡೆಗೆ ಪವಿತ್ರ ಖುರ್‌ಆನ್ ಮೇಲಿನಂತೆ ನಮ್ಮ ಗಮನಹರಿಸುತ್ತದೆ. ವಿಶ್ವವು ಆಕಸ್ಮಿಕವಾಗಿ ಸೃಷ್ಟಿಗೊಂಡದ್ದಲ್ಲ, ಒಬ್ಬ ಬುದ್ಧಿಶಾಲಿಯಿಂದ ಅದು ಸೃಷ್ಟಿಸಲ್ಪಟ್ಟಿದೆ ಎಂಬುದಕ್ಕೆ ಇದು ಸಾಕ್ಷ್ಯಾಧಾರವಾಗಿದೆ.

ನಮ್ಮ ಜಮಾಅತ್‌ಗೆ ಸೇರಿದ, 1979ರಲ್ಲಿ ನೋಬೆಲ್ ಪ್ರಶಸ್ತಿ ವಿಜೇತ ಪ್ರಸಿದ್ಧ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮ್ 1981ರಲ್ಲಿ ಭಾರತಕ್ಕೆ ಸಂದರ್ಶನ ನೀಡಿದಾಗ ಇಲ್ಲಸ್ಟ್ರೇಟಡ್ ವೀಕ್ಲೀ ಆಫ್ ಇಂಡಿಯಾ (1981 ಫೆಬ್ರವರಿ 1-7ರ ಸಂಚಿಕೆಯಲ್ಲಿ) ಅವರನ್ನು "ದೇವನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸವುಳ್ಳ ನೋಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ" ಎಂದು ವರ್ಣಿಸಿತು.

ಡಾಕ್ಟರ್ ಅಬ್ದುಸ್ಸಲಾಮ್ ಅವರು ಮೇಲೆ ಉದ್ಧರಿಸಲಾದ ಪವಿತ್ರ ಖುರ್‌ಆನಿನ ಅಧ್ಯಾಯ 67 ವಚನ 4, 5ರ ಬಗ್ಗೆ ಹೀಗೆ ಹೇಳಿದರು:

"ಇದು ಎಲ್ಲ ಭೌತಶಾಸ್ತ್ರಜ್ಞರ ವಾಸ್ತವಿಕ ವಿಶ್ವಾಸವೇ ಆಗಿದೆ. ಈ ವಿಶ್ವಾಸ ನಮ್ಮನ್ನು ಉತ್ತೇಜಿಸುತ್ತದೆ ಮತ್ತು ನಮ್ಮ ಕೆಲಸದಲ್ಲಿ ಸ್ಥಿರತೆಯಿಂದ ಮುಂದುವರಿಸುತ್ತದೆ. ನಾವು ತಳಸ್ಪರ್ಶಿಯಾಗಿ ಸಂಶೋಧನೆ ನಡೆಸುವಾಗ ನಮ್ಮ ಆಶ್ಚರ್ಯ ಉತ್ತೇಜಿಸಲ್ಪಡುತ್ತದೆ. ನಾವು ವೀಕ್ಷಿಸುವಾಗ ನಮ್ಮ ವಿಸ್ಮಯ ವರ್ಧಿಸುತ್ತದೆ." (Review of Religions Vol 76 p 139 June 1981)

ಇನ್ನೊಬ್ಬ ನೋಬೆಲ್ ಪ್ರಶಸ್ತಿ ವಿಜೇತ, ಎಸ್ಟ್ರೋಫಿಸಿಕ್ಸ್‌ನಲ್ಲಿ ಅತ್ಯಂತ ನಿಷ್ಣಾತರಾದ ವಿಜ್ಞಾನಿಗಳಲ್ಲಿ ಒಬ್ಬರಾದ ಪ್ರೊಫೆಸರ್ ಎಸ್. ಚಂದ್ರಶೇಖರ್ ಪ್ರಕೃತಿಯ ಬಗ್ಗೆ ಹೀಗೆ ಹೇಳುತ್ತಾರೆ:

"ಪ್ರಕೃತಿ ನಮಗೆ ಪದೇ ಪದೇ ತೋರಿಸಿಕೊಟ್ಟಿರುವುದೇನೆಂದರೆ, ಪ್ರಕೃತಿಯೊಳಗೆ ಅಡಕವಾದ ಸತ್ಯಗಳು ಅತ್ಯಂತ ಶಕ್ತಿಶಾಲಿ ಬುದ್ಧಿಶಕ್ತಿಗೆ ನಿಲುಕದುದಾಗಿವೆ........ ಪ್ರಕೃತಿಯನ್ನು ಅರಿತುಕೊಳ್ಳಲು ವಿನಯಭಾವದಿಂದ ವರ್ತಿಸುವುದು ವಿಜ್ಞಾನದ ಅಧ್ಯಯನದ ಮುಂದುವರಿಕೆಗೆ ಮೊದಲು ಆವಶ್ಯಕವಾದ ಶರತ್ತಾಗಿದೆ ಎಂದು ನಾನು ಭಾವಿಸುತ್ತೇವೆ." (Span, February 1983)

## ವಿಜ್ಞಾನದ ಮೂಲಕ ಸರ್ವಶಕ್ತನ ಕಡೆಗೆ

ಜೀವಶಾಸ್ತ್ರ ವಿಜ್ಞಾನಿಯಾದ ಡಾಕ್ಟರ್ ಅಲ್ಬರ್ಟ್ ಮೆಕ್‌ಕೂಂಬ್ಸ್ ವಿಂಚೆಸ್ಟರ್ ಹೀಗೆ ಹೇಳುತ್ತಾರೆ:

" .....ವಿಜ್ಞಾನ ಕ್ಷೇತ್ರಗಳಲ್ಲಿ ಅನೇಕ ವರ್ಷ ಅಧ್ಯಯನ ಮತ್ತು ಕೆಲಸ ಮಾಡಿದ ನಂತರ ದೇವನ ಬಗ್ಗೆ ನನ್ನ ವಿಶ್ವಾಸ ಅಲುಗಾಡುವ ಬದಲಾಗಿ ಹೆಚ್ಚು ಬಲಿಷ್ಠವಾಗಿದೆ ಮತ್ತು ಮೊದಲಿಗಿಂತ ಹೆಚ್ಚು ಭದ್ರವಾದ ಅಸ್ತಿಭಾರವನ್ನು ಹೊಂದಿದೆ. ಪರಮೋನ್ನತ ಅಸ್ತಿತ್ವದ ವೈಭವ ಮತ್ತು ಅನಂತ ಶಕ್ತಿಯ ಬಗ್ಗೆ ವಿಜ್ಞಾನವು ಅಂತರ್‌ದೃಷ್ಟಿಯನ್ನು ನೀಡುತ್ತದೆ ಮತ್ತು ಪ್ರತಿಯೊಂದು ಹೊಸ ಕಂಡುಹಿಡಿತದೊಂದಿಗೆ ಅದು ಬಲಯುತವಾಗುತ್ತದೆ." (Evidence - page 65)

ಮಹಾವಿಜ್ಞಾನಿಯಾದ ಗೆಲಿಲಿಯೋ ಟೆಲೆಸ್ಕೋಪ್ ಮುಖಾಂತರ ಆಕಾಶಗಂಗೆಯ ನಕ್ಷತ್ರಗಳನ್ನೂ ವಿವಿಧ ಗ್ರಹಗಳ ಉಪಗ್ರಹಗಳನ್ನೂ ವೀಕ್ಷಿಸಿದ ನಂತರ ಹೀಗೆ ಬರೆದನು:

"ನಾನು ಅತ್ಯಂತ ಆಶ್ಚರ್ಯಚಕಿತನಾದೆನು. ಇಂತಹ ಮಹಾ ಅದ್ಭುತಗಳನ್ನು ಕಂಡುಹಿಡಿಯಲು ನನಗೆ ಅನುಮತಿ ನೀಡಿದ ದೇವನಿಗೆ ನಾನು ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ." (The Growth of Physical Science by Sir James Jeans Page 173, Cambridge 1951)

ದೆಹಲಿಯ ಇಸ್ಲಾಮಿಕ್ ಸೆಂಟರಿನ ಮೌಲಾನ ವಹೀದುದ್ದೀನ್ ಖಾನ್ ಒಂದು ಉತ್ತಮ ಪುಸ್ತಕವನ್ನು "GOD ARISES" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ. (ಪ್ರಕಾಶಕರು : Maktaba Al Risala, C- 29, Nizamuddin West, New Delhi, 1987)

ಈ ಪುಸ್ತಕದಲ್ಲಿ ವೈಜ್ಞಾನಿಕ ಸಾಕ್ಷ್ಯಗಳನ್ನು ಮತ್ತು ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಹೇಳಿಕೆಗಳನ್ನು ಸಂಗ್ರಹಿಸಲಾಗಿದೆ. ಈ ಪುಸ್ತಕದಲ್ಲಿ ಒಂದು ಕುತೂಹಲದಾಯಕ ಘಟನೆಯನ್ನು ವಿವರಿಸಲಾಗಿದೆ. ಅದನ್ನು ನಾನು ಇಲ್ಲಿ ಉಲ್ಲೇಖಿಸುವೆನು. ಅಲ್ಲಾಮ ಇನಾಯತುಲ್ಲಾ ಖಾನ್ ಮಶ್‌ರಿಖೀ 1909ರಲ್ಲಿ ಇಂಗ್ಲೆಂಡಿಗೆ ಸಂದರ್ಶನ ನೀಡಿದ್ದರು. ಒಂದು ಆದಿತ್ಯವಾರ ಬಿರುಸಾದ ಮಳೆ ಸುರಿಯುತ್ತಿದ್ದಾಗ ಸರ್ ಜೇಮ್ಸ್ ಜೀನ್ಸ್ ಎಂಬ ಕ್ಯಾಂಬ್ರಿಜ್ ಯುನಿವರ್ಸಿಟಿಯ ಖಗೋಳಶಾಸ್ತ್ರ ವಿಜ್ಞಾನಿ ಬೈಬಲ್ ಗ್ರಂಥವನ್ನು ಕಂಕುಳಲ್ಲಿ ಇರಿಸಿಕೊಂಡು ಹೋಗುವುದನ್ನು ಇನಾಯಿತುಲ್ಲಾ ಖಾನ್ ಕಂಡಾಗ, ಅಂತಹ ಪ್ರಸಿದ್ಧ ವಿಜ್ಞಾನಿ ಚರ್ಚ್‌ಗೆ ಪ್ರಾರ್ಥನೆಗೆ ಹೋಗುತ್ತಿರುವ ಬಗ್ಗೆ ಆಶ್ಚರ್ಯ ಸೂಚಿಸಿದರು. ಸರ್ ಜೇಮ್ಸ್, ಇನಾಯತುಲ್ಲಾರೊಂದಿಗೆ ಸಂಜೆ ತನ್ನ ಮನೆಗೆ ತನ್ನೊಂದಿಗೆ ಚಾ ಕುಡಿಯಲು ಬರಬೇಕೆಂದು ಹೇಳಿದರು. ಇನಾಯತುಲ್ಲಾ ಖಾನ್ ಸಂಜೆ ಮನೆಗೆ ಹೋದಾಗ ಸರ್ ಜೇಮ್ಸ್ ಯೋಚನಾ ಮಗ್ನರಾಗಿದ್ದರು. ಅವರು ಕೇಳಿದರು: ನಿಮ್ಮ ಪ್ರಶ್ನೆ ಏನು? ಸರ್ ಜೇಮ್ಸ್ ಉತ್ತರಕ್ಕೆ ಕಾಯದೆ ಆಕಾಶ ಕಾಯಗಳ ಸೃಷ್ಟಿಯ ಬಗ್ಗೆ ಆಸಕ್ತಿದಾಯಕ ವಿವರಣೆ ನೀಡಿದರು. ಅವುಗಳ ಚಲನೆ ಮತ್ತು ಅವುಗಳ ಆಶ್ಚರ್ಯಕರ ಕ್ರಮಬದ್ಧತೆಯನ್ನು ವಿಶದೀಕರಿಸಿದರು. ಅವರ ಮಾತುಗಳು ಮತ್ತು ಅವರ ಶರೀರ ಭಂಗಿ ಅವರು ದೇವನ ಶಕ್ತಿ ಮತ್ತು ವೈಭವದಿಂದ ಗಾಢವಾಗಿ ಪ್ರಭಾವಿತರಾಗಿದ್ದಾರೆ ಎಂದು ತೋರಿಸುತ್ತಿದ್ದವು. ಅವರು ಹೇಳಿದರು: ಇನಾಯತುಲ್ಲಾ ಖಾನ್, ನೀವು ತಿಳಿದುಕೊಳ್ಳಿರಿ ನಾನು *ದೇವನ ಅದ್ಭುತಕರ ಸೃಷ್ಟಿಕಾರ್ಯಗಳನ್ನು ವೀಕ್ಷಿಸುವಾಗ ನನ್ನ ಶರೀರ ಭಯಭೀತಿಯಿಂದ ನಡುಗುತ್ತದೆ. ನಾನು ಚರ್ಚ್‌ಗೆ ಹೋಗಿ ತಲೆಬಾಗಿಸಿ ಹೇಳುತ್ತೇನೆ – "ಪ್ರಭೂ, ನೀನೆಷ್ಟು ಮಹಾನ್ ಆಗಿರುವೆ." ಹೀಗೆ ಹೇಳುವಾಗ ನನ್ನ ತುಟಿಗಳು ಮಾತ್ರವಲ್ಲ, ನನ್ನ ಶರೀರದ ಪ್ರತಿಯೊಂದು ಕಣ ಈ ಶಬ್ದಗಳನ್ನು ಉಚ್ಚರಿಸಲು ಸೇರಿಕೊಳ್ಳುತ್ತದೆ. ನನಗೆ ಪ್ರಾರ್ಥನೆಯಿಂದ ಅವಿಶ್ವಸನೀಯ ಸಂತೋಷ ಮತ್ತು ಶಾಂತಿ*

ದೊರಕುತ್ತದೆ. ಅನ್ಯರಿಗೆ ಹೋಲಿಸಿದರೆ ನನಗೆ ಸಾವಿರಪಟ್ಟು ಹೆಚ್ಚು ಪರಿಪೂರ್ಣತೆ ನನ್ನ ಪ್ರಾರ್ಥನೆಗಳಿಂದ ಲಭಿಸುತ್ತದೆ. ಇನಾಯತುಲ್ಲಾ ಖಾನ್, ಈಗ ನೀವು ಹೇಳಿರಿ, ನಾನು ಚರ್ಚ್‌ಗೆ ಹೋಗುವುದೇಕೆಂದು ನಿಮಗೆ ಮನವರಿಕೆ ಆಗಿದೆಯೋ?

ಸರ್ ಜೇಮ್ಸ್‌ರೊಂದಿಗೆ ಇನಾಯತುಲ್ಲಾ ಖಾನ್ ಹೇಳಿದರು: ನಿಮ್ಮ ಮಾತುಗಳು ನನಗೆ ಪವಿತ್ರ ಖುರ್‌ಆನಿನ ಒಂದು ವಚನವನ್ನು ನೆನಪಿಸುವಂತೆ ಮಾಡುತ್ತದೆ. ನೀವು ಅನುಮತಿ ನೀಡುವುದಾದರೆ ನಾನು ಅದನ್ನು ಉಲ್ಲೇಖಿಸುವೆನು. ಸರ್ ಜೇಮ್ಸ್ ಹೇಳಿದರು: ಆ ವಚನವನ್ನು ಉಲ್ಲೇಖಿಸಿರಿ. ಇನಾಯತುಲ್ಲಾ ಖಾನ್ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ಉಲ್ಲೇಖಿಸಿದರು:

**"ಪರ್ವತಗಳ ಪೈಕಿ ಕೆಲವು ಬಿಳಿ, ಕೆಂಪು ಮತ್ತು ವಿವಿಧ ಛಾಯೆಗಳಿಂದ ಕೂಡಿರುತ್ತವೆ. ಇನ್ನು ಕೆಲವು ಕಡುಕಪ್ಪಾಗಿರುತ್ತವೆ. ಇದೇ ರೀತಿ ಮನುಷ್ಯರಲ್ಲೂ ಜಂತುಗಳಲ್ಲೂ ಜಾನುವಾರುಗಳಲ್ಲೂ ಹಲವು ವರ್ಣಗಳಿವೆ. ಅವನ ದಾಸರ ಪೈಕಿ ಜ್ಞಾನವುಳ್ಳವರು ಮಾತ್ರ ಅಲ್ಲಾಹನಿಗೆ ಭಯಪಡುತ್ತಾರೆ."** (35:28:29)

ಪವಿತ್ರ ಖುರ್‌ಆನಿನ ಈ ವಚನಗಳನ್ನು ಆಲಿಸಿ ಸರ್ ಜೇಮ್ಸ್ ಬಹಳ ಪ್ರಭಾವಿತರಾದರು. ಅವರು ಆಶ್ಚರ್ಯಗೊಂಡು ಹೇಳಿದರು:

"ನೀವು ಉಲ್ಲೇಖಿಸಿದುದೇನು? ಜ್ಞಾನವುಳ್ಳವರು ಮಾತ್ರ ದೇವನಿಗೆ ಭಯಪಡುತ್ತಾರೆಂದು ಹೇಳಲಾಗಿದೆ. ಆಶ್ಚರ್ಯಕರ! ಅಸಾಧಾರಣವಾಗಿದೆ! ಐವತ್ತು ವರ್ಷಗಳ ಕಾಲ ಅಧ್ಯಯನ ಮುಂದುವರಿಸಿದುದರ ಫಲವಾಗಿ ನಾನು ಈ ಸತ್ಯವನ್ನು ಮನವರಿಕೆ ಮಾಡಿಕೊಂಡಿದ್ದೇನೆ. ಇದನ್ನು (ಹಝ್ರತ್) ಮುಹಮ್ಮದರಿಗೆ ಯಾರು ಕಲಿಸಿದರು? ಈ ವಚನ ವಾಸ್ತವಿಕವಾಗಿಯೂ ಪವಿತ್ರ ಖುರ್‌ಆನ್‌ನಲ್ಲಿ ಇದೆಯೋ? ಅದು ಪವಿತ್ರ ಖುರ್‌ಆನ್‌ನಲ್ಲಿದ್ದರೆ, ಪವಿತ್ರ ಖುರ್‌ಆನ್ ಅವತೀರ್ಣಗೊಂಡ ಗ್ರಂಥ ಎಂಬ ನನ್ನ ಸಾಕ್ಷ್ಯ ದಾಖಲಿಸಿರಿ. (ಹಝ್ರತ್) ಮುಹಮ್ಮದ್ ನಿರಕ್ಷರಿಯಾಗಿದ್ದರು. ಅವರು ಸ್ವತಃ ಈ ಅತ್ಯಂತ ಮುಖ್ಯ ಸತ್ಯವನ್ನು ಕಲಿತಿರಲಾರರು. ದೇವನೇ ಅವರಿಗೆ ಇದನ್ನು ಕಲಿಸಿ ಕೊಟ್ಟಿರಬೇಕು. ಅವಿಶ್ವಸನೀಯ! ಎಷ್ಟು ಅಸಾಧಾರಣವಾಗಿದೆ ಇದು!".

(God Arises- page 215)

[ಈ ಘಟನೆಯನ್ನು ನುಕೂಶೆ ಶಖ್ಸಿಯಾತ್ ಎಂಬ ಗ್ರಂಥದಿಂದ (ಪುಟ 1208 –1209) ಪಡೆದು ಉಲ್ಲೇಖಿಸಲಾಗಿದೆ.]

"ಅವನ ದಾಸರ ಪೈಕಿ ಜ್ಞಾನವುಳ್ಳವರು ಮಾತ್ರ ಅಲ್ಲಾಹನಿಗೆ ಭಯಪಡುತ್ತಾರೆ" ಎಂಬ ಪವಿತ್ರ ಖುರ್‌ಆನ್ ವಚನ ಗಹನವಾದ ಒಂದು ಸತ್ಯವನ್ನು ಪ್ರಕಟಿಸುತ್ತದೆ. ವಿಶ್ವವನ್ನು ಅಧ್ಯಯನ ಮಾಡುವುದರಿಂದ ದೇವನ ಅಸ್ತಿತ್ವದ ಬಗ್ಗೆ ನಿಷ್ಕರ್ಷಿಸಬಹುದಲ್ಲದೆ, ಅವನಲ್ಲಿ ನಮಗೆ ಪ್ರೀತಿ ಮತ್ತು ಭಯವನ್ನು ಉಂಟುಮಾಡುತ್ತದೆ. (ಪವಿತ್ರ ಖುರ್‌ಆನ್ 2:164–165 ನೋಡಿರಿ.)

ಸರ್ವಶಕ್ತನಾದ ಅಲ್ಲಾಹನ ಬಗ್ಗೆ ಜ್ಞಾನವನ್ನು ನಾವು ವಿಜ್ಞಾನದ ಮೂಲಕ ಗಳಿಸುತ್ತಿರುವುದರಿಂದ ನಮ್ಮ ಜಮಾಅತಿನ ತೃತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ವಿಜ್ಞಾನ ಕ್ಷೇತ್ರದ ಬಗ್ಗೆ ಬಹಳ ಆಸಕ್ತಿ ಹೊಂದಿದ್ದರು. ನಮ್ಮ ಜಮಾಅತಿನ ಪ್ರೊಫೆಸರ್ ಅಬ್ದುಸ್ಸಲಾಮರು ನೋಬೆಲ್ ಪ್ರೈಝ್ ಗಳಿಸಿದಾಗ ಅವರು ತುಂಬಾ ಸಂತೋಷಗೊಂಡಿದ್ದರು. ಎಲ್ಲ ಸ್ತುತಿಗಳು ಅಲ್ಲಾಹನಿಗೆ ಸಲ್ಲುವುವು.

ವಾಗ್ದತ್ತ ಮಸೀಹರು(ಅ) ತನ್ನ ಒಂದು ಪದ್ಯದಲ್ಲಿ ಅಲ್ಲಾಹನ ಸೃಷ್ಟಿ ವೈಭವದ ಕುರಿತು ಪ್ರಶಂಸಿಸಿ ತನ್ನ ಹೃದಯದಲ್ಲಿ ಅಲ್ಲಾಹನ ಬಗ್ಗೆ ಇರುವ ಪ್ರೇಮದ ಬಗ್ಗೆ ಹೀಗೆ ಹೇಳುತ್ತಾರೆ:

"ಆ ದೇದೀಪ್ಯಮಾನವಾದ ಸೌಂದರ್ಯದ ಬಗ್ಗೆ ನಮ್ಮ ಹೃದಯದಲ್ಲಿ ಉತ್ಕಟ ಉತ್ಸಾಹವಿದೆ.

ನಮ್ಮೊಂದಿಗೆ ತುರ್ಕಿಗಳ ಅಥವಾ ತಾರ್ತಾರಿಗಳ ಸೌಂದರ್ಯದ ಬಗ್ಗೆ ಹೇಳಬೇಡಿರಿ."

ವಾಗ್ದತ್ತ ಮಸೀಹ್(ಅ) ತನ್ನ ಸುಂದರ ಪದ್ಯವನ್ನು ಹೀಗೆ ಕೊನೆಗೊಳಿಸುತ್ತಾರೆ:

"ನಿನ್ನ ಮಾರ್ಗದಲ್ಲಿ ಮೊರೆಗಳು ಎಷ್ಟು ಉಚ್ಚ ಸ್ವರದಲ್ಲಿವೆ? ಬೇಗನೆ ಆಲಿಸು.

ಇಲ್ಲವಾದರೆ ನಿನ್ನ ಪ್ರೀತಿಯಲ್ಲಿ ಮನುಷ್ಯನೊಬ್ಬ ಜೀವ ಕಳಕೊಳ್ಳಬಹುದು. (ದುರ್ರೆ ಸಮೀನ್)

## ದೇವನು ಸ್ವತಃ ತಾನು ಸೃಷ್ಟಿಕರ್ತನೆಂದು ಹೇಳುತ್ತಾನೆ

ವಿಶ್ವದ ಬಗ್ಗೆ ಚಿಂತಿಸಿ ನಾವು ದೇವನ ಅಸ್ತಿತ್ವದ ಬಗ್ಗೆ ವೈಚಾರಿಕ ಸಾಕ್ಷ್ಯಾಧಾರಗಳನ್ನು ಪಡೆಯುತ್ತೇವೆ. ಆದರೆ ದೇವನು ಸ್ವತಃ ತನ್ನ ಅಸ್ತಿತ್ವದ ಬಗ್ಗೆ ಆಧ್ಯಾತ್ಮಿಕ ಸಾಕ್ಷ್ಯಾಧಾರಗಳನ್ನು ತನ್ನ ಸಂದೇಶವಾಹಕರಿಗೆ ಸಂದೇಶವಾಣಿಗಳನ್ನು ಅವತೀರ್ಣಗೊಳಿಸುತ್ತಾ ನೀಡುತ್ತಾನೆ. ಇದು ಪುರಾತನ ಕಾಲದಿಂದಲೇ ಜಾರಿಯಲ್ಲಿದೆ ಮತ್ತು ದೇವನು ತನ್ನ ಸಂದೇಶವಾಹಕರ ಮೂಲಕ ತಾನು ಮಾತ್ರ ಸೃಷ್ಟಿಕರ್ತನೆಂದು ತಿಳಿಸುತ್ತಾ ಇರುತ್ತಾನೆ. ಒಂದು ಕಡೆ ವಿಜ್ಞಾನ ದೇವನ ಅಸ್ತಿತ್ವವನ್ನು ಸೂಚಿಸುತ್ತಿರುವಾಗ ಇನ್ನೊಂದು ಕಡೆ ದೇವನೇ ಸ್ವತಃ ತಾನಿದ್ದೇನೆಂದು ಪ್ರಕಟಿಸುತ್ತಾನೆ.

"ಎವಿಡೆನ್ಸ್" ಎಂಬ ಪುಸ್ತಕದಲ್ಲಿ ವಿಜ್ಞಾನಿಗಳಿಗೆ ದೊರೆತ ದೈವಿಕ ವಾಣಿಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಉದಾಹರಣೆಗೆ, ಅಮೇರಿಕದ ಗಣಿತ ಶಾಸ್ತ್ರಜ್ಞ ಮತ್ತು ಖಗೋಳ ವಿಜ್ಞಾನಿ ಡಾಕ್ಟರ್ ಮೆರ್ಲಿನ್ ಗ್ರಾಂಟ್‌ಸ್ಮಿತ್ ಹೀಗೆ ಹೇಳುತ್ತಾರೆ: "ದೇವನು ಮನುಷ್ಯನೊಂದಿಗೆ ಮಾತನಾಡಬಲ್ಲನು. ಮನುಷ್ಯನು ಕೂಡ ದೇವನೊಂದಿಗೆ ಮಾತನಾಡಬಲ್ಲ. ದೇವನು ಹೇಳಿದ ಪ್ರಥಮ ಮಾತೇನೆಂದರೆ, ಮನುಷ್ಯನನ್ನು ಆಶ್ಚರ್ಯಕರ, ಅಪರಿಮಿತ, ವಿಶ್ವವನ್ನು ಅವನ ಸುತ್ತಲೂ ಸೃಷ್ಟಿಸಿದವನು ದೇವನೆಂದಾಗಿದೆ." (Evidence - page 150)

ನಮ್ಮ ಆದರಣೀಯ ನೇತಾರರಾದ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ದೊರೆತ ಪ್ರಥಮ ಸಂದೇಶವಾಣಿ, ದೇವನು ನಮ್ಮ ಸೃಷ್ಟಿಕರ್ತನೆಂದಾಗಿದೆ. (ಪವಿತ್ರ ಖುರ್‌ಆನ್ 96:2, 3 ನೋಡಿರಿ.)

ಇಂದಿನ ಕಾಲಘಟ್ಟದಲ್ಲಿ ಸೃಷ್ಟಿಕರ್ತನು ವಾಗ್ದತ್ತ ಮಸೀಹರೊಂದಿಗೆ ಧಾರಾಳ ಮಾತನಾಡಿರುವನು. ಅವರು ಹೀಗೆ ಹೇಳುತ್ತಾರೆ:

"ನಿಶ್ಚಯವಾಗಿಯೂ ದೇವನನ್ನು ಗಳಿಸಬಹುದಾದುದು ದೇವನ ಮೂಲಕವೇ ಆಗಿದೆ. ನಮ್ಮೊಂದಿಗೆ ಮಾತನಾಡುವ ಮೂಲಕ ಅವನು ತನ್ನ ಅಸ್ತಿತ್ವವನ್ನು ನಮಗೆ ಮನವರಿಕೆ ಮಾಡಿಕೊಡುತ್ತಾನೆ."

ಸಾತ್ವಿಕರಾದ ಜನರು ಗಳಿಸುವ ಅನುಭವದ ಮೂಲಕ, ಎಂದರೆ ದೇವನು ಅವರೊಂದಿಗೆ ಮಾತನಾಡುವ ಕಾರಣ ದೇವನ ಅಸ್ತಿತ್ವದ ಬಗ್ಗೆ ಅನುಭವಾತ್ಮಕ ಅಸ್ತಿಭಾರ ಹಾಕಲ್ಪಡುತ್ತದೆ. ದೇವನು ಹಿಂದಿನ

ಕಾಲದಲ್ಲಿ ಮಾತನಾಡುತ್ತಿದ್ದ, ಹಾಗೆ ಇಂದಿನ ಕಾಲದಲ್ಲೂ ಮಾತನಾಡುತ್ತಾನೆಂದು ವಾಗ್ದತ್ತ ಮಸೀಹರು(ಅ) ಒತ್ತಿಹೇಳಿದರು. (ಉದಾಹರಣೆಗೆ "ಇಸ್ಲಾಂ ಧರ್ಮ ತತ್ವಜ್ಞಾನ" ನೋಡಿರಿ.) ಅವರು ಹೀಗೆ ಹೇಳಿದರು:

"ನಾವು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಸಾವಿರಾರು ದುರೂದ್ ಪ್ರಾರ್ಥನೆ ಕೋರುತ್ತೇವೆ. ಅವರ ಮೂಲಕವೇ ನಾವು ಜೀವಂತ ದೇವನನ್ನು ಕಂಡೆವು. ಅವನು ತನ್ನ ಅಸ್ತಿತ್ವವನ್ನು ತನ್ನ ವಾಣಿಯ ಮೂಲಕ ಬಹಿರಂಗಪಡಿಸುತ್ತಾನೆ. ಅವನು ಅಸಾಧಾರಣವಾದ ದೃಷ್ಟಾಂತಗಳ ಮೂಲಕ ತನ್ನ ಅನಂತ ಶಕ್ತಿಯನ್ನು ಪ್ರದರ್ಶಿಸಿ ತನ್ನ ಹೊಳೆಯುತ್ತಿರುವ ವದನವನ್ನು ತೋರಿಸುತ್ತಾನೆ."

(The Essence of Islam,Vol 1 page 28)

ನಮ್ಮ ನೇತಾರರಾದ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಸರ್ವಶಕ್ತನಾದ ಅಲ್ಲಾಹನು ಅತ್ಯಂತ ತೇಜೋಮಯವೂ ಪರಮೋನ್ನತವೂ ಆಗಿರುವ ಶಬ್ದಗಳ ಮೂಲಕ ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ತಾನು ವಿಶ್ವವನ್ನೂ ನಮ್ಮೆಲ್ಲರನ್ನೂ ಸೃಷ್ಟಿಸಿರುವನೆಂದು ತಿಳಿಸಿರುವನು. ಪವಿತ್ರ ಖುರ್‌ಆನಿನಲ್ಲಿ ಅಡಕವಾದ ಆ ವಚನಗಳಲ್ಲಿ ಕೆಲವನ್ನು ನಿಮ್ಮ ಮುಂದಿರಿಸುತ್ತೇನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿರುವನು:

"ಓ ಜನರೇ, ನಿಮ್ಮನ್ನೂ ನಿಮಗಿಂತ ಮುಂಚಿನವರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವನ್ನು ಆರಾಧಿಸಿರಿ." (2:22)

"ಅಲ್ಲಾಹನು ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವನು." (14:33)

"ಅಲ್ಲಾಹನು ಆಕಾಶಗಳನ್ನೂ, ಭೂಮಿಯನ್ನೂ ಅವುಗಳ ಮಧ್ಯದಲ್ಲಿರುವ ಎಲ್ಲವನ್ನೂ ಸೃಷ್ಟಿಸಿದನು." (32:5)

"ಅಲ್ಲಾಹನು ಏಳು ಆಕಾಶಗಳನ್ನೂ ಭೂಮಿಯಲ್ಲಿ ಅವುಗಳಿಗೆ ಸಮಾನವಾದುದನ್ನೂ ಸೃಷ್ಟಿಸಿದವನಾಗಿದ್ದಾನೆ." (65:13)

"ಅಲ್ಲಾಹನು ನೀವು ಕಾಣುವಂತಹ ಸ್ತಂಭಗಳಿಲ್ಲದೆ ಆಕಾಶಗಳನ್ನು ಉನ್ನತಿಯಲ್ಲಿ ಇಟ್ಟಿರುವನು." (13:3)

"ಅಲ್ಲಾಹನು ಆಕಾಶಗಳನ್ನೂ ಭೂಮಿಯನ್ನೂ ಯಥೋಚಿತವಾಗಿ ಸೃಷ್ಟಿಸಿದ್ದಾನೆ. ವಿಶ್ವಾಸಿಗಳಿಗೆ ಅದರಲ್ಲಿ ನಿಶ್ಚಯವಾಗಿಯೂ ದೃಷ್ಟಾಂತವಿದೆ." (29:45)

"ಹೇಳು: ಸರ್ವ ವಸ್ತುಗಳ ಸೃಷ್ಟಿಕರ್ತನು ಅಲ್ಲಾಹನೇ ಆಗಿದ್ದಾನೆ. ಅವನು ಏಕನು, ಪರಮಾಧಿಕಾರ ಹೊಂದಿದವನು." (13:17)

"ಅಲ್ಲಾಹನು ಸರ್ವವಸ್ತುಗಳ ಸೃಷ್ಟಿಕರ್ತನು. ಸಕಲವಸ್ತುಗಳ ಸಂರಕ್ಷಕನೂ ಅವನೇ." (39:63)

"ಅಲ್ಲಾಹನ ಹೊರತು ಆಕಾಶದಿಂದಾಗಲಿ ಭೂಮಿಯಿಂದಾಗಲಿ ನಿಮಗೆ ಆಹಾರವನ್ನು ಒದಗಿಸುವ ಬೇರೆ ಯಾವನಾದರೂ ಸೃಷ್ಟಿಕರ್ತ ಇದ್ದಾನೆಯೇ?" (35:4)

"ಅವನೇ ಅಲ್ಲಾಹನು. ಅವನು ಸೃಷ್ಟಿಕರ್ತನೂ, ನಿರ್ಮಾಪಕನೂ ರೂಪಕೊಡುವವನೂ ಆಗಿದ್ದಾನೆ. ಬಲು ಸುಂದರವಾದ ಹೆಸರುಗಳು ಅವನಿಗಿವೆ." (59:25)

"ಎಲ್ಲ ಜೋಡಿಗಳನ್ನು ಸೃಷ್ಟಿಸಿದ ಅವನು ಪವಿತ್ರನು."(36:37)

"ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿರುವ ಹಾಗೂ (ಎಲ್ಲತರ) ಅಂಧಕಾರಗಳನ್ನೂ ಪ್ರಕಾಶವನ್ನೂ ಉಂಟುಮಾಡಿರುವ ಅಲ್ಲಾಹನಿಗೆ ಸರ್ವಸ್ತುತಿಗಳು." (6:2)

"ಎಲ್ಲ ಸ್ತುತಿಸ್ತೋತ್ರಗಳು ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನಿಗೆ." (35:2)

"ಆಕಾಶದಲ್ಲಿ ನಕ್ಷತ್ರ ಪುಂಜವನ್ನೂ ಪ್ರಜ್ವಲಿಸುವ ಸೂರ್ಯನನ್ನೂ ಪ್ರಕಾಶಿಸುವ ಚಂದ್ರನನ್ನೂ ಸೃಷ್ಟಿಸಿದವನು ಅನುಗ್ರಹಪೂರ್ಣನು."

(25:62)

"ಹೀಗೆ ಅತ್ಯುತ್ತಮವಾಗಿ ಸೃಷ್ಟಿಸುವ ಅಲ್ಲಾಹನು ಅನುಗ್ರಹ ಪೂರ್ಣನು." (23:15)

"ನಿಶ್ಚಯವಾಗಿಯೂ ನಿನ್ನ ಪ್ರಭು ಮಹಾ ಸೃಷ್ಟಿಕರ್ತನೂ ಸರ್ವಜ್ಞನೂ ಆಗಿದ್ದಾನೆ." (15:87)

"ಪ್ರತಿಯೊಂದು ವಸ್ತುವನ್ನು ಅದರ ಸರಿಯಾದ ರೂಪದಲ್ಲಿ ಸೃಷ್ಟಿಸಿ, ಅನಂತರ ಅದಕ್ಕೆ ಮಾರ್ಗದರ್ಶನ ನೀಡಿದವನು ನಮ್ಮ ಪ್ರಭು." (20:51)

"ನಾವು ನಿಮ್ಮನ್ನು ಸೃಷ್ಟಿಸಿ ನಿಮಗೆ ರೂಪ ಕೊಟ್ಟೆವು. ಅನಂತರ ನಾವು, 'ಆದಮನ ಅನುಸರಣೆ ಮಾಡಿರಿ' ಎಂದು ದೇವದೂತರೊಡನೆ ಹೇಳಿದೆವು." (7:12)

"ನಾವೇ ನಿಮ್ಮನ್ನು ಸೃಷ್ಟಿಸಿದ್ದು. ಮತ್ತೆ ನೀವೇಕೆ ಅದನ್ನು ಒಪ್ಪುವುದಿಲ್ಲ? ನೀವು ಸುರಿಸುವ ವೀರ್ಯದ ಬಗ್ಗೆ ಯೋಚಿಸಿದ್ದೀರಾ? ಏನು, ಅದನ್ನು ಸೃಷ್ಟಿಸುವವರು ನೀವೋ? ಅಥವಾ ಅದರ ಸೃಷ್ಟಿಕರ್ತರು ನಾವೋ?" (56: 58–60)

"ಸರ್ವೋನ್ನತನಾದ ನಿನ್ನ ಪ್ರಭುವಿನ ನಾಮವನ್ನು ಪ್ರಕೀರ್ತನೆ ಮಾಡು. ಅವನು ಸೃಷ್ಟಿಸುತ್ತಾನೆ ಮತ್ತು ಪರಿಪೂರ್ಣಗೊಳಿಸುತ್ತಾನೆ. ಅವನು ರೂಪಕೊಡುತ್ತಾನೆ ಮತ್ತು ಮಾರ್ಗದರ್ಶನ ನೀಡುತ್ತಾನೆ." (87:2–4)

"ಸರ್ವವನ್ನೂ ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ ಪಠಿಸು. ಅವನು ಮನುಷ್ಯನನ್ನು (ಗರ್ಭಾಶಯದಲ್ಲಿ) ಅಂಟಿಕೊಳ್ಳುವ ಮಾಂಸ ಪಿಂಡದಿಂದ ಸೃಷ್ಟಿಸಿದನು. ಪಠಿಸು, ನಿನ್ನ ಪ್ರಭು ಅತಿ ಕೀರ್ತಿವಂತನಾಗಿದ್ದಾನೆ. ಅವನು ಲೇಖನಿಯಿಂದ ಕಲಿಸಿದನು. ಮನುಷ್ಯನಿಗೆ ತಿಳಿಯದಿದ್ದುದನ್ನು ಅವನಿಗೆ (ಮನುಷ್ಯನಿಗೆ) ಕಲಿಸಿದನು." (96:2–6)

"ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನ ಕುರಿತು ನಿಮಗೆ ಸಂಶಯವೇ? (14:11)

ಕೊನೆಯದಾಗಿ ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರ ಈ ಕೆಳಗಿನ ಪದ್ಯದೊಂದಿಗೆ ಮುಕ್ತಾಯಗೊಳಿಸುತ್ತೇನೆ:

"ರಾತ್ರಿ ಹಗಲು ನಾನು ಹೇಳುವುದು ಹೀಗೆಯೇ ಆಗಿದೆ –
ಈ ವಿಶ್ವಕ್ಕೊರ್ವ ದೇವನಿರುವನೆಂದು."

# ಇಸ್ಲಾಮ್ ಧರ್ಮದಲ್ಲಿ ಮಹಿಳೆಯ ಸ್ಥಾನ

**1986ರ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ) ಲಂಡನ್‌ನಲ್ಲಿ ಹಝ್ರತ್ ಮಿರ್ಝಾ ತಾಹಿರ್‌ಅಹ್ಮದ್, ಚತುರ್ಥ ಖಲೀಫ, ಮಹಿಳೆಯರನ್ನು ಸಂಬೋಧಿಸಿ ಮಾಡಿದ ಭಾಷಣ.**



ಪ್ರಾಸ್ತಾವಿಕ ಪ್ರಾರ್ಥನೆಗಳ ನಂತರ ಹಝ್ರತ್ ಖಲೀಫತುಲ್ ಮಸೀಹ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಓದಿದರು:

ಮನ್ ಅಮಿಲ ಸಾಲಿಹನ್ ಮ್ಮಿನ್ ಧಕರಿನ್ ಅವ್ ಉನ್‌ಸಾ ವಹುವ ಮೂಮಿನುನ್ ಫಲನುಹಯ್ಯಿಯನ್ನಹೂ ಹಯಾತನ್ ತಯ್ಯಿಬತನ್ ವ ಲನಜ್‌ಝಿಯನ್ನಹುಮ್ ಅಜ್‌ರಹುಮ್ ಬಿಅಹ್‌ಸನಿ ಮಾ ಕಾನೂ ಯಅ್‌ಮಲೂನ್

"ಪುರುಷನಾಗಲಿ, ಸ್ತ್ರೀಯಾಗಲಿ ಸತ್ಯ ವಿಶ್ವಾಸಿಯಾಗಿದ್ದುಕೊಂಡು ಸತ್ಕರ್ಮ ಮಾಡಿದರೆ ಖಂಡಿತವಾಗಿಯೂ ನಾವು ಅವರಿಗೆ ಪರಿಶುದ್ಧ ಜೀವನವನ್ನು ದಯಪಾಲಿಸುವೆವು. ಅವರ ಸದ್ವರ್ತನೆಗೆ ತಕ್ಕುದಾದ ಪ್ರತಿಫಲವನ್ನು ಸಹ ನಾವು ನಿಶ್ಚಯವಾಗಿಯೂ ನೀಡುವೆವು."

(16:98)

ಇಂದು ಮಹಿಳೆಯು ಮುಖ್ಯ ಚರ್ಚಾ ವಿಷಯವಾಗಿದ್ದಾಳೆ ಮತ್ತು ಲೋಕದ ವಿವಿಧ ಪ್ರದೇಶಗಳಲ್ಲಿ ಮಹಿಳೆಯ ಸ್ವಾತಂತ್ರ್ಯದ ಚಳುವಳಿಗಳು ವಿವಿಧ ರೂಪಗಳಲ್ಲಿ ನಡೆಯುತ್ತಾ ಇವೆ. ಪಾಶ್ಚಿಮಾತ್ಯ ಲೋಕದಲ್ಲಿ ಮಹಿಳೆಯರ ಸ್ವಾತಂತ್ರ್ಯದ ಚಳುವಳಿಗಳು ಪ್ರಾರಂಭವಾದುವು. ಇವುಗಳ ಪ್ರಭಾವ ಪೌರ್ವಾತ್ಯ ದೇಶಗಳಲ್ಲಿ ಉಂಟಾಗಿ ಮಹಿಳೆಯರ ಸ್ವಾತಂತ್ರ್ಯವನ್ನು ಪ್ರತಿಪಾದಿಸುವವರು ಪಾಶ್ಚಿಮಾತ್ಯರು ಅವಲಂಬಿಸಿರುವ ನಿಲುವನ್ನು ಅನುಮೋದಿಸುತ್ತಾ ಇದ್ದಾರೆ. ಈ ಚಳುವಳಿಗಳ ಹಿನ್ನೆಲೆಯನ್ನು ಸಾಮಾನ್ಯವಾಗಿ ಹೀಗೆ ವಿವರಿಸಲಾಗುತ್ತಿದೆ: ಪುರಾತನ ಧರ್ಮಗಳು ಮಹಿಳೆಯರ ಎಲ್ಲ ಹಕ್ಕುಗಳನ್ನು ಅಪಹರಿಸಿವೆ. ಇಸ್ಲಾಮ್ ಧರ್ಮವನ್ನು ವಿಶಿಷ್ಟವಾಗಿ ಆಕ್ಷೇಪಗಳಿಗೆ ಗುರಿಪಡಿಸಿ, "ಮಹಿಳೆಯರು ಹಿಂದುಳಿದ ಮತ್ತು ಪುರಾತನ ರೀತಿಯ ಜೀವಿತವನ್ನು ಅಂಗೀಕರಿಸಲು ಇಸ್ಲಾಮ್ ಧರ್ಮವು ಮಹಿಳೆಯರನ್ನು ನಿರ್ಬಂಧಿಸುತ್ತದೆ" ಎಂದು ಹೇಳಲಾಗುತ್ತಿದೆ.

ಮಹಿಳೆಯರ ಸ್ವಾತಂತ್ರ್ಯದ ಸ್ವಯಂಘೋಷಿತ ಪತಾಕೆಧಾರಿಗಳು ಇಸ್ಲಾಮೀ ಸಂಸ್ಕೃತಿ, ಇಸ್ಲಾಮೀ ನಾಗರಿಕತೆ ಮತ್ತು ಎಲ್ಲ ರೀತಿಯ ಧಾರ್ಮಿಕ ನಿಯಮಗಳ ಹಿಡಿತದಿಂದ ಮುಸ್ಲಿಮ್ ಮಹಿಳೆಯರನ್ನು ಸ್ವತಂತ್ರರನ್ನಾಗಿ ಮಾಡಲು ನಿರ್ಧರಿಸಿ ಹೊರಟಿರುತ್ತಾರೆ.

ಮಹಿಳೆಯರ ಸ್ವಾತಂತ್ರ್ಯ ಚಳುವಳಿಗಳ ಬಗ್ಗೆ ಪರಿಶೀಲನೆ ನಡೆಸುವ ಮೊದಲು, ಇಸ್ಲಾಮ್‌ಧರ್ಮವು ಸ್ಥಾಪಿತವಾಗುವ ಮೊದಲು ಮಹಿಳೆಯರ ಸ್ಥಿತಿ ಹೇಗಿತ್ತು? ಇಸ್ಲಾಮ್‌ಧರ್ಮವು ಮಹಿಳೆಯರನ್ನು ಬಂಧನದಲ್ಲಿಡಲು ಬಂದಿತ್ತೋ ಅಥವಾ ಅವರನ್ನು ಸ್ವತಂತ್ರರನ್ನಾಗಿ ಮಾಡಲಿಕ್ಕೋ? ಎಂಬುದನ್ನು ಪರಿಗಣಿಸಬೇಕಾಗಿದೆ.

ಇಸ್ಲಾಮ್ ಧರ್ಮದ ಆಗಮನಕ್ಕೆ ಹಿಂದಿನ ಕಾಲವನ್ನು ಅಜ್ಞಾನದ ಕಾಲ ಎಂದು ಕರೆಯಲಾಗುತ್ತಿದೆ. ಆ ಕಾಲದಲ್ಲಿ ಮಹಿಳೆಯರ ಮೇಲೆ ಎಂತಹ ಕ್ರೂರ ರೀತಿಯ ದೌರ್ಜನ್ಯ ಮಾಡಲಾಗುತ್ತಿತ್ತೆಂದರೆ ಅವುಗಳನ್ನು ಪ್ರಸ್ತಾಪಿಸುವಾಗ ಸಂವೇದನ ಶೀಲನಾದ ಪ್ರತಿಯೊಬ್ಬ ಮನುಷ್ಯನು ತೀವ್ರವಾದ ನೋವನ್ನು ಅನುಭವಿಸುತ್ತಾನೆ. ಆ ಕಾಲಘಟ್ಟದಲ್ಲಿ ಯಹೂದಿಯರೂ ಕ್ರೈಸ್ತರೂ ಅರಬ್‌ದೇಶದಲ್ಲಿದ್ದರೂ ಅವರು ಯಾರೂ ಅರಬಿ ಮಹಿಳೆಯರ ರಕ್ಷಣೆಗೆ ಬರಲಿಲ್ಲ. ಅರಬಿಗಳಲ್ಲಿ ಕೂಡ ಯಾರೂ ಅರಬಿ ಮಹಿಳೆಯರ ಸ್ವಾತಂತ್ರ್ಯಕ್ಕೋಸ್ಕರ ಧ್ವನಿ ಎತ್ತಲಿಲ್ಲ. ಆದರೆ ಪವಿತ್ರ ಖುರ್‌ಆನಿನ ಉಪದೇಶಗಳ ಬೆಳಕಿನಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮಾತ್ರ ಮಹಿಳೆಯರನ್ನು ಬಂಧಿಸಲಾದ ಎಲ್ಲ ಬೇಡಿಗಳನ್ನು ಕಡಿದು ಹಾಕಿದರು ಮತ್ತು ಎಲ್ಲ ವಿಧ ಸಂಕೋಲೆಗಳಿಂದ ಅವರನ್ನು ಬಿಡುಗಡೆಗೊಳಿಸಿದರು. ಇದರ ವಿವರಣೆಯಾಗಿ ಅಲ್ಲಗಳೆಯಲಾಗದ ವಾಸ್ತವಿಕತೆಗಳನ್ನು ನಾನು ವಿವರಿಸಲು ಬಯಸುತ್ತೇನೆ.

## ಅರಬಿ ಸಮಾಜದಲ್ಲಿ ಮಹಿಳೆಯ ಸ್ಥಿತಿ

ಸಾಮಗ್ರಿಗಳು ಮತ್ತು ಪ್ರಾಣಿಗಳ ಹಾಗೆ ಮಹಿಳೆಯರನ್ನು ವಾರೀಸುದಾರರಲ್ಲಿ ಹಂಚಲಾಗುತ್ತಿತ್ತು. ತಂದೆಯ ಪತ್ನಿ (ಚಿಕ್ಕಮ್ಮ) ಪುತ್ರನಿಗೆ ವಾರೀಸು ಹಕ್ಕಾಗಿ ಲಭಿಸುತ್ತಿದ್ದು ಆಕೆಯನ್ನು ವಿವಾಹವಾಗುವ ಪ್ರಥಮ ಹಕ್ಕು ಅವನಿಗೆ ದೊರಕುತ್ತಿತ್ತು. ವಿವಾಹ ವಿಚ್ಛೇದಿತೆ ತನ್ನ ಇಷ್ಟ ಪ್ರಕಾರ ವಿವಾಹವಾಗಲು ಸಾಧ್ಯವಿರಲಿಲ್ಲ. ವಿಧವೆಯು ಪತಿ ಮೃತನಾದ ನಂತರ ಒಂದು ವರ್ಷಕಾಲ ಕತ್ತಲೆಯ ಕೋಣೆಯಲ್ಲಿ ಕೊಳಕು ಬಟ್ಟೆ ಧರಿಸಿ ಬಂಧಿತಳಾಗಿ ಇರಬೇಕಾಗುತ್ತಿತ್ತು. ಪತಿಯು ಮೃತನಾಗುವಾಗ ಧರಿಸಿದ್ದ ಮಲೀನ ಬಟ್ಟೆಗಳನ್ನು ಧರಿಸಿ ಪತ್ನಿ ಒಂದು ವರ್ಷಕಾಲ ಶೋಕಾಚರಣೆ ಮಾಡಬೇಕಾಗಿತ್ತು ಮತ್ತು ಮನೆಯೊಳಗಿಂದ ಹೊರಗೆ ಕಾಲಿಡಬಾರದೆಂದು ಆಜ್ಞಾಪಿಸಲಾಗುತ್ತಿತ್ತು. ಹೆಣ್ಣು ಎಂದರೆ ಅದು ಅಪಕೀರ್ತಿಯ ಒಂದು ಕಳಂಕವೆಂದು ಗಣಿಸಲಾಗುತ್ತಿತ್ತು. ಹೆಣ್ಣು ಶಿಶುವನ್ನು ಜೀವಂತವಾಗಿ ಹೂಳುವುದನ್ನು ಅಭಿಮಾನಕರವೆಂದು ಗಣಿಸಲಾಗುತ್ತಿತ್ತು ಮತ್ತು ಬಹಳ ಅಭಿಮಾನದಿಂದ ಅದರ ಬಗ್ಗೆ ಪದ್ಯಗಳಲ್ಲೂ ಕಾವ್ಯಗಳಲ್ಲೂ ಹೀಗೆ ವಿವರಿಸಲಾಗುತ್ತಿತ್ತು: ನಾವು ಎಂತಹ ಅಭಿಮಾನಶಾಲಿ ಸ್ವತಂತ್ರ ಜನತೆಯಾಗಿದ್ದೇವೆಂದರೆ ನಾವು ನಮ್ಮ ಕೈಗಳಿಂದಲ್ಲೇ ನಮ್ಮ ಹೆಣ್ಣು ಮಕ್ಕಳನ್ನು ಜೀವಂತವಾಗಿ ಹೂಳುತ್ತಿದ್ದೇವೆ. ಒಬ್ಬ ಅರಬಿ ಕವಿ ಹೀಗೆ ಹಾಡಿದ್ದಾನೆ:

ತಹ್‌ವಾ ಹಯಾತೀ ವ ಅಹ್‌ವಾ ಮೌತಹಾ ಶಫಖನ್

ವಲ್ ಅಕ್‌ರಮು ಲಿಝ್ಝಾಲಿನ್ ಅಲಲ್ ಹರಮಿ

ಅರ್ಥ: "ನನ್ನ ಪುತ್ರಿ ನನ್ನ ಜೀವಿತವನ್ನು ಆಶಿಸುತ್ತಾಳೆ ಮತ್ತು ನಾನು ಜೀವಿಸಿರಬೇಕೆಂದು ಪ್ರಾರ್ಥಿಸುತ್ತಾಳೆ. ಆದರೆ ನಾನು ಆಕೆಗೆ ಮೃತ್ಯುವನ್ನು ಆಶಿಸುತ್ತೇನೆ. ವಾಸ್ತವಿಕವಾಗಿ ಹೆಣ್ಣಿಗೆ ಮೃತ್ಯುವೇ ಹೆಚ್ಚು ಗೌರವಾರ್ಹವಾಗಿದೆ."

ಮಹಿಳೆ ಸ್ವತಃ ವಾರೀಸುದಾರಿಕೆಯಲ್ಲಿ ಹಂಚಲ್ಪಡುವ ಸ್ವತ್ತು ಆಗಿರುವ ಕಾರಣ ಆಕೆಗೆ ವಾರೀಸು ಹಕ್ಕು ದೊರಕುವ ಪ್ರಶ್ನೆಯೇ ಇರಲಿಲ್ಲ, ಮಹಿಳೆಯನ್ನು ಕೆಟ್ಟಕೆಲಸಗಳ ಆಯುಧವಾಗಿ ಗಣಿಸಲಾಗುತ್ತಿತ್ತು. ಅಜ್ಞಾನ ಕಾಲದಲ್ಲಿ ಸ್ವರ್ಣಾಕ್ಷರಗಳಿಂದ ಬರೆದು ಕಅ್‌ಬದ ಗೋಡೆಗಳಿಗೆ ತೂಗುಹಾಕಲಾಗಿದ್ದ ಬಹುತೇಕ ಕಾವ್ಯಗಳಲ್ಲಿ, ನಾವು ಹೆಣ್ಣಿನೊಂದಿಗೆ ಹೀಗೆ ವರ್ತಿಸಿದೆವು, ನಾವು ಹೆಣ್ಣಿನೊಂದಿಗೆ ಹಾಗೆ ವರ್ತಿಸಿದೆವು ಎಂದು ವರ್ಣಿಸಲಾಗುತ್ತಿತ್ತು. ಅವುಗಳಲ್ಲಿ ಅತ್ಯಂತ ಹೆಮ್ಮೆಯಿಂದ ಹೀಗೆ ಹೇಳಲಾಗುತ್ತಿತ್ತು: "ನಾವು ಹೆಣ್ಣನ್ನು ನಮ್ಮ ಭೋಗಲಾಲಸೆಗಳಿಗೆ ಹೇಗೆ ಬಳಸಿಕೊಂಡೆವೆಂದರೆ ಈ ವಿಷಯದಲ್ಲಿ ನಮ್ಮನ್ನು ಎದುರಿಸಿ ಸೋಲಿಸಲು ಯಾರಿಗೂ ಸಾಧ್ಯವಿಲ್ಲ." ಒಬ್ಬನು ತನ್ನ ಕೆಟ್ಟ ಕೆಲಸಗಳಲ್ಲಿ ಎಷ್ಟು ಮುಂದೆ ಸಾಗುತ್ತಿದ್ದನೋ ಅಷ್ಟು ಹೆಚ್ಚು ಅಭಿಮಾನದಿಂದ ಪದ್ಯಗಳಲ್ಲಿ ಅದರ ಬಗ್ಗೆ ವರ್ಣಿಸುತ್ತಿದ್ದನು. ಇಂತಹ ಪದ್ಯ ರಚನೆ ಮಾಡುತ್ತಿದ್ದ ಕವಿಗಳನ್ನು ಬಹಳ ಗೌರವದಿಂದ ಅರಬ್ ದೇಶದಲ್ಲೆಲ್ಲ ಕಾಣಲಾಗುತ್ತಿತ್ತು: ಈ ವಿಷಯಕ್ಕೆ ಸಂಬಂಧಿಸಿ ಅತ್ಯಂತ ಅಶ್ಲೀಲ ಪದ್ಯಗಳನ್ನು ಕಅ್‌ಬದ ಗೋಡೆಗಳಿಗೆ ತೂಕಹಾಕಲಾಗುತ್ತಿತ್ತು. ಮಹಿಳೆಯರ ಜೀವಿತಕ್ಕೆ ಸಂಬಂಧಿಸಿದ ಇಂತಹ ಚಿತ್ರಣಗಳನ್ನು ಇನ್ನಷ್ಟು ಹೆಚ್ಚಿಗೆ ನೀಡುವ ಆವಶ್ಯಕತೆ ಇಲ್ಲ.

ಇಂದಿನ ಕಾಲದಲ್ಲಿ ಮಹಿಳೆಯನ್ನು ಪಾಶ್ಚಿಮಾತ್ಯ ಲೋಕದಲ್ಲಿ ಆಟಿಕೆಯನ್ನಾಗಿ ಪರಿಗಣಿಸಲಾಗುತ್ತಿದೆ ಮತ್ತು ನಾಗರಿಕತೆಯ ಹೆಸರಿನಲ್ಲಿ, ಪ್ರತಿಯೊಂದು ಕೆಲಸವನ್ನು ಸ್ವಾತಂತ್ರ್ಯದ ಹೆಸರಿನಲ್ಲಿ ಜಾರಿಗೊಳಿಸಲಾಗುತ್ತಿದೆ. ಇಂತಹ ಸಾಮಾಜಿಕ ವ್ಯವಸ್ಥೆ ಯುರೋಪ್ಪು, ಅಮೇರಿಕ ಮತ್ತು ಇತರ ಪಾಶ್ಚಿಮಾತ್ಯ ದೇಶಗಳಲ್ಲಿರುವ ಹಾಗೆಯೇ ಬಹುತೇಕ ಪೌರ್ವಾತ್ಯ ದೇಶಗಳಲ್ಲೂ ಕಂಡುಬರುತ್ತದೆ. ಈ ಎಲ್ಲ ವಿಷಯಗಳ ಕಡೆಗೆ ಆಧುನಿಕ ಸಾಮಾಜಿಕ ವ್ಯವಸ್ಥೆ ನಿಮ್ಮನ್ನು ಆಮಂತ್ರಿಸುತ್ತಿದೆಯಾದರೂ ಅವುಗಳ ಉದ್ಭವ ಸ್ಥಾನ ಇಸ್ಲಾಮ್‌ಧರ್ಮಕ್ಕೆ ಪೂರ್ವದಲ್ಲಿದ್ದ ಅರಬ್ ಸಾಮಾಜಿಕ ವ್ಯವಸ್ಥೆಯಾಗಿದೆ; ಇಂದು ಆಧುನಿಕವೆಂದು ಕರೆದುಕೊಳ್ಳುವ ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ಲೋಕವಲ್ಲ. ಇಸ್ಲಾಮ್ ಮಹಿಳೆಯರನ್ನು ಬಂಧನ ಮುಕ್ತರನ್ನಾಗಿ ಮಾಡಲು ಆಗಮಿಸಿತ್ತು. ಅವರನ್ನು ಬಂಧನಕೊಳ್ಳಪಡಿಸಲು ಅದು ಬಂದಿರಲಿಲ್ಲ. ಅರಬ್ ದೇಶದಲ್ಲಿ ಮಾತ್ರವಲ್ಲ ಬೇರೆ ಅನೇಕ ದೇಶಗಳಲ್ಲೂ ಮಹಿಳೆಯರೊಂದಿಗೆ ಹಾಗೆಯೇ ದೌರ್ಜನ್ಯದಿಂದ ವರ್ತಿಸಲಾಗುತ್ತಿತ್ತು. ಕೆಲವು ಪೌರ್ವಾತ್ಯ ದೇಶಗಳಲ್ಲಿ ಮಹಿಳೆಯರ ಮೇಲೆ ಎಂತಹ ದೌರ್ಜನ್ಯ ಜಾರಿಯಲ್ಲಿದೆ ಎಂದರೆ ಅವುಗಳು ಅತ್ಯಂತ ಪುರಾತನ ಅಂಧಕಾರಮಯ ಕಾಲವನ್ನು ನೆನಪಿಸುತ್ತವೆ.

ಇಸ್ಲಾಮ್ ಮಹಿಳೆಯರನ್ನು ಈ ಎಲ್ಲ ಕೆಡುಕುಗಳಿಂದ ರಕ್ಷಿಸಿತು. ಮಹಿಳೆಯರಿಂದ ಅಪಹರಿಸಲಾದ ಎಲ್ಲ ಹಕ್ಕುಗಳನ್ನು ಅವರಿಗೆ ಮರಳಿ ನೀಡಿತು. ಇದಲ್ಲದೆ ಇಸ್ಲಾಮಿಗೆ ಮೊದಲು ಯಾವುದೇ ಧರ್ಮ ಅಥವಾ ಸಂಸ್ಕೃತಿ ಮಹಿಳೆಯರಿಗೆ ಎಂದೂ ನೀಡದಂತಹ ಹೊಸದಾದ ಹಕ್ಕುಗಳನ್ನು ಇಸ್ಲಾಮ್ ಮಹಿಳೆಯರಿಗೆ ನೀಡಿತು.

ಇಂದಿನಕಾಲದಲ್ಲಿ ಯುರೋಪು, ಅಮೇರಿಕ ಮತ್ತು ಪೌರ್ವಾತ್ಯ ದೇಶಗಳಲ್ಲಿ ನಡೆಯುತ್ತಿರುವ ಮಹಿಳೆಯರ ಸ್ವಾತಂತ್ರ್ಯ ಸಮರಗಳಲ್ಲಿ ಮಹಿಳೆಯರೇ ಮುಂದಾಳುಗಳಾಗಿದ್ದಾರೆ. ಮಹಿಳೆಯರೇ ಅವುಗಳ ವ್ಯವಸ್ಥೆ ಮಾಡುತ್ತಾರೆ. ಎಷ್ಟರ ಮಟ್ಟಿಗೆ ಈ ವಿಷಯದಲ್ಲಿ ಜಯಗಳಿಸಿದ್ದಾರೆ, ಅವರ ನಿಲುವುಗಳು ಮತ್ತು ಚಿಂತನೆಗಳು ಮಹಿಳೆಯರಿಗೆ ಎಷ್ಟರ ಮಟ್ಟಿಗೆ ಲಾಭದಾಯಕವಾಗಿವೆ ಅಥವಾ ಹಾನಿಕರವಾಗಿವೆ ಎಂಬುದು ಬೇರೆಯೇ ಒಂದು ವಿಷಯವಾಗಿದ್ದು ಅದರ ಬಗ್ಗೆ ಆಮೇಲೆ ಪ್ರಸ್ತಾಪಿಸುವೆನು.

ಮುಸ್ಲಿಮ್ ಮಹಿಳೆ ಪಂಥಾಹ್ವಾನದ ರೂಪದಲ್ಲಿ ಲೋಕದಲ್ಲಿ ಎಲ್ಲರ ಮುಂದೆ ಇರಿಸಬಹುದಾದ ವಿಷಯ ಇದಾಗಿದೆ: ಇಸ್ಲಾಮ್ ಧರ್ಮದ ಹೊರತು ಬೇರೆ ಎಲ್ಲ ಧರ್ಮಗಳಲ್ಲಿ ಒಂದು ಧರ್ಮ ಕೂಡ ಮಹಿಳೆಗೆ ತನ್ನ ಮೇಲೆ ಹಿಂದಿನ ಕಾಲದಿಂದ ನಡೆಸಲಾಗುತ್ತಿದ್ದ ದೌರ್ಜನ್ಯದಿಂದ ಮುಕ್ತಿಯನ್ನು ನೀಡಲಿಲ್ಲ ಮತ್ತು ಮಹಿಳೆಯ ಮೇಲೆ ಸಂಸ್ಕೃತಿಯ ಹೆಸರಿನಲ್ಲಿ ನಡೆಸಲಾಗುತ್ತಿದ್ದ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಲಿಲ್ಲ. ನೀವು ಈ ವಿಷಯಕ್ಕೆ ಸಂಬಂಧಿಸಿ ಯಹೂದಿಧರ್ಮ, ಕ್ರೈಸ್ತಧರ್ಮ, ಬೌದ್ಧಧರ್ಮ ಮತ್ತು ಕನ್‌ಫ್ಯೂಶಿಯಸ್ ಧರ್ಮಗಳ ಚರಿತ್ರೆಯನ್ನು ಪರಿಶೀಲಿಸಿ ಅವರೊಂದಿಗೆ ಇಸ್ಲಾಮನ್ನು ಸಮತೋಲನ ನಡೆಸಿ ನೋಡುವುದಾದರೆ, ಮಹಿಳೆಯರಿಗೆ ಸ್ವಾತಂತ್ರ್ಯ ನೀಡುವ ಬಗ್ಗೆ ಮತ್ತು ಮಹಿಳೆಯರಿಗೆ ಹಕ್ಕುಗಳನ್ನು ನೀಡುವ ಬಗ್ಗೆ ಮಹತ್ವಪೂರ್ಣವಾದ ಉಪದೇಶ ನೀಡಿದುದನ್ನು ಯಾವುದಾದರೂ ಒಂದು ಧರ್ಮದಲ್ಲಿ ಕೂಡ ಕಾಣಲಾರಿರಿ. ಇಂದಿನ ಕಾಲದಲ್ಲಿ ವಿವಿಧ ಧರ್ಮಗಳ ಅನುಯಾಯಿಗಳು ನಮ್ಮ ಮುಂದೆ ಇರಿಸುವ ಅಧಿಕೃತ ಧಾರ್ಮಿಕ ಗ್ರಂಥಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಮಾಡುವುದನ್ನು ಪ್ರತಿಪಾದಿಸುವ ಎಂತಹ ಉಪದೇಶಗಳು ಇವೆ ಎಂದರೆ ಅವುಗಳಿಂದ ಬಹಳ ಭಯಾನಕವೂ ಹಿರಿದಾದುದೂ ಪ್ರಭಾವಗಳು ಅವರ ಸಮಾಜದ ಮೇಲೆ ಉಂಟಾದುವು. ವಾಸ್ತವಿಕ ವಿಷಯವೇನೆಂದರೆ, ಇಂದು ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ ನೀಡಬೇಕೆಂಬ ಚಳುವಳಿಗಳು ಅವರದೇ ಆಗಿರುವ ಹಿನ್ನೆಲೆಯಿಂದ ಪ್ರಾರಂಭಗೊಂಡಿವೆ. ಅವರ ಹಿಂದಿನ ಚರಿತ್ರೆಯ ಕಾರಣದಿಂದ ಆರಂಭಗೊಂಡಿವೆ. ಇಸ್ಲಾಮ್ ಧರ್ಮವು ಹದಿನಾಲ್ಕು ನೂರು ವರ್ಷಗಳಿಗಿಂತಲೂ ಹಿಂದೆ ಮಹಿಳೆಯರಿಗೆ ನೀಡಿರುವ ಹಕ್ಕುಗಳನ್ನು ಇಂದಿನ ತನಕ ಮಹಿಳೆಯರ ಸ್ವಾತಂತ್ರ್ಯ ಚಳುವಳಿಗಳು ಅವರಿಗೆ ನೀಡಲು ಸಾಧ್ಯವಾಗಲಿಲ್ಲ.

ಇಸ್ಲಾಮ್ ಮಹಿಳೆಯರಿಗೆ ಕೆಲವು ಹಕ್ಕುಗಳನ್ನು ಸ್ವಾತಂತ್ರ್ಯಗಳ ರೂಪದಲ್ಲಿ ಮತ್ತು ಕೆಲವು ಹತೋಟಿಗಳ ರೂಪದಲ್ಲಿ ನೀಡಿದೆ. ಅರಬಿ ಸಮಾಜ ಮಹಿಳೆಯರನ್ನು ಗುಲಾಮರನ್ನಾಗಿ ಮಾಡಿ ಅವರನ್ನು ಹಕ್ಕುಗಳಿಂದ ವಂಚಿತರನ್ನಾಗಿ ಮಾಡುತ್ತಿತ್ತು. ಅವುಗಳ ವಿರುದ್ಧ ಇಸ್ಲಾಮ್ ಪ್ರತಿಭಟಿಸಿತು ಮತ್ತು ಮಹಿಳೆಯರಿಂದ ಕಿತ್ತುಕೊಂಡ ಎಲ್ಲ ಹಕ್ಕುಗಳನ್ನು ನೀಡಿತು. ನಾಗರಿಕತೆ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ಮನುಷ್ಯರ ಭೋಗ ಲಾಲಸೆಗಳನ್ನು ಈಡೇರಿಸಲು ಮಹಿಳೆಯರನ್ನು ಆಟಿಕೆಗಳನ್ನಾಗಿ ಮಾಡುತ್ತಿದ್ದುದರಿಂದ ಸ್ವಾತಂತ್ರ್ಯ ನೀಡಲು ಅವರ ಮೇಲೆ ಇಸ್ಲಾಮ್ ಹತೋಟಿಗಳನ್ನು ವಿಧಿಸಿತು. ನೀವು ಇಸ್ಲಾಮ್ ವಿಧಿಸಿರುವ ಹತೋಟಿಗಳನ್ನು ಪರಿಶೀಲಿಸುವುದಾದರೆ ಅವು ಮಹಿಳೆಯರಿಗೆ ಸ್ವಾತಂತ್ರ್ಯ ನೀಡುತ್ತವೆ. ಇಸ್ಲಾಮ್ ನೀಡಿದ ಹಕ್ಕುಗಳನ್ನು ನೋಡುವುದಾದರೆ ಅವುಗಳಲ್ಲೂ ಮಹಿಳೆಯರಿಗೆ ಸ್ವಾತಂತ್ರ್ಯವಿದೆ.

### ಆಧುನಿಕ ಪಾಶ್ಚಿಮಾತ್ಯ ಸಮಾಜದಲ್ಲಿ ಮಹಿಳೆಯ ಸ್ಥಾನ

ಅರಬಿ ಹಿನ್ನೆಲೆಯನ್ನು ವಿವರಿಸಿದ ನಂತರ ನಾನು ನಿಮ್ಮನ್ನು ಯುರೋಪಿನ ಹಿನ್ನೆಲೆಗೆ ಒಯ್ಯುತ್ತೇನೆ. ಸ್ವಾತಂತ್ರ್ಯದ ಸಂದೇಶ ನೀಡುವ

ಮಹಿಳೆಯರು ಸ್ವತಃ ಎಂತಹ ಗತ ಕಾಲಘಟ್ಟದೊಂದಿಗೆ ಸಂಬಂಧವನ್ನು ಹೊಂದಿದ್ದಾರೆ ಮತ್ತು ಸ್ವಾತಂತ್ರ್ಯಗಳಿಕೆಗೋಸ್ಕರ ಎಂತಹ ಪರಿಶ್ರಮಗಳನ್ನು ಇಂದು ಸಹ ಮಾಡುತ್ತಿದ್ದಾರೆ ಎಂದು ನಿಮಗೆ ತಿಳಿಯಬಹುದು.

ಹದಿನೇಳನೆಯ ಶತಮಾನದಲ್ಲಿ ಮಹಿಳೆಯರ ಮೇಲೆ ಮಾಟಗಾತಿಯರೆಂದು ಆರೋಪ ಹೊರಿಸಿ ಮರಣದಂಡನೆಗಳನ್ನು ಎಷ್ಟು ಹೆಚ್ಚು ಹೆಚ್ಚಾಗಿ ನೀಡಲಾಯಿತೆಂದರೆ, ಕೆಲವು ಗ್ರಂಥಗಳ ಪ್ರಕಾರ ಒಂದುನೂರು ವರ್ಷಗಳ ಕಾಲಾವಧಿಯಲ್ಲಿ ಒಂದು ಲಕ್ಷ ಮಹಿಳೆಯರನ್ನು, ಅವರು ಅನ್ಯರ ಮೇಲೆ ಮಾಟಮಾಡಿದರೆಂಬ ಆರೋಪ ಹೊರಿಸಿ ಜೀವಂತವಾಗಿ ಸುಡಲಾಯಿತು. ಹದಿನಾರನೆಯ ಶತಮಾನದಲ್ಲಿ ಪ್ರಸವ ನಡೆಸುತ್ತಿದ್ದ ದಾಯಿ ಹೆಂಗಸರಿಂದ, "ಮಗು ಹುಟ್ಟುವಾಗ ಅವರ ಮೇಲೆ ಮಾಟಗಾರಿಕೆ ನಡೆಸುವುದಿಲ್ಲ" ಎಂದು ಪ್ರಮಾಣ ಮಾಡಿಸಲಾಗುತ್ತಿತ್ತು. ಮಹಿಳೆಯರ ಮೇಲೆ ನಡೆಸಲಾದ ಈ ದೌರ್ಜನ್ಯಗಳನ್ನು ಲೋಕದ ಇತರ ಜನಾಂಗಗಳಲ್ಲಿ ನಡೆಸಲಾದ ದೌರ್ಜನ್ಯಗಳೊಂದಿಗೆ ಸಮತೋಲನ ಮಾಡಿ ನೋಡುವುದಾದರೆ, ಬೇರೆ ಜನಾಂಗಗಳ ವಿಷಯ ಬಿಡಿರಿ, ಇಸ್ಲಾಮ್ ಬಗ್ಗೆ ಕಳೆದ ಹದಿನಾಲ್ಕು ನೂರು ವರ್ಷಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಅದು ನಡೆಸಿತೆನ್ನಲಾದ ಎಲ್ಲ ದೌರ್ಜನ್ಯಗಳನ್ನು ಒಟ್ಟಿಗೆ ಸೇರಿಸಿ ನೋಡುವುದಾದರೂ ಕಳೆದ ಹದಿನಾಲ್ಕು ನೂರು ವರ್ಷಗಳ ಕಾಲಾವಧಿಯಲ್ಲಿ ಇಸ್ಲಾಮೀ ತತ್ವೋಪದೇಶಗಳಿಗೆ ವಿರುದ್ಧವಾಗಿ ವರ್ತಿಸಿ ಮಹಿಳೆಯರ ವಿರುದ್ಧ ಮಾಡಲಾದ ಆ ದೌರ್ಜನ್ಯಗಳನ್ನು ಪರಿಶೀಲಿಸುವಾಗ ಕ್ರಿಸ್ತೀಯ ಸಮಾಜ ಒಂದುನೂರು ವರ್ಷಗಳ ಕಾಲಾವಧಿಯಲ್ಲಿ ಮಹಿಳೆಯರ ಮೇಲೆ ನಡೆಸಿದ ದೌರ್ಜನ್ಯಗಳು ಮುಸ್ಲಿಮರು ನಡೆಸಿದ ದೌರ್ಜನ್ಯಗಳಿಗಿಂತ ನೂರಾರು ಪಟ್ಟು ಹೆಚ್ಚು ಎಂದು ಕಾಣಬಹುದು.

ಒಂದು ಲಕ್ಷ ಅಥವಾ ಹೆಚ್ಚು ಕಡಿಮೆ ಅಷ್ಟು ಮಹಿಳೆಯರನ್ನು ಸುಟ್ಟು ಕೊಂದ ಸಂಖ್ಯೆ ವಾಸ್ತವಿಕವಾಗಿ ಕೊಲ್ಲಲ್ಪಟ್ಟವರೆಲ್ಲರನ್ನು ಬಹಿರಂಗಪಡಿಸುವುದಿಲ್ಲ. ಹೀಗೆ ಮಹಿಳೆಯರನ್ನು ಮಾಟಗಾತಿಯರೆಂದು ವಿಧಿಸುವ ಮೊದಲು ಒಂದು ಪರೀಕ್ಷೆ ನಡೆಸಲಾಗುತ್ತಿತ್ತು. ಆ ಪರೀಕ್ಷೆ ನಡೆಸುವಾಗ ಮೃತರಾದ ಮಹಿಳೆಯರ ಸಂಖ್ಯೆ ಎಷ್ಟೆಂದು ದಾಖಲಾಗಿಲ್ಲ. ಮಹಿಳೆಯು ಮಾಟಗಾತಿ ಅಥವಾ ಮಾಟಗಾತಿ ಅಲ್ಲ ಎಂಬುದನ್ನು ನಿರ್ಧರಿಸುವ ಪರೀಕ್ಷೆ ನಡೆಸಲಾಗುವಾಗ ಕೈಗಳನ್ನೂ ಕಾಲುಗಳನ್ನೂ ಕಟ್ಟಿಹಾಕಿ ಮಹಿಳೆಯನ್ನು ಕೆರೆಗೆ ಎಸೆಯಲಾಗುತ್ತಿತ್ತು. ಆಕೆ ನೀರಿನಲ್ಲಿ ಮುಳುಗಿ ಸತ್ತರೆ ಆಕೆಯ ಬಗ್ಗೆ ಹೀಗೆ ಹೇಳುತ್ತಿದ್ದರು: ಆಕೆ ನಿರಪರಾಧಿಯಾಗಿದ್ದಾಳೆ. ಆದುದರಿಂದ ಅವಳು ನೀರಿನಲ್ಲಿ ಮುಳುಗಿ ಸತ್ತು ಹೋಗಿ ಮನುಷ್ಯನ ಕೈಯಿಂದ ಶಿಕ್ಷೆ ಅನುಭವಿಸುವುದರಿಂದ ರಕ್ಷಣೆ ಪಡೆದಳು." ನೀರಿಗೆ ಹಾಕಲಾದ ಮಹಿಳೆ ಸಾಯದಿದ್ದರೆ ಅವಳ ಬಗ್ಗೆ, ಅವಳು ಮಾಟಗಾತಿಯಾದ ಕಾರಣ ಸಾಯಲಿಲ್ಲ ಎಂದು ಹೇಳಿ ಆಕೆಯನ್ನು ಸುಟ್ಟು ಕೊಲ್ಲುತ್ತಿದ್ದರು. ಕೈಕಾಲುಗಳನ್ನು ಕಟ್ಟಿ ಮಹಿಳೆಯನ್ನು ತೂಗುಹಾಕಿ ಕೆಳಗೆ ಬೆಂಕಿ ಹೊತ್ತಿಸುತ್ತಿದ್ದರು. ಅತ್ಯಂತ ದಾರುಣ ಹಿಂಸೆಯನ್ನನುಭವಿಸಿ ಮಹಿಳೆ ಸಾಯುತ್ತಿದ್ದಳು.

ಮಹಿಳೆಗೆ ಸಂಪತ್ತನ್ನು ಹೊಂದುವ ಹಕ್ಕು ಇರಲಿಲ್ಲ. ಹದಿನಾರನೆಯ ಶತಮಾನದಲ್ಲಿ ಪತಿ ತನ್ನ ಪತ್ನಿಯ ಮೇಲೆ ದೋಷಾರೋಪ ಮಾಡಿ ಆಕೆಯನ್ನು ಕೊಂದಂತಹ ಅನೇಕ ಘಟನೆಗಳು ವರದಿಯಾಗಿವೆ. ಇದರೊಂದಿಗೆ ಇಸ್ಲಾಮೀ ನಿಯಮವನ್ನು ಹೋಲಿಸಿ ನೋಡಿರಿ. ಹದಿನಾಲ್ಕು ನೂರು ವರ್ಷಗಳ ಹಿಂದೆ ಇಸ್ಲಾಮ್ ಇದರ ಬಗ್ಗೆ, ನೀಡಿದ ಉಪದೇಶವೇನೆಂದು ನೋಡಿರಿ. ದೋಷಾರೋಪ ಮಾಡುವ ಹಕ್ಕು ಪತಿಗೆ ಮಾತ್ರವಲ್ಲ, ಪತ್ನಿಗೂ ಇಸ್ಲಾಮ್ ನೀಡಿದೆ. ಅದರೊಂದಿಗೆ ದೋಷಾರೋಪವನ್ನು ತೀವ್ರವಾಗಿ ಖಂಡಿಸಿ ಪ್ರಮಾಣ ಮಾಡುವ ಹಕ್ಕನ್ನು ಪತಿಗೂ ನೀಡಿದೆ, ಪತ್ನಿಗೂ ನೀಡಿದೆ. ಹಾಗೆ ಮಾಡಿದರೆ ಅವರು ಶಿಕ್ಷಾರ್ಹರಾಗಲಾರರು. ಪತಿ ಮತ್ತು ಪತ್ನಿ ದೋಷ ಮುಕ್ತರಾಗುವರು.

ಯುರೋಪಿನ ಮಹಿಳೆಯರು ಕಾರ್ಖಾನೆಗಳಲ್ಲಿ ಹದಿನೆಂಟು ಗಂಟೆ ಕಾಲ ಕೆಲಸ ಮಾಡಬೇಕಾಗುತ್ತಿತ್ತು. ಅದರೊಂದಿಗೆ ಮನೆ ಕೆಲಸ ಸಹ ಮಾಡಬೇಕಾಗುತ್ತಿತ್ತು. ಇಂಗ್ಲೆಂಡಿನ ಮಹಿಳೆಯರ ಮೂರನೆಯ ಒಂದು ಭಾಗ–ಇವರಲ್ಲಿ ಹೆಣ್ಣುಮಕ್ಕಳೂ ಸೇರಿದ್ದಾರೆ – ತಮ್ಮ ಮನೆ ಕೆಲಸದೊಂದಿಗೆ, ಹೊರಗೆ ಹೋಗಿ ಸಹ ಕೆಲಸ ಮಾಡಬೇಕಾದ ಆವಶ್ಯಕತೆ ಹೊಂದಿತ್ತು. ಪತ್ನಿಯನ್ನು ಪತಿಯ ಸ್ವತ್ತಾಗಿ ಗಣಿಸಲಾಗುತ್ತಿತ್ತು. ಮಹಿಳೆಗೆ ಸಾಕ್ಷಿ ಹೇಳುವ ಅಧಿಕಾರವಿರಲಿಲ್ಲ. ಇಸ್ಲಾಮ್ ಒಬ್ಬ ಪುರುಷನಿಗೆ ಬದಲಾಗಿ ಇಬ್ಬರು ಮಹಿಳೆಯರನ್ನು ಸಾಕ್ಷಿಗಳನ್ನಾಗಿ ಮಾಡಿದ ಬಗ್ಗೆ ಯುರೋಪು ಬೊಬ್ಬೆ ಹೊಡೆಯುತ್ತಿದೆ. ಇದು ಬಹಳ ದೊಡ್ಡ ದೌರ್ಜನ್ಯವೆಂದು ಹೇಳುತ್ತದೆ. ಆದರೆ ವಾಸ್ತವಿಕ ವಿಷಯವೇನೆಂದರೆ, ಇತ್ತೀಚೆಗಿನ ತನಕ ಮಹಿಳೆಯರಿಗೆ ಸಾಕ್ಷಿ ಹೇಳುವ ಅಧಿಕಾರವೇ ಇರಲಿಲ್ಲ.

1891ರ ತನಕ ಇಂಗ್ಲೆಂಡ್, ಜರ್ಮನಿ, ನಾರ್ವೆ, ಅಮೇರಿಕ, ಸ್ಕಾಂಡಿನೇವಿಯಾ ಮೊದಲಾದ ದೇಶಗಳಲ್ಲಿ ಮಹಿಳೆಯರಿಗೆ ಪತಿಯ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು ಇರಲಿಲ್ಲ. ಮಹಿಳೆಯರಿಗೆ ಮತದಾನ ಮಾಡುವ ಹಕ್ಕು ಕೂಡ ಇರಲಿಲ್ಲ. ಹತ್ತೊಂಬತ್ತನೆಯ ಶತಮಾನದ ತನಕ ಫ್ರಾನ್ಸ್‌ನಲ್ಲಿ ಜಾರಿಯಲ್ಲಿದ್ದ ನಿಯಮವೇನೆಂದರೆ, ಪತಿ ಪತ್ನಿಗೆ ವಿವಾಹ ವಿಚ್ಛೇದನೆ ನೀಡಿದರೆ ತಾಯಿಗೆ ಮಕ್ಕಳ ಮೇಲೆ ಯಾವ ಅಧಿಕಾರವೂ ಇರಲಿಲ್ಲ. ವಿಧವೆ ಸಹ ತನ್ನ ಮಕ್ಕಳನ್ನು ತನ್ನ ಅಧೀನದಲ್ಲಿರಿಸದೆ, ಪತಿಯ ಕುಟುಂಬದವರಿಗೆ ವಹಿಸಿಕೊಡಬೇಕಾಗುತ್ತಿತ್ತು.

ಹತ್ತೊಂಬತ್ತನೆಯ ಶತಮಾನದಲ್ಲಿ ಮಹಿಳೆಯರು ಇಂಗ್ಲೆಂಡ್ ಮತ್ತು ಫ್ರಾನ್ಸ್‌ನಲ್ಲಿ ಪುರುಷರಿಂದ ವಿಚ್ಛೇದನೆಯನ್ನು ಆವಶ್ಯಪಡಲು ಸಾಧ್ಯವಿರಲಿಲ್ಲ. ಪತಿ ತನ್ನ ಪತ್ನಿಯ ಮೇಲೆ ವ್ಯಭಿಚಾರದ ಆರೋಪ ಹೊರಿಸಿದರೆ ಪತ್ನಿಗೆ ಕಠಿಣ ಶಿಕ್ಷೆ ನೀಡಲಾಗುತ್ತಿತ್ತು. ಪುರುಷ ಒಂದಕ್ಕಿಂತ ಹೆಚ್ಚು ಮದುವೆ ಮಾಡುವ ಅಧಿಕಾರ ಹೊಂದಿರಲಿಲ್ಲವಾದರೂ ಅವನು ಒಬ್ಬಳಿಗಿಂತ ಹೆಚ್ಚು ಮಹಿಳೆಯರನ್ನು ಮದುವೆಯಾಗದೆ ತನ್ನ ಮನೆಯಲ್ಲಿ ಇರಿಸಬಹುದಾಗಿತ್ತು. ಇದಕ್ಕೆ ಯಾವ ಶಿಕ್ಷೆಯೂ ಇರಲಿಲ್ಲ. ಈ ರೀತಿಯ ವರ್ತನೆ ಈಗಲೂ ಜಾರಿಯಲ್ಲಿದೆ.

ದ್ವಿತೀಯ ಜಾಗತಿಕ ಮಹಾಯುದ್ಧ ನಡೆಯುತ್ತಿರುವಾಗ ರಾಷ್ಟ್ರದ ಸೇವೆ ಮಾಡಬೇಕೆಂದು ಮಹಿಳೆಯರೊಂದಿಗೆ ಹೇಳಿ ಅವರಿಂದ ಅತ್ಯಂತ ಕಷ್ಟಕರ ಕೆಲಸಗಳನ್ನು ಮಾಡಿಸಲಾಯಿತು. ಆದರೆ ಯುದ್ಧವು ಮುಗಿತಾಯವಾದ ನಂತರ ಎಲ್ಲ ಮಹಿಳೆಯರನ್ನು ಯಾವುದೇ ಸೌಲಭ್ಯಗಳನ್ನು ನೀಡದೆ ಕೆಲಸಗಳಿಂದ ವಜಾಗೊಳಿಸಲಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯ ತನಕ ಮಹಿಳೆಯರು ಕಾರ್ಖಾನೆಗಳಲ್ಲಿ ಕೆಲಸಮಾಡಬಹುದಾಗಿತ್ತಾದರೂ ಶೈಕ್ಷಣಿಕ ಕೆಲಸ ಮಾಡುವ ಅನುಮತಿ ಅವರಿಗೆ ದೊರೆತಿರಲಿಲ್ಲ. ಆ ಕಾಲಘಟ್ಟದಲ್ಲಿ ಕೆಲವು ಮಹಿಳಾ ಲೇಖಿಕೆಯರು ಪುರುಷರ ಹೆಸರಲ್ಲಿ ಕಾದಂಬರಿಗಳನ್ನು ಬರೆದರು. ಮೇರಿಯನ್ ಇವಾನ್ಸ್ ಮತ್ತು ಜೋರ್ಜ್ ಈಲಿಯಟ್

(1819 – 1880) ಎಂಬ ಪುರುಷ ಪ್ರಸಿದ್ಧ ಹೆಸರುಗಳಲ್ಲಿ ಬರೆದುದು ಮಹಿಳೆಯರೇ ಆಗಿದ್ದರು. ಇದೇ ರೀತಿ ಬ್ರಾಂಟೆ ಸಿಸ್ಟರ್ಸ್, ಶಾರ್ಲೆಟ್ ಓರಿಯನ್ ಮತ್ತು ಎಮಿಲಿ ಎಂಬ ಪ್ರಸಿದ್ಧ ಕಾದಂಬರಿ ಲೇಖಿಕೆಯರು ಮೊದಲು ಪುರುಷನಾಮದಲ್ಲಿ ಬರೆಯುತ್ತಿದ್ದರು. ಏಕೆಂದರೆ ಆ ಕಾಲದಲ್ಲಿ ಸಾಹಿತ್ಯ ಸೇವೆ ನಡೆಸುವುದು ಮಹಿಳೆಯರಿಗೆ ನಿಷಿದ್ಧವಾಗಿತ್ತು.

ಈಗ ಚಾರಿತ್ರಿಕವಾದ ಒಂದು ಪಟ್ಟಿಯನ್ನು ನಿಮ್ಮ ಮುಂದೆ ಇರಿಸುತ್ತೇನೆ:

1. 1857ಕ್ಕೆ ಮೊದಲು ಪತಿಯಿಂದ ವಿವಾಹ ವಿಚ್ಛೇದನೆ ಆವಶ್ಯಪಡುವ ಹಕ್ಕು ಪತ್ನಿಗೆ ದೊರಕಿರಲಿಲ್ಲ.

2. 1866ರಲ್ಲಿ ಕೇಂಬ್ರಿಜ್ ಯುನಿವರ್ಸಿಟಿಯಲ್ಲಿ ಪರೀಕ್ಷೆಗಳಿಗೆ ಹಾಜರಾಗಲು ವಿದ್ಯಾರ್ಥಿನಿಯರಿಗೆ ಅನುಮತಿ ದೊರಕಿತು.

3. 1882ರಲ್ಲಿ ಭೂಸ್ವತ್ತನ್ನು ಹೊಂದುವ ಅಧಿಕಾರ ಮಹಿಳೆಯರಿಗೆ ಮೊದಲನೆಯ ಸಲ ದೊರಕಿತು.

4. 1890ರ ತನಕ ಪತ್ನಿಗೆ ಪತಿಯ ಸ್ವತ್ತಿನಲ್ಲಿ ಯಾವ ಹಕ್ಕು ಕೂಡ ಇರಲಿಲ್ಲ.

ಮೇಲೆ ಬರೆದುದು ಹತ್ತೊಂಬತ್ತನೆಯ ಶತಮಾನದ ವಿಷಯಗಳಾಗಿವೆ. ಇಪ್ಪತ್ತನೆಯ ಶತಮಾನದ ಬಗ್ಗೆ ಪರಿಶೀಲಿಸೋಣ:

1. 1920ಕ್ಕಿಂತ ಮುಂಚೆ ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ಯಾವುದೇ ಮಹಿಳೆಗೆ ಪ್ರವೇಶ ನೀಡುತ್ತಿರಲಿಲ್ಲ.

2. 1937ಕ್ಕಿಂತ ಮೊದಲು ಪತ್ನಿ ಪತಿಯಿಂದ ವಿವಾಹ ವಿಚ್ಛೇದನೆ ಪಡೆಯುವ ಹಕ್ಕನ್ನು ಹೊಂದಿರಲಿಲ್ಲ.

3. 1944ಕ್ಕಿಂತ ಮೊದಲು ಮಹಿಳೆಯರಿಗೆ ವಿವಾಹದ ನಂತರ ಶಿಕ್ಷಣಕ್ಕೆ ಸಂಬಂಧಿಸಿದ ಉದ್ಯೋಗ ಮಾಡುವುದನ್ನು ನಿಯಮ ಮೂಲಕ ತಡೆಯಲಾಗಿತ್ತು. ಎಂದರೆ ವಿವಾಹದ ನಂತರ ಮಹಿಳೆಯರು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಉದ್ಯೋಗಮಾಡಲು ಅನುಮತಿ ಇರಲಿಲ್ಲ.

4. 1948ಕ್ಕಿಂತ ಮೊದಲು ಕ್ಯಾಂಬ್ರಿಜ್ ಯುನಿವರ್ಸಿಟಿಯಿಂದ ಬಿರುದನ್ನು ಪಡೆಯಲು ಯಾವುದೇ ಮಹಿಳೆಗೆ ಸಾಧ್ಯವಿರಲಿಲ್ಲ.

5. 1953ಕ್ಕಿಂತ ಮೊದಲು ಮಹಿಳೆಯರಾದ ಅಧ್ಯಾಪಕೆಯರು ಪುರುಷ ಅಧ್ಯಾಪಕರು ಕಲಿಸುವ ವಿಷಯವನ್ನೇ ಕಲಿಸುತ್ತಿದ್ದರೂ ಪುರುಷ ಅಧ್ಯಾಪಕರು ಕಲಿಸುತ್ತಿದ್ದ ಸಮಯದಷ್ಟು ಸಮಯ ಕಲಿಸುತ್ತಿದ್ದರೂ ಅವರ ಸಂಬಳ ಪುರುಷ ಅಧ್ಯಾಪಕರ ಸಂಬಳಕ್ಕಿಂತ ಬಹಳ ಕಡಿಮೆಯಾಗಿತ್ತು.

6. 1955ರ ಮೊದಲು ಸರಕಾರಿ ಉದ್ಯೋಗವನ್ನು ಮಾಡುತ್ತಿದ್ದ ಮಹಿಳೆಯ ಸಂಬಳ ಪುರುಷ ಉದ್ಯೋಗಿಯ ಸಂಬಳಕ್ಕಿಂತ ಕಡಿಮೆಯಾಗಿತ್ತು.

7. 1967ರಲ್ಲಿ ಮ್ಯಾಟ್ರಿಮೋನಿಯಲ್ ಹೋಮ್ಸ್ ಆಕ್ಟ್ (MATRIMONIAL HOMES ACT) ಜಾರಿಗೆ ಬರುವುದಕ್ಕೆ ಮೊದಲು ಪತ್ನಿಗೆ ತನ್ನ ಪತಿಯ ಮನೆಯಲ್ಲಿ ವಾಸಿಸುವ ಹಕ್ಕು ದೊರೆತಿರಲಿಲ್ಲ.

ಇಸ್ಲಾಮ್ ಧರ್ಮವು ಹದಿನಾಲ್ಕು ನೂರು ವರ್ಷಗಳ ಹಿಂದೆ ಮಹಿಳೆಯರಿಗೆ ನೀಡಿದ ಸ್ವಾತಂತ್ರ್ಯ ಮತ್ತು ಹಕ್ಕುಗಳು 1967ರ ತನಕ ಪಾಶ್ಚಿಮಾತ್ಯ ದೇಶಗಳ ಮಹಿಳೆಯರಿಗೆ ದೊರೆಕಿರಲಿಲ್ಲ. ಕೆಲವು ಹಕ್ಕುಗಳು ಇಂದಿನ ತನಕ ಕೂಡ ಅವರಿಗೆ ದೊರಕಲಿಲ್ಲ. ಪಾಶ್ಚಿಮಾತ್ಯ ದೇಶಗಳ ಮಹಿಳೆಯರು ಬಹಳ ಹೋರಾಟ ನಡೆಸಿದರು. ಅವರು ಅನೇಕ ವಿಧ ದೌರ್ಜನ್ಯಗಳ ಮತ್ತು ಕಷ್ಟಗಳ ಕಾಲವನ್ನು ದಾಟಿ ಬಂದಿರುವರು. ಅವರ ಪ್ರಯತ್ನಗಳ ಫಲಸ್ವರೂಪವಾಗಿ ಕ್ರಮೇಣ ಅವರಿಗೆ ಹಕ್ಕುಗಳು ದೊರಕಲು ಪ್ರಾರಂಭವಾದುವು. ಅವರು ಆ ಹಕ್ಕುಗಳನ್ನು ತಮಗೋಸ್ಕರ ಕಿತ್ತುಕೊಂಡಿರುವರು. ಪತ್ನಿ ತನ್ನ ಪತಿಯ ಮನೆಯಲ್ಲಿ ವಾಸಿಸುವ ಹಕ್ಕನ್ನು ಹೊಂದಿರಲಿಲ್ಲವಾದುದರಿಂದ ಪತ್ನಿ ಪತಿಯ ಕರುಣೆಗೆ ಪಾತ್ರಳಾಗಿ ಜೀವಿಸಬೇಕಾಗಿತ್ತು. ಪತಿ ಇಚ್ಛಿಸುವಾಗ ಪತ್ನಿಯ ಕಿವಿ ಹಿಡಿದು ಮನೆಯಿಂದ ಹೊರಗೆ ಹಾಕಬಹುದಾಗಿತ್ತು. ಪತಿಯ ಮನೆಯಲ್ಲಿ ವಾಸಿಸಲು ಪತ್ನಿಗೆ ವೈಯಕ್ತಿಕವಾಗಿ ಯಾವ ಹಕ್ಕೂ ಇರಲಿಲ್ಲ.

8. 1975ಕ್ಕಿಂತ ಮೊದಲು ಮಹಿಳೆಯರು ತಮ್ಮ ಹೆಸರಿನಲ್ಲಿ ಸ್ಟೇಟ್ ಪೆನ್ಶನ್ ಪಡೆಯಲು ಸಾಧ್ಯವಿರಲಿಲ್ಲ.

9. 1976ರ ಡೊಮೆಸ್ಟಿಕ್ ವಾಯಲೆನ್ಸ್ ಆಕ್ಟ್ (Domestic Violence Act) ಜಾರಿಗೊಳ್ಳುವ ಮೊದಲು ಪತ್ನಿ ತನ್ನ ಪತಿ ತನ್ನ ಮೇಲೆ ನಡೆಸುತ್ತಿದ್ದ ದೌರ್ಜನ್ಯಗಳ ವಿರುದ್ಧ ದೂರು ನೀಡಲು ಸಾಧ್ಯವಿರಲಿಲ್ಲ. ಮನೆಯಲ್ಲಿ ಪತ್ನಿಯ ಮೇಲೆ ಪತಿ ಎಷ್ಟು ದೌರ್ಜನ್ಯ ಮಾಡಿದರೂ ಇಂಗ್ಲೆಂಡಿನಲ್ಲಿ 1976ರ ತನಕ ಮಹಿಳೆ ಪತಿಯ ವಿರುದ್ಧ ಕೋರ್ಟಿನಲ್ಲಿ ದಾವೆ ಹಾಕಲು ಸಾಧ್ಯವಿರಲಿಲ್ಲ. ಈಗಿನ ಕಾಲದಲ್ಲಿ ಸಹ ಪಾಶ್ಚಾತ್ಯ ದೇಶಗಳಲ್ಲಿ ಮಹಿಳೆ ತನ್ನ ತಂದೆ ತಾಯಂದಿರ ವಾರೀಸುದಾರರಾಗಿರುವುದಿಲ್ಲ. ಆದರೆ ಒಂಟಿ ಮಹಿಳೆಯ ಬಗ್ಗೆ ವಿನಾಯಿತಿ ಇದೆ. ಆಕೆ ವಾರೀಸು ಹಕ್ಕು ಹೊಂದುತ್ತಾಳೆ. ಒಂದಕ್ಕಿಂತ ಹೆಚ್ಚು ಮಕ್ಕಳಿದ್ದರೆ ಹಿರಿಯ ಮಗನಿಗೆ ಮಾತ್ರ ವಾರೀಸು ಹಕ್ಕು ಲಭಿಸುತ್ತದೆ. ಇದಕ್ಕೆ ವಿರುದ್ಧವಾಗಿ, ಮಹಿಳೆ ವಾರೀಸುದಾರಿಕೆಯಲ್ಲಿ ದೊರಕುವ ಒಂದು ಸಾಮಗ್ರಿಯಾಗಿ ಗಣಿಸಲ್ಪಟ್ಟ ಕಾಲದಲ್ಲಿ ಇಸ್ಲಾಮ್ ಆಕೆಯನ್ನು ವಾರೀಸುದಾರಳನ್ನಾಗಿ ಮಾಡಿತು.

## ಪಾಶ್ಚಿಮಾತ್ಯ ಚಿಂತಕರು ಮತ್ತು ಸಾಹಿತಿಗಳ ದೃಷ್ಟಿಯಲ್ಲಿ ಮಹಿಳೆಯರ ಸ್ಥಾನ

ಮಹಿಳೆಯರ ಬಗ್ಗೆ ಬೈಬಲ್ ಯಾವ ರೀತಿ ಉಪದೇಶ ನೀಡುತ್ತದೆ ಎನ್ನುವುದರ ಬಗ್ಗೆ ಕೆಲವು ಪುಸ್ತಕಗಳನ್ನು ಉಲ್ಲೇಖಿಸುತ್ತೇನೆ. ಅದು ಈ ವಿಷಯಕ್ಕೆ ಸಂಬಂಧಿಸಿ ತಿಳಿಯಲು ಆಸಕ್ತಿ ಹೊಂದಿರುವವರಿಗೆ ಜ್ಞಾನವರ್ಧಕವಾಗುವುದು. ಆಸಕ್ತಿದಾಯಕವಾದ ಒಂದು ಪುಸ್ತಕದ ಹೆಸರು ಬೆನ್‌ಹೆಮ್ಸ್ ಬುಕ್ ಆಫ್ ಕೊಟೇಶನ್ಸ್ (Benham's Book of Quotations). ಇದರಲ್ಲಿ ಬೈಬಲಿನ ಉಲ್ಲೇಖಗಳೂ ಬೇರೆ ಗ್ರಂಥಗಳ ಉಲ್ಲೇಖಗಳೂ ಇವೆ. ಇನ್ನೊಂದು ಪುಸ್ತಕದ ಹೆಸರು ಗ್ರೇಟ್ ಕೊಟೇಶನ್ಸ್ (Great Quotations). ಇವೆರಡಲ್ಲದೆ ಬೇರೆ ವಿವಿಧ ಪುಸ್ತಕಗಳಿವೆ. ಅವುಗಳಿಂದ ಕೆಲವು ಉಲ್ಲೇಖಗಳನ್ನು ನಿಮಗೋಸ್ಕರ ನಾನು ಆಯ್ಕೆ ಮಾಡಿದ್ದೇನೆ. ಮಹಿಳೆಯ ಬಗ್ಗೆ ಯುರೋಪಿನ ಕಲ್ಪನೆ ಹೇಗಿತ್ತು? ಅವರ ದಾರ್ಶನಿಕರಿಂದಲೂ ಅದರ ಸಾಹಿತ್ಯಗಳಿಂದಲೂ ತಿಳಿಯಿರಿ.

ಮೊದಲನೆಯ ಉಲ್ಲೇಖ ಹೀಗಿದೆ:

"ಲೋಕದಲ್ಲಿ ಎಲ್ಲ ಜಗಳಗಳ ಅಸ್ತಿಭಾರ ಸ್ತ್ರೀಯಾಗಿದ್ದಾಳೆ. ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಲು ಸ್ತ್ರೀಗೆ ಅನುಮತಿಸಬೇಡಿರಿ." (ಈ ಮಾತು ಅಹ್ಮದಿಯರ ಬಗ್ಗೆ ಮೌಲವಿ ಮನ್‌ಝೂರ್ ಚಿನಿಯೂಟಿ ಹೇಳುವ ಮಾತಿನ ಹಾಗಿದೆ. ಲೋಕದಲ್ಲಿ ಎಲ್ಲ ಜಗಳಗಳ ಜವಾಬ್ದಾರಿ ಅಹ್ಮದಿಯರ ಮೇಲಿದೆ. ಸಮುದ್ರದ

ಎರಡು ಮೀನುಗಳು ಜಗಳವಾಡಿದರೂ ಅದು ಅಹ್ಮದಿಯರ ಉಪಟಳದಿಂದಾಗಿದೆ ಎಂದು ಆತನು ಹೇಳುತ್ತಾನೆ.) ನಾನು ಪ್ರಸ್ತಾಪಿಸಿದ ಉಲ್ಲೇಖದ ಪ್ರಕಾರ, ಕೆಲವು ಚಿಂತಕರ ಅಭಿಪ್ರಾಯ ಪ್ರಕಾರ ಲೋಕದ ಪ್ರತಿಯೊಂದು ಜಗಳಕ್ಕೆ ಹೊಣೆ ಸ್ತ್ರೀಯಾಗಿದ್ದಾಳೆ.

ಇದರ ಬಗ್ಗೆ ಬೈಬಲಿನ ಒಂದು ಉಲ್ಲೇಖ ಹೀಗಿದೆ: "ಹೆಣ್ಣು, ನಾಯಿ ಮತ್ತು ವಾಲ್‌ನಟ್ (ಅಕ್ರೋಡು) ಮರ ಇವು ಮೂರು ಹೇಗಿವೆ ಎಂದರೆ ಅವುಗಳನ್ನು ಹೆಚ್ಚು ಹೊಡೆದರೆ ಹೆಚ್ಚು ಪ್ರಯೋಜನಕರವಾಗುವುದು.

ಇನ್ನೊಂದು ಉಲ್ಲೇಖ ಹೀಗಿದೆ:

"ಸ್ತ್ರೀ. ಮೂರು ಸಲ ಮಾತ್ರ ಮನೆಯಿಂದ ಹೊರಗೆ ಹೋಗಬಹುದು. ಒಂದು, ಚರ್ಚ್‌ನಲ್ಲಿ ಹೆಸರಿಡುವಾಗ. ಎರಡು, ವಿವಾಹವಾಗುವಾಗ. ಮೂರು, ಮೃತಳಾದ ನಂತರ.

ಒಂದು ನಾಣ್ನುಡಿ ಹೀಗಿದೆ: "ಸ್ತ್ರೀಯೇ ನಿಜವಾದ ನರಕ." ಇನ್ನೊಂದು: "ಲೋಕದ ಪ್ರತಿಯೊಂದು ಕೆಡುಕು ಸ್ತ್ರೀಯ ಕೆಡುಕಿಗಿಂತ ಕಡಿಮೆಯಾಗಿರುತ್ತದೆ." ಮತ್ತೊಂದು: "ಸ್ತ್ರೀಯು ನಂಬಿಕೆಗೆ ಎಷ್ಟು ಅನರ್ಹಳೆಂದರೆ ಅವಳು ಆಣೆ ಹಾಕುವುದನ್ನು ನೀರಿನ ಮೇಲೆ ಬರೆಯಬೇಕು."

ಯುರೋಪಿನ ದೌರ್ಜನ್ಯ ಪೀಡಿತ ಮಹಿಳೆಯರ ಪ್ರತಿಭಟನೆ ಕ್ರೈಸ್ತ ಧರ್ಮದ ಉಪದೇಶಗಳ ವಿರುದ್ಧವಾಗಿತ್ತು. ಅಥವಾ ಅದು ಕ್ರೈಸ್ತಧರ್ಮದ ಬಿಗಡಾಯಿಸಿದ ಉಪದೇಶಗಳ ವಿರುದ್ಧವಾಗಿತ್ತೆಂದು ಹೇಳುವುದು ಸರಿಯಾದುದಾಗಿದೆ. ಏಕೆಂದರೆ ಈ ಉಪದೇಶಗಳು ಹಝ್ರತ್ ಈಸಾ ಮಸೀಹರು (ಯೇಸುಕ್ರಿಸ್ತರು) ನೀಡಿದ ಉಪದೇಶಗಳೊಂದಿಗೆ ದೂರದ ಸಂಬಂಧ ಕೂಡ ಹೊಂದಿರಲಿಲ್ಲ. ಅದೇ ರೀತಿ ಪಾಶ್ಚಿಮಾತ್ಯ ಮಹಿಳೆಯರ ಪ್ರತಿಭಟನೆ ಯುರೋಪಿನ ಚಾರಿತ್ರಿಕ ಸಂಪ್ರದಾಯಗಳಿಗೆ ವಿರುದ್ಧವಾಗಿತ್ತು. ಆ ಸಂಪ್ರದಾಯ ಪ್ರಕಾರ ಪುರುಷರಿಗೆ ಸ್ತ್ರೀಯರ ಮೇಲೆ ನಿರಂಕುಶಾಧಿಕಾರವಿತ್ತು. ಅಂತಹ ದೌರ್ಜನ್ಯಗಳ ವಿರುದ್ಧ ಪ್ರತಿಭಟನೆ ಸರಿಯಾದುದಾಗಿಯೇ ಇತ್ತು. ಆದರೆ ಮಹಿಳೆಯರ ವಿರುದ್ಧ ದೌರ್ಜನ್ಯವನ್ನು ಉತ್ತೇಜಿಸುವುದು ಇಸ್ಲಾಮ್ ಎಂದು ಹೇಳುವುದು ಬಹಳ ದೊಡ್ಡ ಅನ್ಯಾಯವಾಗಿದೆ.

ಸ್ಪೈನ್ ದೇಶದಲ್ಲಿ ಇಸ್ಲಾಮೀ ಸರಕಾರ ಸ್ಥಾಪಿತವಾಗಿತ್ತು. ಆ ಕಾಲಘಟ್ಟದಲ್ಲಿ ಮಹಿಳೆಯರಿಗೆ ದೊರಕಿದ್ದ ಹಕ್ಕುಗಳ ಬಗ್ಗೆ ಸ್ಟಾನ್ಲೀ ಲೇನ್‌ಪೂಲ್ ಎಂಬ ನ್ಯಾಯನಿಷ್ಠ ಚರಿತ್ರೆಗಾರ ಹೀಗೆ ಬರೆಯುತ್ತಾರೆ: "ಮಹಿಳೆಯರಿಗೆ ವಿದ್ಯಾಭ್ಯಾಸ ಮಾಡಲು ಎಲ್ಲ ಸೌಕರ್ಯಗಳು ಇದ್ದುವು. ಅವರನ್ನು ವಿದ್ಯಾಭ್ಯಾಸ ಪಡೆಯಲು ಪ್ರೋತ್ಸಾಹಿಸಲಾಗುತ್ತಿತ್ತು. ಆ ಕಾಲದಲ್ಲಿ ಖುರ್ತುಬದಲ್ಲಿ ಮುಸ್ಲಿಮ್ ಲೇಡಿ ಡಾಕ್ಟರ್‌ಗಳು ಸಹ ಕಾರ್ಯನಿರತರಾಗಿದ್ದರು."

ಈಗ ಯರೋಪಿನಲ್ಲಿ ಧಾರಾಳ ಲೇಡಿ ಡಾಕ್ಟರ್‌ಗಳು ಇದ್ದಾರೆ. ಆದರೆ ಇತ್ತೀಚೆಗಿನ ತನಕ ಮಹಿಳೆಯರಿಗೆ ವಿದ್ಯಾಭ್ಯಾಸ ಪಡೆಯಲು ಕೂಡ ಅನುಮತಿ ಇಲ್ಲದಿದ್ದಾಗ ಅವರು ಆಗ ಲೇಡಿ ಡಾಕ್ಟರ್‌ಗಳಾಗಲು ಹೇಗೆತಾನೆ ಸಾಧ್ಯವಿತ್ತು? ಆದರೆ ಯುರೋಪಿನ ಚರಿತ್ರೆಯಲ್ಲಿ ಮಂತ್ರವಾದಿನಿಯರಾದ ವೈದ್ಯೆಯರ ಬಗ್ಗೆ ಪ್ರಸ್ತಾಪಗಳಿಂದ ತುಂಬಿದೆ. ಇಂತಹ ವೈದ್ಯೆಯರನ್ನು ಮಾಟಗಾರ್ತಿಯರೆಂದೂ ಭೂತವೈದ್ಯೆಯರೆಂದು ಕರೆಯಲಾಗುತ್ತಿತ್ತು.

ಇದಕ್ಕೆ ವಿರುದ್ಧವಾಗಿ, ಇಸ್ಲಾಮ್ ಮಹಿಳೆಯರನ್ನು ಶ್ರೇಷ್ಠ ಅಧ್ಯಾಪಿಕೆಯ ರೂಪದಲ್ಲಿ ಪ್ರಸ್ತಾಪಿಸಿದೆ. ಕೇವಲ ಮನೆಯ ಅಧ್ಯಾಪಿಕೆ ಮಾತ್ರವಲ್ಲ, ಹೊರಗಿನವರ ಅಧ್ಯಾಪಿಕೆಯಾಗಿಯೂ ವಿವರಿಸಿದೆ. ಒಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿರುವರು:

"ನೀವು ಧರ್ಮದ ಅರ್ಧಭಾಗವನ್ನು ಆಯಿಶಾರಿಂದ ಕಲಿಯಿರಿ." ಹಝ್ರತ್ ಆಯಿಶಾ ಸಿದ್ದೀಖ(ರ) ಅವರಿಂದ ವರದಿಯಾದ ಹದೀಸುಗಳು ಇಸ್ಲಾಮ್ ಧರ್ಮದ ಬಗ್ಗೆ ಅಂದಾಜು ಅರ್ಧಾಂಶದಷ್ಟು ಜ್ಞಾನ ನೀಡುವಷ್ಟಿವೆ. ಅವರು ಅನೇಕ ಸಾರಿ ಧಾರ್ಮಿಕ ಜ್ಞಾನದ ಕುರಿತು ಸಭೆಗಳನ್ನು ಸಂಬೋಧಿಸಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶಿಷ್ಯರು ಅವರ ಮನೆಬಾಗಿಲಿಗೆ ಬಂದು ಧಾರ್ಮಿಕ ಸಮಸ್ಯೆಗಳ ಬಗ್ಗೆ ಅವರಿಂದ ವಿಚಾರಿಸಿ ತಿಳಿಯುತ್ತಿದ್ದರು. ಅವರು ಪರದೆಯೊಳಗಿನಿಂದ ಎಲ್ಲ ಪ್ರಶ್ನೆಗಳಿಗೂ ಸಮಾಧಾನಕರವಾದ ಉತ್ತರ ನೀಡುತ್ತಿದ್ದರು.

## ಮಾರ್ಕ್ಸಿಸಂ ಪ್ರಕಾರ ಮಹಿಳೆಯರ ಸ್ಥಾನ

ಸೈಂಟಿಫಿಕ್ ಸೋಶಿಯಲಿಸಂ ಅಥವಾ ಮಾರ್ಕ್ಸಿಸಂ ಬಗ್ಗೆ ಏಂಜೆಲ್ಸ್ ಹೇಳಿದುದನ್ನು ಲೆನಿನ್ ಸಂಪೂರ್ಣವಾಗಿ ಅನುಮೋದಿಸಿದನು. ಏಂಜೆಲ್ಸ್ ಹೇಳಿದುದು ಹೀಗೆ: ಹೆಣ್ಣು ಮತ್ತು ಗಂಡುಗಳನ್ನು ವೈವಾಹಿಕ ಬಂಧನಕ್ಕೆ ಒಳಪಡಿಸುವುದು ಬಹಳ ಭಯಾನಕ ಕೃತ್ಯವಾಗಿದೆ. ಹೆಂಗಸರನ್ನು ಮತ್ತು ಗಂಡಸರನ್ನು ಪತಿ ಮತ್ತು ಪತ್ನಿಯರನ್ನಾಗಿ ಜೋಡಿಸುವುದರಿಂದ ಸಮಾಜದಲ್ಲಿ ಅನೇಕ ರೀತಿಯ ಕೆಡುಕುಗಳು ತಲೆದೋರುತ್ತವೆ. ವಿವಾಹ ಸಂಬಂಧದ ಕಾರಣ ಪತಿ ಪತ್ನಿಯ ಮೇಲೆ ದೌರ್ಜನ್ಯ ಮಾಡಲು ತೊಡಗುತ್ತಾನೆ ಅಥವಾ ಪತ್ನಿ ಪತಿಯ ಮೇಲೆ ದೌರ್ಜನ್ಯ ಮಾಡಲು ಪ್ರಾರಂಭಿಸುತ್ತಾಳೆ. ಈ ದೌರ್ಜನ್ಯಗಳಿಂದ ಗಂಡಸರನ್ನೂ ಹೆಂಗಸರನ್ನೂ ರಕ್ಷಿಸಲು ಇರುವ ಏಕ ಮಾರ್ಗ ವೈವಾಹಿಕ ಸಂಬಂಧಗಳನ್ನು ಸಂಪೂರ್ಣವಾಗಿ ಕೊನೆಗೊಳಿಸುವುದಾಗಿದೆ."

ಏಂಜೆಲ್ಸ್ ಸ್ಪಷ್ಟವಾಗಿ ಹೇಳಿಲ್ಲವಾದರೂ ಇದರ ಪರಿಣಾಮವಾಗಿ ಮಹಿಳೆಯರು ಸಮಾಜದ ಸಾರ್ವತ್ರಿಕ ಸ್ವತ್ತು ಆಗುತ್ತಾರೆ. ವಿವಾಹ ಸಂಬಂಧಗಳನ್ನು ಸಂಪೂರ್ಣವಾಗಿ ಕೊನೆಗೊಳಿಸುವಾಗ ಉಂಟಾಗುವ ಸಮಸ್ಯೆಗಳಿಗೆ ಏಂಜೆಲ್ಸ್ ನೀಡುವ ಒಂದು ಪರಿಹಾರ ಹೀಗಿದೆ: ಮಹಿಳೆ ಮಕ್ಕಳನ್ನು ಹೆರುವ ಯಂತ್ರದ ಹಾಗೆ ಮಾತ್ರ ಬಳಸಲ್ಪಡುವಳು. ಅವಳನ್ನು ಕಾರ್ಖಾನೆಗಳಲ್ಲಿ ಕೆಲಸಮಾಡಿಸಲಿಕ್ಕಿರುವುದರಿಂದ ಮತ್ತು ಇತರ ಕೆಲಸಗಳನ್ನು ಮಾಡಿಸಲಿಕ್ಕಿರುವುದರಿಂದ ಮಕ್ಕಳನ್ನು ಸಾಕುವ ಕೆಲಸದ ಭಾರ ಅವಳ ಮೇಲೆ ಹೊರಿಸುವುದು ತಪ್ಪಾಗುವುದು. ಆದುದರಿಂದ ಮಗು ಹುಟ್ಟಿದ ಕೂಡಲೆ ಮಗುವನ್ನು ತಾಯಿಯಿಂದ ಕಿತ್ತುಕೊಳ್ಳಬೇಕು ಮತ್ತು ಮಗುವನ್ನು ಪಾಲನೆ ಪೋಷಣೆ ಮಾಡಲು ರಾಜ್ಯಾಡಳಿತೆಗೆ ವಹಿಸಿಕೊಡಬೇಕು.

ಮಹಿಳೆಯ ಬಗ್ಗೆ ಪ್ರಸ್ತಾಪಿಸಲಾದ ಅತ್ಯಂತ ಆಧುನಿಕ ದರ್ಶನಶಾಸ್ತ್ರ ಮೇಲೆ ವಿವರಿಸಿದುದಾಗಿದೆ. ಆದರೆ ಈ ದರ್ಶನ ಶಾಸ್ತ್ರ ಪ್ರಕಾರ ವರ್ತಿಸಲು ಅವರಿಗೆ ಇಷ್ಟರವರೆಗೆ ಸಾಧ್ಯವಾಗಿಲ್ಲ (ಅಲ್ಲಾಹನಿಗೆ ಆ ಬಗ್ಗೆ ಸ್ತುತಿ ಅರ್ಪಿಸುತ್ತೇವೆ.) ಆದರೆ ಮಾರ್ಕ್ಸಿಸಂ ಲೋಕದಾದ್ಯಂತ ಹರಡಿತೆಂದು ಇಟ್ಟು ಕೊಂಡರೆ ಆಗ ಮಗುವಿನ ತಾಯಿ ಯಾರು, ತಂದೆ ಯಾರು ಎಂಬ ಪ್ರಶ್ನೆ ಉದಿಸಲಾರದು. ಮಕ್ಕಳು ರಾಜ್ಯಾಡಳಿತೆಗೆ ಸೇರಿದವರಾಗುವರು. ಅವರು ಯಾವ ತಂದೆ ಅಥವಾ ತಾಯಿಯ ಮಕ್ಕಳೆಂದು ಗಣಿಸಲ್ಪಡಲಾರರು. ಮಹಿಳೆಯ ಕೆಲಸ ಮಕ್ಕಳನ್ನು

ಹೆರುವುದಾಗಿರುವುದು. ಪುರುಷನು ತಾನು ಬಯಸುವ ಮಹಿಳೆಯನ್ನು ಮಕ್ಕಳ ಉತ್ಪಾದನೆಗೋಸ್ಕರ ಬಳಸುತ್ತಾ ತಿರುಗಾಡುವನು. ಗರ್ಭಾವಸ್ಥೆಯಲ್ಲಿ ರಾಜ್ಯಾಡಳಿತೆಯು ಗರ್ಭಿಣಿಯ ಖರ್ಚುವೆಚ್ಚಗಳನ್ನು ವಹಿಸುವುದು. ತಾನು ಪ್ರಸವಿಸಿದ ಮಗು ಹೇಗಿದೆ? ಎಲ್ಲಿದೆ? ಎಂದು ಆಕೆಗೆ ತಿಳಿಯಲಾರದು.

ಮಹಿಳೆಯ ಬಗ್ಗೆ ಇಂತಹ ಕಠೋರ ಉಪದೇಶ ಪ್ರಗತಿಪರವೆಂದು ಗಣಿಸಲಾದ ಇಪ್ಪತ್ತನೆಯ ಶತಮಾನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಲೆನಿನ್ ಕ್ಷಮೆಯಾಚಿಸುವ ರೂಪದಲ್ಲಿ ಹೀಗೆ ಬರೆದರು: "ಎಂಜೆಲ್ಸ್ ನೀಡಿದ ಉಪದೇಶಗಳನ್ನು ಪೂರ್ಣವಾಗಿ ಅನುಷ್ಠಾನಕ್ಕೆ ತರಲು ಸಾಧ್ಯವಾಗಲಿಲ್ಲವಾದರೂ ನಮ್ಮ ಅಂತಿಮ ಗುರಿ ಇದೇ ಆಗಿದೆ. ಮಾರ್ಕ್ಸಿಸಂ ಪೂರ್ಣ ವೈಭವದೊಂದಿಗೆ ಮತ್ತು ಪೂರ್ಣಶಕ್ತಿಯೊಂದಿಗೆ ವಿಶ್ವದಲ್ಲಿ ಸ್ಥಾಪಿಸಲ್ಪಟ್ಟರೆ ಎಲ್ಲ ಕುಟುಂಬ ವ್ಯವಸ್ಥೆಗಳು ಅಳಿಸಲ್ಪಡುವುವು. ತಾಯಿ ಮಗನ ಸಂಬಂಧವು ಕೊನೆಗೊಳಿಸಲ್ಪಡುವುದು. ಸಹೋದರ, ಸಹೋದರಿ ಎಂಬ ಸಂಬಂಧವೂ ಅಳಿಸಿಹೋಗುವುದು. ಯಾವ ಮಹಿಳೆ ಯಾವ ಪುರುಷನ ಮಗುವನ್ನು ಹುಟ್ಟಿಸುತ್ತಿದ್ದಾಳೆ ಎಂದು ಕೂಡ ತಿಳಿಯಲು ಸಾಧ್ಯವಾಗದು.

## ಯಹೂದಿ ಧರ್ಮದಲ್ಲಿ ಮಹಿಳೆಯ ಸ್ಥಾನ

ಯಹೂದಿ ಧರ್ಮದಲ್ಲಿ, ಮಹಿಳೆ ಆದಿಕಾಲದಿಂದಲೇ ಪಾಪಿಯಾಗಿದ್ದಾಳೆ ಎಂದು ಉಪದೇಶಿಸಲಾಗುತ್ತದೆ. ಆದಮ್ ಪಾಪ ಮಾಡಲು ಕಾರಣ ಬೈಬಲಿನ ಆದಿಕಾಂಡದ ಪ್ರಕಾರ ಹವ್ವಾ ಆಗಿದ್ದಾಳೆ. ವಂಶಪಾರಂಪರ್ಯವಾಗಿ ಮನುಷ್ಯವಂಶದಲ್ಲಿ ಪಾಪವನ್ನು ಜಾರಿಗೊಳಿಸಲು ಕಾರಣಕರ್ತೆ ಮಹಿಳೆಯಾಗಿದ್ದಳು. ಆಕೆಗೆ ನೀಡಿದ ಶಿಕ್ಷೆ ಹೀಗೆ:

"ನೀನು ಕಷ್ಟದಿಂದಲೇ ಮಕ್ಕಳನ್ನು ಹೆರುವಿ; ಗಂಡನ ಮೇಲೆ ನಿನಗೆ ಆಶೆ ಇರುವುದು. ಅವನು ನಿನಗೆ ಒಡೆಯನಾಗುವನು."

(ಆದಿಕಾಂಡ 3:16)

ಈ ಉಪದೇಶವನ್ನು ಇಸ್ಲಾಮಿನ ಪರಿಶುದ್ಧ ಮತ್ತು ಆಶ್ಚರ್ಯಕರವಾದ ಉಪದೇಶದೊಂದಿಗೆ ಹೋಲಿಸಿನೋಡಿರಿ. ಇಂದಿನ ಕಾಲದಲ್ಲಿ ಸಹ ಇಸ್ಲಾಮ್ ಧರ್ಮದ ಉಪದೇಶಗಳು ಅತ್ಯಂತ ಆಧುನಿಕವಾಗಿ ಕಾಣಿಸುತ್ತವೆ.

ಬೈಬಲ್ ಹೇಳಿದ ಪ್ರಕಾರ ಈಗ ಸಹ ಮಹಿಳೆ ನೋವಿನೊಂದಿಗೆ ಹೆರುತ್ತಾ ಇದ್ದಾಳೆ. ಕ್ರೈಸ್ತಧರ್ಮದ ಪ್ರಕಾರ ಆಕೆಯು ಪಾಪವಿಮೋಚಿತೆಯಾಗಿದ್ದರೂ ಆಕೆಯ ಸ್ಥಿತಿಯಲ್ಲಿ ಯಾವುದೇ ವ್ಯತ್ಯಾಸ ಉಂಟಾಗಲಿಲ್ಲ. ಬೈಬಲ್ ಹೇಳಿದ, "ಗಂಡನ ಮೇಲೆ ನಿನಗೆ ಆಶೆ ಇರುವುದು" ಎಂಬ ಈ ಭವಿಷ್ಯವಾಣಿ ಬಹುತೇಕ ಸುಳ್ಳೆಂದು ಸಾಬೀತಾಗಿದೆ. ಇಂದಿನ ಕಾಲದಲ್ಲಿ ಪಾಶ್ಚಿಮಾತ್ಯ ಸಮಾಜದ ಆವಶ್ಯಕತೆಗಳನ್ನು ಈಡೇರಿಸುವ ಮಹಿಳೆ ಕೇವಲ ಒಬ್ಬನಿಂದ (ಎಂದರೆ ಪತಿಯಿಂದ) ತೃಪ್ತಳಾಗುವುದಿಲ್ಲ. ಭವಿಷ್ಯವಾಣಿಯ ಎರಡನೆಯ ಭಾಗ, "ಅವನು ನಿನಗೆ ಒಡೆಯನಾಗುವನು" ಎಂಬುದು ಸಹ ಸರಿಯೆಂದು ಸಾಬೀತಾಗುವುದಿಲ್ಲ. ಈಗ ಬಹುತೇಕ ಮಹಿಳೆಯರು ಪುರುಷರ ಮೇಲೆ ಅಧಿಕಾರ ಚಲಾಯಿಸುತ್ತಾರೆ.

## ಯುರೋಪಿನಲ್ಲಿ ಮಹಿಳೆಯ ಸ್ಥಿತಿ

ಯುರೋಪಿನ ಕೆಲವು ದೇಶಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿ ಜಾರಿಗೊಳಿಸಲಾದ ನಿಯಮಗಳ ಬಗ್ಗೆ ನಾನು ನಿಮ್ಮ ಗಮನ ಹರಿಸಲು ಬಯಸುತ್ತೇನೆ. ನಾನು ಇದರ ಮೊದಲು ವಿವರಿಸಿದ ಹಾಗೆ ಮಹಿಳೆಯರು ತಮ್ಮ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ಪ್ರತಿಭಟಿಸಲು ಹೋರಾಟ ನಡೆಸಿದರು. ಒಂದು ಗುಂಪು ಇನ್ನೊಂದು ಗುಂಪಿನ ವಿರುದ್ಧ ಹೋರಾಟ ನಡೆಸುವಾಗ ಏನು ಸಂಭವಿಸುತ್ತದೆ ಎಂದರೆ ಎರಡು ಗುಂಪುಗಳಿಗೂ ಲಾಭಕರವಾದ ಹಂತದಲ್ಲಿ ಹೋರಾಟವನ್ನು ನಿಲ್ಲಿಸುವುದು ಮತ್ತು ಎರಡು ಗುಂಪುಗಳ ಮಧ್ಯೆ ನ್ಯಾಯಬದ್ಧವಾದ ಸಂಧಾನ ನಡೆಯುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಇಂತಹ ಹೋರಾಟಗಳು ತಮ್ಮ ಉದ್ದೇಶಿತ ಲಕ್ಷ್ಯದಿಂದ ಎಷ್ಟೋ ಹೆಜ್ಜೆ ಮುಂದೆಸಾಗಿರುತ್ತದೆ. ಹಳೆಗಾಲದ ಗಡಿಯಾರದ ಪೆಂಡ್ಯುಲಮ್ ಹಾಗೆ ಅದು ತನ್ನ ಆವರ್ತನೆಯ ಕೊನೆಯ ಬಿಂದುವನ್ನು ತಲಪುತ್ತದೆ. ಆದುದರಿಂದ ಮಹಿಳೆಯರ ಹೋರಾಟ ಅವರು ಉದ್ದೇಶಿಸಿದುದಕ್ಕಿಂತ ಹೆಚ್ಚು ಗಳಿಸಿತು. ಆದರೆ ಇದರ ಫಲಸ್ವರೂಪವಾಗಿ ಸಂತೋಷ ಮತ್ತು ಸಮಾಧಾನವನ್ನು ಮಹಿಳೆಯರು ಕಳೆದುಕೊಂಡರು. ಇಪ್ಪತ್ತನೆಯ ಶತಮಾನದ ಅಂದಾಜು ಮಧ್ಯದ ತನಕ ಯುರೋಪಿನ ಮಹಿಳೆಯರಿಗೆ ತಮ್ಮ ಪತಿಯಂದಿರ ಮನೆಗಳಲ್ಲೂ ಯಾವುದೇ ಹಕ್ಕು ಇರಲಿಲ್ಲ. ತಮ್ಮ ಮಾತಾಪಿತರ ಮನೆಗಳಲ್ಲೂ ಯಾವುದೇ ಹಕ್ಕು ಇರಲಿಲ್ಲ. ತಮ್ಮ ಮಕ್ಕಳ ಮನೆಗಳಲ್ಲೂ ಯಾವುದೇ ಹಕ್ಕು ಇರಲಿಲ್ಲ. ಇಂತಹ ಪರಿಸ್ಥಿತಿ ಹೇಗೆ ಬದಲಾಯಿಸಿತೆಂದರೆ ಕೆಲವು ಯುರೋಪಿಯನ್ ದೇಶಗಳಲ್ಲಿ ಸ್ಥಿತಿ ಹೀಗೆ ಇದೆ: ಒಂದು ಮನೆಯಲ್ಲಿ ಪತಿ ಮತ್ತು ಪತ್ನಿ ಒಟ್ಟಿಗೆ ಜೀವಿಸುತ್ತಾರೆ. ಅವರಿಬ್ಬರೂ ಜೊತೆಯಾಗಿ ಹಣ ಖರ್ಚುಮಾಡಿ ಮನೆಯನ್ನು ನಿರ್ಮಿಸಿದ್ದಾರೆ ಎಂದಿಟ್ಟುಕೊಳ್ಳಿ. ಈ ಪತಿ ಪತ್ನಿಯರಲ್ಲಿ ಜಗಳ ತಲೆದೋರಿದರೆ, ಪತ್ನಿ ಇಚ್ಛಿಸುವುದಾದರೆ ತನ್ನ ಪತಿಯನ್ನು ಕೂಡಲೆ ಮನೆಯಿಂದ ಹೊರಹಾಕಬಹುದಾದ ಅಧಿಕಾರವನ್ನು ಹೊಂದಿರುತ್ತಾಳೆ. ಆಕೆ ಮಾಡಬೇಕಾದುದು ಇಷ್ಟೇ: ತನ್ನ ಪತಿಯ ಬಟ್ಟೆಬರೆಗಳನ್ನು ಒಂದು ಸೂಟ್‌ಕೇಸಿಗೆ ತುಂಬಿಸಿ ಮನೆಯ ಹೊರಗೆ ಇರಿಸಿ, "ಇನ್ನು ಮುಂದೆ ಈ ಮನೆಯಲ್ಲಿ ನಿಮಗೆ ಯಾವ ಸಂಬಂಧವೂ ಇಲ್ಲ. ನಿಮ್ಮ ಸೂಟ್‌ಕೇಸನ್ನು ತೆಗೆದುಕೊಂಡು ಹೊರಟು ಹೋಗಿರಿ" ಎಂದು ಒಂದು ಚೀಟಿಯಲ್ಲಿ ಬರೆದಿಟ್ಟರೆ ಸಾಕಾಗುವುದು. ಸ್ವೀಡನ್‌ನಲ್ಲಿ ಈ ನಿಯಮ ಜಾರಿಯಲ್ಲಿದೆ. ಸಮಪಾಲು ಹೊಂದಿರುವ ಪತಿಪತ್ನಿಯರ ಆಸ್ತಿ ವಿವಾಹ ವಿಚ್ಛೇದನೆಯಾಗುವಾಗ ಪತ್ನಿಯ ಸ್ವಾಧೀನಕ್ಕೆ ಬರುತ್ತದೆ.

ಮಹಿಳೆಯ ಸಹಜ ಪ್ರಕೃತಿ ಬದಲಾವಣೆ ಹೊಂದಲಾರದು. ಮಹಿಳೆ ಎಷ್ಟು ಸ್ವಾತಂತ್ರ್ಯವನ್ನು ಕಿತ್ತುಕೊಂಡರೂ ಆ ಸ್ವಾತಂತ್ರ್ಯ ಆಕೆಗೆ ಸುಖ ಸಮಾಧಾನ ನೀಡಲಿಲ್ಲ. ಮಹಿಳೆಯ ಪ್ರಕೃತಿ ಹೇಗಿದೆ ಎಂದರೆ ಆಕೆಗೆ ಯಾರದಾದರೂ ಆಶ್ರಯದ ಆವಶ್ಯಕತೆ ಇರುತ್ತದೆ. ಆಕೆ ತನ್ನ ತಲೆಯ ಮೇಲೆ ಪ್ರೀತಿಯ ಕೈ ಇರಿಸುವುದನ್ನು ಬಯಸುತ್ತಾಳೆ. ಅದೇ ರೀತಿ ಆಕೆ ಮಾತೆಯಾಗಿ ಮಕ್ಕಳ ತಲೆಯ ಮೇಲೆ ಪ್ರೀತಿಯ ಕೈ ಇರಿಸುವ ಅರ್ಹತೆಯನ್ನು ಹೊಂದಿರುತ್ತಾಳೆ. ಮಹಿಳೆ ಪೂರ್ಣ ಸ್ವಾತಂತ್ರ್ಯ ಗಳಿಸುವಾಗ ಎಲ್ಲದರ ಒಡತಿ ಆದರೂ ಅವಳಲ್ಲಿ ಒಂದು ಶೂನ್ಯ ಸ್ಥಿತಿ ತಲೆದೋರುತ್ತದೆ. ಅವಳಲ್ಲಿ ಎಂತಹ ಆಶಾಭಿಲಾಷೆಗಳು ಹುಟ್ಟುತ್ತವೆ ಎಂದರೆ ಅದಕ್ಕೆ ಉತ್ತರ ಸಿಗುವುದಿಲ್ಲ. ಅವಳು ಅತ್ಯಂತ ದುಸ್ಸಹವಾದ ಏಕಾಂತತೆಯ ಎಂತಹ ಶಾಶ್ವತ ಭಾವನೆ ಹೊಂದಿರುತ್ತಾಳೆಂದರೆ ಅದು

ಎಂದೂ ಕೊನೆಗೊಳ್ಳುವುದಿಲ್ಲ. ಇದರ ಕಾರಣದಿಂದ ಸಮಾಜದಲ್ಲಿ ಅಸ್ವಸ್ಥತೆ ತಲೆದೋರುತ್ತದೆ. 1978ರಲ್ಲಿ ನಾನು ಯುರೋಪಿನಲ್ಲಿ ಪ್ರವಾಸ ಮಾಡುತ್ತಿದ್ದಾಗ ಸ್ಕಾಂಡಿನೇವಿಯನ್ ದೇಶಗಳಲ್ಲಿ ಈ ಅಸಮಾಧಾನತೆ ಮತ್ತು ಶೂನ್ಯತೆಯನ್ನು ನಾನು ಸ್ವತಃ ಕಂಡೆನು. ಯಶಸ್ವಿ ವಿವಾಹ ಸಂಬಂಧಗಳಿಗಿಂತ ಬಿಗಡಾಯಿಸಿದ ವಿವಾಹ ಸಂಬಂಧಗಳು ಬಹಳ ಹೆಚ್ಚು ಇದ್ದುವು. ವಿವಾಹ ವಿಚ್ಛೇದನೆ ಗಳಿಸಿದ ಪತ್ನಿಯರು ಎಲ್ಲ ಸ್ವತ್ತುಗಳನ್ನು ಪಡೆದಿದ್ದರೂ ಮಕ್ಕಳ ಮೇಲೆ ಸಹ ಅವರೇ ಅಧಿಕಾರ ಹೊಂದಿದ್ದರೂ ಅವರು ತಮ್ಮ ಏಕಾಂತ ಜೀವಿತದಿಂದ ಎಷ್ಟು ಕಂಗೆಟ್ಟಿದ್ದರೆಂದರೆ, ಅನೇಕ ಸಭೆಗಳಲ್ಲಿ ನನಗೆ ಅವರೊಂದಿಗೆ ಮಾತನಾಡಲು ಸಂದರ್ಭ ಸಿಕ್ಕಾಗ ಕೆಲವು ಮಹಿಳೆಯರು ತಮ್ಮ ಸ್ಥಿತಿಯ ಬಗ್ಗೆ ಪ್ರಸ್ತಾಪಿಸುವಾಗ ಕೂಡಲೆ ಅಳಲು ತೊಡಗುತ್ತಿದ್ದರು. ಮೃತ್ಯು ಬಂದೆರಗುವ ತನಕ ಒಂದು ಭಯಾನಕ ಶೂನ್ಯಾವಸ್ಥೆ ಅವರನ್ನು ದಿಟ್ಟಿಸಿ ನೋಡುತ್ತಿತ್ತು. ಅದರಿಂದ ಓಡಿ ದೂರಹೋಗಲು ಯಾವುದೇ ಸಾಧ್ಯತೆ ಇರಲಿಲ್ಲ.

ಇದಕ್ಕೆದುರಾಗಿ ಪುರುಷರು ತಮ್ಮ ಹಕ್ಕುಗಳನ್ನು ಸಂರಕ್ಷಿಸಲು ಒಂದು ಉಪಾಯವನ್ನು ಕೈಗೊಂಡರು. ವಿವಾಹವಾಗದೆ ಏಕೆ ಇರಬಾರದೆಂದು ಅವರು ನಿರ್ಧರಿಸಿದರು. ಅಲ್ಲಿ ಹೆಂಗಸರನ್ನು ಇಟ್ಟುಕೊಳ್ಳುವುದು ಅಪರಾಧವಲ್ಲ. ಅದರ ಬಗ್ಗೆ ಸಮಾಜದಲ್ಲಿ ಯಾವುದೇ ನ್ಯೂನತೆಯ ಭಾವನೆ ಸಹ ಇರುವುದಿಲ್ಲ. ವಿವಾಹ ಒಬ್ಬಳನ್ನೇ ಆಗಲು ಸಾಧ್ಯ. ಆದರೆ ಒಬ್ಬಳ ನಂತರ ಇನ್ನೊಬ್ಬಳಂತೆ ಅಥವಾ ಒಟ್ಟಿಗೆ ಕೆಲವು ಹೆಂಗಸರನ್ನು ಇಟ್ಟುಕೊಳ್ಳಬಹುದು. ಬಯಸುವಾಗಲೆಲ್ಲ ಅವರನ್ನು ಮನೆಯಿಂದ ಹೊರಗೆ ಹಾಕಲೂ ಬಹುದು. ಇಟ್ಟುಕೊಂಡ ಹೆಂಗಸಿಗೆ ಯಾವುದೇ ಹಕ್ಕು ಇರುವುದಿಲ್ಲ.

ಇವೆಲ್ಲವುಗಳ ಪರಿಣಾಮವಾಗಿ ಏನಾಯಿತೆಂದರೆ ಹೆಂಗಸರು ಹೋರಾಡಿ ತಮ್ಮ ಆವಶ್ಯಕತೆಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಹಕ್ಕುಗಳನ್ನು ಗಳಿಸಿದುದರಿಂದ ಪುರುಷರು ಅದಕ್ಕೆ ವಿರುದ್ಧವಾಗಿ ನೀಡಿದ ಪ್ರತಿಕ್ರಿಯೆಗಳಿಂದ ಮಹಿಳೆಯರಿಂದ ಹಕ್ಕುಗಳು ಹೊರಟು ಹೋಗಲು ತೊಡಗಿದುವು. ಯುರೋಪಿನ ಇತರ ದೇಶಗಳಿಗೆ ಹೋಲಿಸಿ ನೋಡುವಾಗ ಸ್ಕಾಂಡಿನೇವಿಯನ್ ದೇಶಗಳಲ್ಲಿ ವಿವಾಹೇತರ ಸಂಬಂಧಗಳಿಂದ ಜನಿಸುವ ಮಕ್ಕಳ ಸಂಖ್ಯೆ ಬಹಳ ಹೆಚ್ಚಿಗೆ ಇದೆ. ನಿಯಮ ವ್ಯವಸ್ಥೆ ಮೂಲಕ ತಿಳಿದುದು ಹೀಗೆ. ಆದರೆ ನಿಯಮ ವ್ಯವಸ್ಥೆಗೆ ತಿಳಿಯದೆ ಜನಿಸಿದವರ ಸಂಖ್ಯೆ ಬಹಳ ಹೆಚ್ಚಿರಬಹುದು. ಮಹಿಳೆಯರಿಗೆ ಈಗ ಶಾಂತಿ ಸಮಾಧಾನದ ಖಾತರಿ ದೊರಕದಾಯಿತು.

ಇನ್ನೊಂದು ಅಪಾಯಕಾರಿ ಸನ್ನಿವೇಶ ಸ್ಕಾಂಡಿನೇವಿಯನ್ ದೇಶಗಳಲ್ಲಿ ಮಾತ್ರವಲ್ಲ, ಇತರ ಪಾಶ್ಚಿಮಾತ್ಯ ದೇಶಗಳಲ್ಲೂ ಬಹಳ ತೀವ್ರವಾಗಿ ತಲೆದೋರುತ್ತಾ ಇದೆ. ಪುರುಷರು ಪುರುಷರೊಂದಿಗೆ ಮತ್ತು ಮಹಿಳೆಯರು ಮಹಿಳೆಯರೊಂದಿಗೆ ಲೈಂಗಿಕ ಸಂಪರ್ಕ ನಡೆಸುವುದು ಜಾರಿಗೊಂಡಿದೆ. ಮಹಿಳೆ ತನ್ನ ಲೈಂಗಿಕ ತೃಪ್ತಿಯನ್ನು ಪುರುಷನಿಗೆ ಪ್ರತಿಯಾಗಿ ಮಹಿಳೆಯಿಂದ ಪಡೆಯಲು ಪ್ರಯತ್ನಿಸುತ್ತಾಳೆ. ಇದನ್ನು ಲೆಸ್‌ಬಿಯನಿಸಮ್ (Lesbianism) ಎನ್ನುತ್ತಾರೆ. ಯುರೋಪಿನ ಮಹಿಳೆಯರಲ್ಲಿ ಲೆಸ್‌ಬಿಯನಿಸಮ್ ವರ್ಧಿಸುತ್ತಿರುವಾಗ ಪುರುಷರಲ್ಲಿ ಹೊಮೋ ಸೆಕ್ಸುವೇಲಿಟಿ (Homo Sexuality) ಎಂದರೆ ಸ್ವವರ್ಗರತಿ ಭೀತಿದಾಯಕವಾಗಿ ವರ್ಧಿಸಿದೆ ಎಂದು ಅಂಕೆ ಸಂಖ್ಯೆಗಳು ಸೂಚಿಸುತ್ತವೆ.

ಅಮೇರಿಕ ಈಗ ಎಲ್ಲ ಕೆಟ್ಟ ಕೆಲಸಗಳಲ್ಲೂ ಎಲ್ಲರಿಗಿಂತಲೂ ಮುಂದೆ ಇದೆ. ಅದು ಯುರೋಪಿಗೆ ಕೆಟ್ಟ ಕೆಲಸಗಳನ್ನು ಕಲಿಸುವುದರಲ್ಲಿ ಮುಂಚೂಣಿಯಲ್ಲಿದೆ. ಅಮೇರಿಕದ ನಂತರ ಸ್ವೀಡನ್ ಮತ್ತು ಡೆನ್ಮಾರ್ಕ್ ಮೊದಲಾದುವುಗಳ ಸರದಿ ಬರುತ್ತದೆ. ಈ ದೇಶಗಳಲ್ಲಿ ಪುರುಷರ ದೊಡ್ಡ ದೊಡ್ಡ ಸಂಘಟನೆಗಳು ಮಹಿಳೆಯರಿಗೆ ವಿರುದ್ಧವಾಗಿ ಸ್ಥಾಪಿತವಾಗಿವೆ. ವಿವಾಹ ಸಂಬಂಧದಲ್ಲಿ ಪತಿ – ಪತ್ನಿಯರಿಗಿರುವ ಹಕ್ಕುಗಳು ಪುರುಷ – ಪುರುಷ ಜೋಡಿಗಳಿಗೂ ಲಭಿಸಬೇಕೆಂದೂ ಪುರುಷ ನಿಯಮಬದ್ಧವಾಗಿ ಇನ್ನೊಬ್ಬ ಪುರುಷನನ್ನು ವಿವಾಹವಾಗಲು ಅನುಮತಿಸಬೇಕೆಂದೂ ಅಪೇಕ್ಷಿಸುತ್ತಾರೆ. ಇಂತಹ ಜನರು ಒಟ್ಟಿಗೆ ಸೇರಿ ದೊಡ್ಡ ದೊಡ್ಡ ಮೆರವಣಿಗೆಗಳನ್ನು ಹೊರಡಿಸುತ್ತಾರೆ. ಅದರ ಸಚಿತ್ರ ವರದಿಗಳನ್ನು ಟೆಲಿವಿಶನ್ ಮತ್ತು ಪತ್ರಿಕೆಗಳು ಪ್ರಕಟಿಸುತ್ತಾ ಇರುತ್ತವೆ. ಪುರುಷರು ತಮ್ಮ ಹಕ್ಕುಗಳನ್ನು ಆವಶ್ಯಪಡುತ್ತಿದ್ದಾರೆ ಎಂದು ಹೇಳಿ ವರದಿಗಳನ್ನು ಬಿತ್ತರಿಸುತ್ತಾ ಟೆಲಿವಿಶನ್, ದೇಶದ ಜನರಿಗೆ ದುರಾಚಾರಗಳ ಪಾಠ ಹೇಳಿಕೊಡುತ್ತದೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರು ಮತ್ತು ಪುರುಷರು ನಡೆಸುವ ಸ್ವಾತಂತ್ರ್ಯ ಹೋರಾಟಗಳು ಲೋಕದ ಪ್ರತಿಯೊಂದು ಧರ್ಮತತ್ವಗಳಿಗೆ ವಿರುದ್ಧವಾಗಿವೆ. ಅವರಿಗೆ ಅಲ್ಲಾಹನ ನೆರವಿನ ಹಸ್ತ ದೊರಕಲಾರದು. ಇಂತಹ ಜನರು ಲೋಕದಲ್ಲಿ ಸ್ವತಂತ್ರರಾಗಿ ದಾರಿತಪ್ಪಿ ಅಲೆದಾಡುತ್ತಿದ್ದಾರೆ ಮತ್ತು ಸಮಾಜದ ಸ್ಥಿತಿ ಕೆಡುಕಿನಿಂದ ಕೆಡುಕಿಗೆ ಹೋಗುತ್ತಾ ಇದೆ. ಈ ಆಧ್ಯಾತ್ಮಿಕ ರೋಗಗಳ ಕಾರಣದಿಂದ ಕೆಲವು ಅತ್ಯಂತ ಅಪಾಯಕಾರಿ ಶಾರೀರಿಕ ರೋಗಗಳು ಸಹ ತಲೆದೋರಿವೆ. ಏಯ್ಡ್ಸ್ ರೋಗ ಹರಡಲು ಕಾರಣ ಪುರುಷರ ಸ್ವವರ್ಗ ರತಿ ಎಂಬುದಾಗಿ ಸಾಬೀತಾಗಿದೆ. ಈ ರೋಗ ಈಗ ನಿಯಂತ್ರಣಾತೀತವಾಗಿ ಹಬ್ಬುತ್ತಾ ಇದೆ.

ಮೂರು ರೀತಿಯ ಬಾಂಧವ್ಯಗಳು ಹೆಚ್ಚುತ್ತಾ ಇವೆ. ಒಂದನೆಯದು, ಪುರುಷನು ಪುರುಷನೊಂದಿಗೆ ಲೈಂಗಿಕ ಸಂಬಂಧ ಹೊಂದಿ ಮಹಿಳೆಯನ್ನು ಸಂಪೂರ್ಣವಾಗಿ ಕಡೆಗಣಿಸುವುದು. ಎರಡನೆಯದು, ಮಹಿಳೆ ಮಹಿಳೆಯೊಂದಿಗೆ ಲೈಂಗಿಕ ಸಂಬಂಧ ಸ್ಥಾಪಿಸಿ ಪುರುಷನನ್ನು ಸಂಪೂರ್ಣವಾಗಿ ಕಡೆಗಣಿಸುವುದು. ಮೂರನೆಯದು, ಪುರುಷನು ಪುರುಷನೊಂದಿಗೆ ಮತ್ತು ಮಹಿಳೆಯೊಂದಿಗೆ ಲೈಂಗಿಕ ಸಂಬಂಧ ಸ್ಥಾಪಿಸುವುದು. ಇದನ್ನು ಹಿಟರೋ ಸೆಕ್ಸುವೇಲಿಟಿ (Hetero Sexuality) ಎಂದೆನ್ನುತ್ತಾರೆ. ಇದರ ಪರಿಣಾಮವಾಗಿ ಪುರುಷರ ರೋಗಗಳು ಮಹಿಳೆಯರಿಗೆ ಬಹಳ ಹೆಚ್ಚು ಹೆಚ್ಚಾಗಿ ವರ್ಗಾಯಿಸಲ್ಪಡುತ್ತವೆ.

ಈ ಮೂರು ಸ್ಥಿತಿಗಳು ಮಹಿಳೆಗೆ ಪ್ರಯೋಜನಕರವಾಗಿದೆಯೋ? ಇದರ ಹೆಸರು ಸ್ವಾತಂತ್ರ್ಯ ಎಂದೋ? ಈ ವಿಷಯವನ್ನು ಗಮನದಲ್ಲಿರಿಸಿ ಇಸ್ಲಾಮಿನ ತತ್ವೋಪದೇಶಗಳನ್ನು ಪಾಶ್ಚಿಮಾತ್ಯ ನಾಗರಿಕತೆಯ ವೈಪರೀತ್ಯಗಳೊಂದಿಗೆ ಹೋಲಿಸಿ ನೋಡಿರಿ. ಇಸ್ಲಾಮ್ ಧರ್ಮದ ಪ್ರಕಾರ ಮಹಿಳೆ ಯಾರನ್ನೂ ನರಕದ ಕಡೆಗೆ ಒಯ್ಯುವುದಿಲ್ಲ, ಬದಲು, ಮನುಷ್ಯರ ಸ್ವರ್ಗ ಅವರ ಮಾತೆಯರ ಪಾದಗಳಡಿಯಲ್ಲಿದೆ ಎಂದು ಇಸ್ಲಾಮ್ ಹೇಳುತ್ತದೆ.

### ಇಸ್ಲಾಮ್‌ಧರ್ಮದಲ್ಲಿ ಮಹಿಳೆಯ ಸ್ಥಾನ

ನಾನು ಇಸ್ಲಾಮಿನ ಉಪದೇಶಗಳ ಬೇರೆ ಕೆಲವು ಅಂಶಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಸಹಜವಾಗಿ ಮತ್ತು ಶಾರೀರಿಕವಾಗಿ

ಒಂದು ವ್ಯತ್ಯಾಸ ಪುರುಷ ಮತ್ತು ಮಹಿಳೆಯಲ್ಲಿದೆ. ಇಸ್ಲಾಮಿನ ಉಪದೇಶಗಳಲ್ಲಿ ಈ ವ್ಯತ್ಯಾಸವನ್ನು ಕಡೆಗಣಿಸಿಲ್ಲ. ಪುರುಷ ಮತ್ತು ಮಹಿಳೆಗೆ ಸಂಬಂಧಿಸಿದ ಉಪದೇಶಗಳಲ್ಲಿ ವ್ಯತ್ಯಾಸ ಉಂಟುಮಾಡಿದಾಗ ಅಲ್ಲಿ ಅನಿವಾರ್ಯವಾಗಿ, ಕಡ್ಡಾಯವಾಗಿ ಈ ಪ್ರಕೃತಿ ಸಹಜವಾದ ಶಾರೀರಿಕ ವ್ಯತ್ಯಾಸವನ್ನು ಗಮನದಲ್ಲಿ ಇಟ್ಟುಕೊಳ್ಳಲಾಗಿದೆ. ನಾನು ಈ ವಿಷಯಕ್ಕೆ ಸಂಬಂಧಿಸಿ ಮಾತನಾಡುವಾಗ ಸಹಜವಾಗಿ ಸ್ಪಷ್ಟವಾಗುವುದೇನೆಂದರೆ, ಇಸ್ಲಾಮಿನ ಉಪದೇಶಗಳು ಮನುಷ್ಯ ಪ್ರಕೃತಿಗೆ ಅನುಯೋಜ್ಯವಾಗಿವೆ. ಮಹಿಳೆಯರ ಸ್ವಾತಂತ್ರ್ಯದ ಪ್ರತಿಪಾದಕರಿಗೆ ಇಸ್ಲಾಮಿನ ಉಪದೇಶಗಳು ಪುರುಷಪಕ್ಷಪಾತಿಯಾಗಿದೆ ಎಂದು ಎಲ್ಲೆಲ್ಲಿ ಅವರಿಗೆ ಆಕ್ಷೇಪಿಸಲು ಅವಕಾಶ ಇದೆ ಎಂದು ತೋರುತ್ತದೆಯೋ ಅಲ್ಲೆಲ್ಲ ಇಸ್ಲಾಮಿನ ಉಪದೇಶದ ಸೌದರ್ಯ ಇನ್ನಷ್ಟು ಹೊಳೆಯುತ್ತಾ ಇರುವುದಾಗಿ ಕಾಣಿಸುವುದು. ಪುರುಷ ಮತ್ತು ಮಹಿಳೆಯ ಶಾರೀರಿಕ ಸೃಷ್ಟಿ ವ್ಯತ್ಯಾಸಗಳು, ಅದರ ಪರಿಣಾಮವಾಗಿ ಪುರುಷ ಮತ್ತು ಮಹಿಳೆಯರ ಯೋಚನೆಗಳಲ್ಲಿರುವ ವ್ಯತ್ಯಾಸ, ಅವರ ಭಾವನೆಗಳಲ್ಲಿರುವ ವ್ಯತ್ಯಾಸ ಇವುಗಳನ್ನು ಇಸ್ಲಾಮ್ ಕಡೆಗಣಿಸಿಲ್ಲ. ಉದಾಹರಣೆಗೆ, ಮಹಿಳೆ ತಾಯಿಯಾಗಬಲ್ಲಳು. ಆದರೆ ಪುರುಷ, ತಾಯಿಯಾಗಲಾರ. ವಿಜ್ಞಾನಿಗಳು ಎಷ್ಟು ಕಷ್ಟಪಟ್ಟು ಪ್ರಯತ್ನಿಸಿದರೂ ಪುರುಷ ತಾಯಿಯಾಗಲಾರ. ಮಹಿಳೆ ತಂದೆಯಾಗಲೂ ಸಾಧ್ಯವಿಲ್ಲ. ಅಲ್ಲಾಹನು ಮಹಿಳೆಗೆ ಒದಗಿಸಿಕೊಟ್ಟ ಯಂತ್ರದ ಮೂಲಕ ಮಗು ಹುಟ್ಟುತ್ತದೆ. ಆ ಮಗುವನ್ನು ಒಂಬತ್ತು ತಿಂಗಳು ತಾಯಿ ಗರ್ಭದಲ್ಲಿ ಪೋಷಿಸುವುದರ ಪರಿಣಾಮವಾಗಿ ತಾಯಿಗೆ ಮಗುವಿನೊಂದಿಗೆ ಎಂತಹ ಗಾಢವಾದ ಸಂಬಂಧ ಉಂಟಾಗುತ್ತದೆ ಎಂದರೆ ಅಂತಹ ಸಂಬಂಧ ತಂದೆಗೆ ಇರುವುದಿಲ್ಲ, ತಾಯಿ ಮಗುವನ್ನು ಪೋಷಿಸಲು ನಿರ್ಬಂಧಿತಳಾಗುತ್ತಾಳೆ. ತಾಯಿಯ ಸಹಾಯವಿಲ್ಲದೆ ತಂದೆ ಮಗುವಿನ ಪಾಲನೆ ಪೋಷಣೆ ನಡೆಸಲಾರ. ಆದುದರಿಂದ ಮಹಿಳೆಗೆ ಇದಕ್ಕೆ ಸಂಬಂಧಿಸಿ ಹೆಚ್ಚು ಸವಲತ್ತುಗಳು ದೊರಕಬೇಕಾಗಿವೆ. ಮನೆ ಖರ್ಚಿಗೋಸ್ಕರ ಹಣ ಸಂಪಾದನೆ ಮಾಡುವ ಜವಾಬ್ದಾರಿ ಇಲ್ಲದಿದ್ದರೆ ಆಕೆ ಸುಲಭವಾಗಿ ಮನೆಯ ಜವಾಬ್ದಾರಿ ಈಡೇರಿಸಬಲ್ಲಳು. ತನ್ನ ಗಂಡನಿಗೆ ಎಲ್ಲ ವಿಧ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ನಿಗಾ ಇಡುವುದು ಸಹ ಈ ಜವಾಬ್ದಾರಿಯಲ್ಲಿ ಸೇರಿದೆ. ಮಹಿಳೆಗೆ ನೀಡಲಾದ ಈ ಸವಲತ್ತುಗಳನ್ನು ಆಕೆಯ ಮೇಲೆ ಹೊರಿಸಲಾದ ಹತೋಟಿಗಳೆಂದು ಈಗ ಆಕ್ಷೇಪಿಸಲಾಗುತ್ತಿದೆ. ವಾಸ್ತವಿಕವಾಗಿ ಇವುಗಳು ಹತೋಟಿಗಳಲ್ಲ, ಅವರಿಗೆ ನೀಡಲಾದ ಸ್ವಾತಂತ್ರ್ಯಗಳಾಗಿವೆ.

ಮಹಿಳೆ ಶಾರೀರಿಕವಾಗಿ ಪುರುಷನಿಗಿಂತ ವ್ಯತ್ಯಾಸ ಹೊಂದಿರುವುದನ್ನು ಗಮನಿಸಿ ಆಕೆ ನಿರ್ವಹಿಸಬೇಕಾದ ವಿಶಿಷ್ಟ ಜವಾಬ್ದಾರಿಗಳನ್ನು ನಿರ್ವಹಿಸಲು ಆವಶ್ಯಕವಾದ ಎಲ್ಲ ಸವಲತ್ತುಗಳನ್ನು ಆಕೆಗೆ ಇಸ್ಲಾಮ್ ಧರ್ಮವು ನೀಡಿದೆ. ಉದಾಹರಣೆಗೆ, ಮನೆಯ ಮೇಲ್ವಿಚಾರಣೆ ನಡೆಸುವ ಬಗ್ಗೆ ಆಕೆಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಐದು ಹೊತ್ತು ಮಸ್‌ಜಿದ್‌ಗೆ ಹೋಗಿ ನಮಾಝ್ ಮಾಡಬೇಕೆಂಬುದು ಆಕೆಗೆ ಕಡ್ಡಾಯವಲ್ಲ. ಆದರೆ ಅವಳು ಬಯಸುವುದಾದರೆ ಆಕೆಗೆ ಮಸ್‌ಜಿದ್‌ಗೆ ನಮಾಝ್‌ಗೋಸ್ಕರ ಹೋಗುವ ಸ್ವಾತಂತ್ರ್ಯ ನೀಡಲಾಗಿದೆ. ಅವಳು ಗರ್ಭಿಣಿಯಾಗಿರುವಾಗ ಮತ್ತು ಮಗುವಿಗೆ ಹಾಲೂಡಿಸುವಾಗ ರಮಝಾನ್ ತಿಂಗಳ ಉಪವಾಸ ಅನುಷ್ಠಿಸುವುದು ಕಡ್ಡಾಯವಲ್ಲ. ಋತುಸ್ರಾವದ ಕಾಲದಲ್ಲಿ ನಮಾಝ್ ಮಾಡುವುದರಿಂದ ವಿನಾಯಿತಿ ನೀಡಲಾಗಿದೆ. ಒಟ್ಟಾರೆ ಹೇಳುವುದಾದರೆ, ಮಹಿಳೆಯ ಶಾರೀರಿಕ ಆವಶ್ಯಕತೆಗಳು ಬೇರೆ ಬೇರೆಯಾಗಿರುವುದರಿಂದ ಇಸ್ಲಾಮ್ ಅದನ್ನು ಗಮನಿಸಿ ಈಡೇರಿಸಿ ಕೊಡುತ್ತದೆ. ಇದರ ಹೊರತು ಜೀವಿತದ ಬೇರೆ ಪ್ರತಿಯೊಂದು ಭಾಗದಲ್ಲಿ ಪುರುಷ ಮತ್ತು ಮಹಿಳೆ ಸಮಾನ ಹಕ್ಕುಗಳನ್ನೂ ಸಮಾನ ಜವಾಬ್ದಾರಿಗಳನ್ನೂ ಹೊಂದಿರುತ್ತಾರೆ.

ಪವಿತ್ರಖುರ್‌ಆನಿನ ಸೂರತುನ್ನಿಸಾ ಎಂಬ ಅಧ್ಯಾಯ ವಿಶಿಷ್ಟವಾಗಿ ಮಹಿಳೆಯರ ಹಕ್ಕುಗಳನ್ನೂ ಹೊಣೆಗಾರಿಕೆಗಳನ್ನೂ ಪ್ರಸ್ತಾಪಿಸುತ್ತಿದೆ. ಈ ಅಧ್ಯಾಯದ ಆರಂಭದಲ್ಲಿಯೇ ಹೀಗೆ ಹೇಳಲಾಗಿದೆ:

"ಮನುಷ್ಯರೇ, ನೀವು ನಿಮ್ಮ ಪ್ರಭುವಿನ ಭಯವಿರಿಸಿಕೊಳ್ಳಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿ ಅದರಿಂದ (ಅದರ ವರ್ಗದಿಂದಲೇ) ಅದರ ಜೋಡಿಯನ್ನೂ ಸೃಷ್ಟಿಸಿ, ಅವೆರಡರಿಂದ ಅನೇಕ ಪುರುಷರನ್ನೂ ಸ್ತ್ರೀಯರನ್ನೂ (ಲೋಕದಲ್ಲಿ) ವ್ಯಾಪಿಸುವಂತೆ ಮಾಡಿದನು." (4:2)

"ಒಂದು ಜೀವ" ಎಂದು ಹೇಳಿದುದಕ್ಕೆ ಅನೇಕ ಅರ್ಥಗಳಿವೆ. ಒಂದು ಅರ್ಥ ಹೀಗೆ: ಪುರುಷ ಮತ್ತು ಮಹಿಳೆ ಎಂಬ ನೆಲೆಯಲ್ಲಿ ನಿಮ್ಮ ಗೌರವ ಸಮಾನವಾಗಿದೆ. ನಿಮ್ಮ ಹಕ್ಕುಗಳು ಪುರುಷ ಮತ್ತು ಮಹಿಳೆ ಎಂಬ ದೃಷ್ಟಿಯಿಂದ ಸಮಾನವಾಗಿವೆ. ನೀವು ಒಂದೇ ಜೀವದಿಂದ ಸೃಷ್ಟಿಸಲ್ಪಟ್ಟಿರುವಿರಿ. ನಿಮ್ಮ ಪ್ರತಿ ಒಬ್ಬರಿಗೆ ಇನ್ನೊಬ್ಬರ ಮೇಲೆ ಶ್ರೇಷ್ಠತೆ ಇರುವುದಿಲ್ಲ.

ಒಂದು ಜೀವದಿಂದ ಸೃಷ್ಟಿಸಲಾಗಿದೆ ಎಂದು ಹೇಳಿದುದರ ಇನ್ನೊಂದು ಅರ್ಥ ಹೀಗಿದೆ: ಮಾನವ ಜೀವಿತದ ಆರಂಭವಾದುದು ಒಂದು ಜೀವಿಯಿಂದಾಗಿದೆ. ಅದು ಗಂಡೋ, ಹೆಣ್ಣೋ ಆಗಿರಲಿಲ್ಲ. ವಂಶವೃದ್ಧಿಗೋಸ್ಕರ ಜೀವಿಯ ಆದಿರೂಪವನ್ನು ಬಳಸಲಾಗಿತ್ತು. ಅದನ್ನು ಒಂದು ಜೀವ ಎಂದು ಹೇಳಲಾಗಿದೆ. ಅದು ಹೆಣ್ಣು ಅಥವಾ ಗಂಡು ಆಗಿರಲಿಲ್ಲ. ಈ ದೃಷ್ಟಿಯಿಂದ ಗಂಡಿಗೆ ಹೆಣ್ಣಿನ ಮೇಲಾಗಲಿ ಹೆಣ್ಣಿಗೆ ಗಂಡಿನ ಮೇಲಾಗಲಿ ಸ್ಥಾನವಿಲ್ಲ.

ಇದು ಕ್ರೈಸ್ತ ಧರ್ಮದ ಉಪದೇಶಕ್ಕಿಂತ ಎಷ್ಟು ವ್ಯತ್ಯಾಸವಾಗಿದೆ! ಕ್ರೈಸ್ತ ಧರ್ಮ ಹೇಳುತ್ತದೆ: ಹೆಣ್ಣನ್ನು ಪುರುಷನ ಎದೆ ಎಲುಬಿನಿಂದ ಸೃಷ್ಟಿಸಲಾಗಿದೆ. ಆದುದರಿಂದ ಸ್ತ್ರೀ ತನ್ನ ಸೃಷ್ಟಿಗೋಸ್ಕರ ಪುರುಷನನ್ನು ಅವಲಂಬಿಸಿದ್ದಾಳೆ. ಮನುಷ್ಯನ ಉದ್ಭವಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಈ ಪ್ರಸ್ತಾಪವನ್ನು ತಿರಸ್ಕರಿಸುತ್ತದೆ. ಪುರುಷ ಮತ್ತು ಮಹಿಳೆ ತಮ್ಮ ಸೃಷ್ಟಿಗೋಸ್ಕರ ಪರಸ್ಪರ ಅವಲಂಬಿಸಿರಲಿಲ್ಲ ಎಂದು ಅದು ಹೇಳುತ್ತದೆ. ಅವರಿಬ್ಬರೂ ಸಮಾನ ರೀತಿಯಲ್ಲಿ ಸೃಷ್ಟಿಸಲ್ಪಟ್ಟರು. ಅವರ ಸೃಷ್ಟಿಯ ಆರಂಭವು ಒಂದು ಜೀವದಿಂದ ಆಗಿತ್ತು. ಇದೊಂದು ವೈಜ್ಞಾನಿಕ ವಿಷಯವಾಗಿದೆ. ಇದನ್ನು ವಿಶರೀಕರಿಸಬೇಕಾಗಿದೆ. ಆದರೆ ಈಗ ಅದಕ್ಕೋಸ್ಕರ ಸಮಯವಿಲ್ಲ.

ಅನಂತರ ಆ ಏಕ ಜೀವದಿಂದ ಪುರುಷನನ್ನೂ ಸ್ತ್ರೀಯನ್ನೂ ಸೃಷ್ಟಿಸಲಾಯಿತು. ಇವುಗಳ ಸೃಷ್ಟಿಯ ಉದ್ದೇಶವನ್ನು ಪವಿತ್ರ ಖುರ್‌ಆನ್ ಹೀಗೆ ವಿವರಿಸಿದೆ:

"ನೀವು ಮನಶ್ಶಾಂತಿ ಪಡೆಯಲಿಕ್ಕೋಸ್ಕರ ನಿಮ್ಮ ವರ್ಗದಿಂದಲೇ ಅವನು ನಿಮಗಾಗಿ ಬಾಳಸಂಗಾತಿಗಳನ್ನು ಸೃಷ್ಟಿಸಿದ್ದಾನೆ. ಇದು ಅವನ ದೃಷ್ಟಾಂತಗಳಲ್ಲೊಂದು. ನಿಮ್ಮ ಮಧ್ಯೆ ಅವನು ಪ್ರೀತಿಯನ್ನೂ ಕರುಣೆಯನ್ನೂ ಉಂಟುಮಾಡಿದನು. ಚಿಂತನಶೀಲರಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ." (30:22)

ವಿವಾಹದ ನಂತರ ಈ ಉದ್ದೇಶವು ಈಡೇರಿಸಲ್ಪಡುವುದಿಲ್ಲವಾದರೆ ಮತ್ತು ಪತಿ – ಪತ್ನಿಯರು ಈ ಉದ್ದೇಶವನ್ನು ನಿರ್ಲಕ್ಷಿಸುವುದಾದರೆ, ಇದರಲ್ಲಿ ಪುರುಷನು ತಪ್ಪು ಮಾಡುವವನಾಗಿದ್ದರೂ ಮಹಿಳೆ ತಪ್ಪು

ಮಾಡುವವಳಾಗಿದ್ದರೂ ಅವರು ತಮ್ಮ ಸೃಷ್ಟಿಯ ಉದ್ದೇಶವನ್ನು ಮರೆತು ಬಿಡುವವರಾಗಿದ್ದಾರೆ. ವಿವಾಹದ ನಂತರ ಪ್ರೀತಿ ಮತ್ತು ಕರುಣೆಯನ್ನು ಯಾವಾಗಲೂ ದೃಷ್ಟಿಯಲ್ಲಿಟ್ಟುಕೊಳ್ಳ ಬೇಕು. ಎಂತಹ ಪರಿಸ್ಥಿತಿಯನ್ನು ಸ್ಥಾಪಿಸಬೇಕೆಂದರೆ, ಪುರುಷನು ಮಹಿಳೆಗೆ ಪ್ರೀತಿ ಮತ್ತು ಕರುಣೆಯ ಉದ್ಭವ ಸ್ಥಾನವಾಗಬೇಕು. ಮಹಿಳೆ ಪುರುಷನಿಗೆ ಪ್ರೀತಿ ಮತ್ತು ಕರುಣೆಯ ಉದ್ಭವ ಸ್ಥಾನವಾಗಬೇಕು.

ದೃಷ್ಟಿಯನ್ನು ಅಡ್ಡಹಾಯಿಸುವುದು, ದಾರಿತಪ್ಪಿ ಹೋಗುವುದು, ತನ್ನ ಸಂಗಾತಿಯನ್ನು ಬಿಟ್ಟು ಬೇರೆ ಸ್ಥಳದಲ್ಲಿ ಮನಶ್ಶಾಂತಿ ಪಡೆಯಲೆತ್ನಿಸುವುದು ಮೊದಲಾದುವುಗಳ ಬಗ್ಗೆ ಇಸ್ಲಾಮ್‌ವಿಧಿಸಿರುವ ಆಜ್ಞೆಗಳು ಕುಟುಂಬ ಜೀವಿತವನ್ನು ಸಂರಕ್ಷಿಸಲಿಕ್ಕಾಗಿವೆ. ಪತಿ – ಪತ್ನಿ ಸಂಬಂಧದಲ್ಲಿ ಸದಾ ಶಾಶ್ವತವಾಗಿ ಪ್ರೀತಿ ಸಂರಕ್ಷಿಸಲ್ಪಡಲಿಕ್ಕೋಸ್ಕರ ಹೀಗೆ ವಿಧಿಸಲ್ಪಟ್ಟಿದೆ. ದೃಷ್ಟಿ ಅಡ್ಡಹಾಯುವುದನ್ನೂ ದಾರಿತಪ್ಪಿ ಹೋಗುವುದನ್ನೂ ಅನುಮತಿಸುವುದಾದರೆ, ಅನಿವಾರ್ಯವಾಗಿ ಮನೆಯಲ್ಲಿರಬೇಕಾದ ಪ್ರೀತಿ ವಿಶ್ವಾಸಗಳನ್ನು ತ್ಯಜಿಸುವ ಮೂಲಕ ಅದು ಸಾಧಿಸಲ್ಪಡುವುದಲ್ಲದೆ ಅನ್ಯಥಾ ಅಲ್ಲ. ದೃಷ್ಟಿಗಳನ್ನು ಸ್ವತಂತ್ರವಾಗಿ ಹರಿಯಲು ಬಿಡುವ ಪ್ರಮಾಣದಲ್ಲಿ ಪತಿ – ಪತ್ನಿಯರು ಪರಸ್ಪರ ತಮ್ಮ ಹಕ್ಕುಗಳನ್ನು ನಾಶಗೊಳಿಸುವರು. ಆದುದರಿಂದ ಇಸ್ಲಾಮ್ ಇದನ್ನು ತಡೆದಿರುವುದನ್ನು ಹತೋಟಿ ಎಂದು ಹೇಳುವುದು ಸರಿಯಲ್ಲ. ವಾಸ್ತವಿಕವಾಗಿ ಇಲ್ಲಿ ಕುಟುಂಬದ ಭದ್ರತೆಯ ವಿಷಯವಿದೆ. ಸಮಾಜದ ಮೂಲಭೂತ ಘಟಕ ಕುಟುಂಬವೆಂದು ಇಸ್ಲಾಮ್ ಗಣಿಸಿರುವುದರಿಂದ ಕೌಟುಂಬಿಕ ಮೌಲ್ಯಗಳ ರಕ್ಷಣೆಗೆ ಆಜ್ಞೆಗಳನ್ನು ಇಸ್ಲಾಮ್ ನೀಡಿದೆ.

ಪವಿತ್ರ ಖುರ್‌ಆನ್ ಒಂದು ವಾಸ್ತವಿಕತೆಯನ್ನು ನಿರ್ಲಕ್ಷಿಸಿಲ್ಲ. ಮನುಷ್ಯನ ಪ್ರಕೃತಿಯ ಆವಶ್ಯಕತೆಗಳು ಹೇಗಿವೆ ಎಂದರೆ ಕೊನೆಗೆ ವಿವಿಧ ಸಮಾಜಗಳನ್ನು ಲೈಂಗಿಕ ಸ್ವಾತಂತ್ರ್ಯದ ಕಡೆಗೆ ವಾಲುವಂತೆ ಮಾಡುತ್ತವೆ. ಧರ್ಮದಿಂದ ದಾರಿತಪ್ಪಿ ಹೋಗಲು ಮನುಷ್ಯನೊಳಗೆ ಎಂತಹ ಪ್ರೇರೇಪಣೆಗಳು ಇವೆ ಎಂದರೆ ಅವು ಮೆಲ್ಲ ಮೆಲ್ಲಗೆ ನೇರವಾದ ಮಾರ್ಗದಿಂದ ದೂರ ಕೊಂಡೊಯ್ಯುತ್ತವೆ. ಆದುದರಿಂದ ಅಲ್ಲಾಹನು ಪ್ರಾರ್ಥನೆಯನ್ನು ಕಲಿಸಿರುವನು. ಅಲ್ಲಾಹನು ಸೂಚಿಸುವುದೇನೆಂದರೆ, ಮನುಷ್ಯನು ಪ್ರಾರ್ಥಿಸಬೇಕು. ಹಾಗೆ ಮಾಡಿದರೆ ಮಾತ್ರ ಕೌಟುಂಬಿಕ ಮೌಲ್ಯಗಳನ್ನು ಸಂರಕ್ಷಿಸಬಹುದು. ಮನುಷ್ಯನು ತನ್ನ ಸ್ವಂತ ಶಕ್ತಿಯಿಂದ ಕೌಟುಂಬಿಕ ಮೌಲ್ಯಗಳನ್ನು, ಸಂರಕ್ಷಿಸಲು ಸಮರ್ಥನಾಗಲಾರನು. ಅಲ್ಲಾಹನು ಸತ್ಯವಿಶ್ವಾಸಿಗಳ ಬಗ್ಗೆ ಹೀಗೆ ಹೇಳುತ್ತಾನೆ:

ವಲ್ಲಧೀನ ಯಖೂಲೂನ ರಬ್ಬನಾ ಹಬ್‌ಲನಾ ಮಿನ್ **ಅಝ್‌ವಾಜಿನಾ ವ ಧುರ್ರಿಯಾತಿನಾ ಖುರ್ರತ ಅಲ್‌ಯುನಿನ್ ವಜ್‌ಅಲ್‌ನಾ ಅಲ್‌ಮುತ್ತಖೀನ ಇಮಾಮ.**

"ಅವರು ಹೀಗೆ ಪ್ರಾರ್ಥಿಸುತ್ತಾರೆ: 'ನಮ್ಮ ಪ್ರಭೂ, ನಮ್ಮ ಬಾಳ ಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕರವಾಗಿ ಮಾಡು ಹಾಗೂ ನಮ್ಮನ್ನು ಸಜ್ಜನರಿಗೆ ನಾಯಕರನ್ನಾಗಿ ಮಾಡು."

(25:75)

ಪವಿತ್ರ ಖುರ್‌ಆನಿನ ಈ ವಚನ ಕೌಟುಂಬಿಕ ಜೀವಿತದ ಚಿತ್ರ ನೀಡುತ್ತದೆ. ಇದರಲ್ಲಿ ಗಮನಾರ್ಹವಾದ ಪ್ರಥಮ ವಿಷಯವೇನೆಂದರೆ, ಸತ್ಯವಿಶ್ವಾಸಿ ಸಂತೋಷಮಯ ಕುಟುಂಬ ಜೀವಿತಕ್ಕಾಗಿ ಪ್ರಯತ್ನಮಾಡುತ್ತಾನೆ. ಆದರೆ ತನ್ನ ಪ್ರಯತ್ನವನ್ನು ಮಾತ್ರ ಅವಲಂಬಿಸದೆ ಅಲ್ಲಾಹನು ತನಗೆ ಭಾಗ್ಯ ನೀಡದಿದ್ದರೆ ಕೌಟುಂಬಿಕ ಜೀವಿತವನ್ನು ಸಂತೋಷಕರವನ್ನಾಗಿ ಮಾಡಲಾರೆ ಎಂದು ನಂಬಿ ಪ್ರಾರ್ಥಿಸುತ್ತಾನೆ. ಇದೊಂದು ವಾಸ್ತವಿಕ ವಿಷಯವಾಗಿದೆ. ಏಕೆಂದರೆ ಆದರ್ಶ ಜೋಡಿಗಳು, ಪತಿ ಪತ್ನಿಗೆ ಮನಶ್ಶಾಂತಿ ನೀಡುವವನಾಗಿ ಮತ್ತು ಪತ್ನಿ ಪತಿಗೆ ಮನಶ್ಶಾಂತಿ ನೀಡುವವಳಾಗಿ ಇರುವುದು ಬಹಳ ಅಪೂರ್ವವಾಗಿದೆ.

ಇನ್ನೊಂದು ವಿಷಯ ಸಹ ಗಮನಾರ್ಹವಾಗಿದೆ. ಮಕ್ಕಳನ್ನೂ ನಯನಾನಂದಕರವನ್ನಾಗಿ ಮಾಡಲು ಪ್ರಾರ್ಥಿಸಲು ಆಜ್ಞಾಪಿಸಲಾಗಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಪತಿ – ಪತ್ನಿಯರು ವಿವಾಹದ ಸಮಯ ತಮಗೋಸ್ಕರ ಮಾತ್ರವಲ್ಲ, ತಮಗೆ ಹುಟ್ಟಲಿರುವ ಮಕ್ಕಳಿಗೋಸ್ಕರ ಸಹ ಪ್ರಾರ್ಥಿಸಲು ಪ್ರಾರಂಭಿಸಬೇಕಾಗಿದೆ. ಮಕ್ಕಳು ಭಯ ಭಕ್ತಿಯುಳ್ಳವರೂ ಸಾತ್ವಿಕರೂ ಆಗಿದ್ದರೆ ಮಾತ್ರ ಕಣ್ಣಿಗೆ ತಂಪನ್ನು ನೀಡುವರು. ಇದೇ ಕಾರಣದಿಂದ ಮೇಲೆ ಉಲ್ಲೇಖಿಸಿದ ಪ್ರಾರ್ಥನೆಯ ಕೊನೆಗೆ ಹೀಗೆ ಹೇಳಲಾಗಿದೆ: ನಮ್ಮನ್ನು ದೇವಭಕ್ತಿಯುಳ್ಳ ಸಜ್ಜನರಾದ ಮಕ್ಕಳಿಗೆ ನಾಯಕರನ್ನಾಗಿ ಮಾಡು.

ಈ ಪ್ರಾರ್ಥನೆಯ ಪರಿಣಾಮವಾಗಿ ತಂದೆತಾಯಿ ಮತ್ತು ಮಕ್ಕಳ ಮಧ್ಯೆ "ಜನರೇಶನ್ ಗ್ಯಾಪ್" (ಪೀಳಿಗೆಗಳ ಮಧ್ಯೆ ದೂರ) ಎಂದೂ ತಲೆದೋರಲಾರದು.

ತಂದೆತಾಯಂದಿರ ಕಣ್ಣಿಗೆ ತಂಪನ್ನು ನೀಡುವ ಮಕ್ಕಳು ತಮ್ಮ ಮನೆಯನ್ನು ಬಿಟ್ಟು ಹೊರಗೆ ಮನಶ್ಶಾಂತಿ ಪಡೆಯುವ ಹಂಬಲವನ್ನು ಹೊಂದಿರಲಾರರು. ಶಾಲೆ, ಕಾಲೇಜುಗಳಿಂದ ಅವರು ನೇರವಾಗಿ ಮನೆಗೆ ಬರುತ್ತಾರೆ. ಅವರು ತಮ್ಮ ತಂದೆ ತಾಯಂದಿರ ನೆರಳಿನಲ್ಲಿ ಮನಶ್ಶಾಂತಿ ಗಳಿಸುತ್ತಾರೆ. ಇದೇ ಪವಿತ್ರ ಖುರ್‌ಆನಿನ ಉಪದೇಶವಾಗಿದೆ. ಇದನ್ನು ಕಡೆಗಣಿಸುವ ಪರಿಣಾಮವಾಗಿ ದಿನಗಳೆದಂತೆ ಹೆಚ್ಚು ಕೌಟುಂಬಿಕ ಜೀವಿತಗಳು ನಾಶವಾಗುತ್ತಾ ಹೋಗುತ್ತವೆ. ಕುಟುಂಬಗಳು ಮುರಿದು ಹೋಗುತ್ತವೆ. ಇದರ ಪರಿಣಾಮವಾಗಿ ಪತಿ – ಪತ್ನಿಯರ ಮಧ್ಯೆ ಸಂಬಂಧ ಮುರಿದು ಹೋಗುವುದಲ್ಲದೆ ಮಕ್ಕಳೊಂದಿಗೆ ಅವರ ಸಂಬಂಧ ಸಹ ಮುರಿದು ಹೋಗುತ್ತದೆ. ಮಕ್ಕಳು ಪ್ರಾಪ್ತವಯಸ್ಕರಾದಾಗ ತಾವು ತಂದೆ ತಾಯಿಗಳಿಂದ ಸ್ವತಂತ್ರರಾಗಿದ್ದೇವೆ ಎಂದು ಯೋಚಿಸುತ್ತಾರೆ. ಅವರ ಸಂತೋಷದ ನೆಲೆ, ಮನೆಗಳಿಗೆ ಬದಲಾಗಿ ನೃತ್ಯ ಗೃಹಗಳು ಮತ್ತು ಮದ್ಯದಂಗಡಿಗಳು ಆಗುತ್ತವೆ. ಅಥವಾ ಅವರು ಯುವಕರ ಅಪರಾಧಿ ಗ್ಯಾಂಗ್‌ಗಳನ್ನು ರೂಪಿಸಿ ಗಲ್ಲಿಗಳ ಮತ್ತು ಮನೆಗಳ ಶಾಂತಿಯನ್ನು ಕೆಡಿಸುತ್ತಾ ತಿರುಗಾಡುತ್ತಾರೆ.

ಪವಿತ್ರ ಖುರ್‌ಆನಿನಲ್ಲಿ ದೇವಭಕ್ತಿಯನ್ನು ಹೊಂದಿದವರನ್ನು ಮುತ್ತಖೀ ಎಂದು ಕರೆಯಲಾಗಿದೆ. ಇದರ ಅರ್ಥ ದೇವನಿಗೆ ಭಯಪಟ್ಟುಕೊಂಡು ಅನ್ಯರ ಹಕ್ಕುಗಳನ್ನು ಈಡೇರಿಸಿ ಕೊಡುವವನು ಎಂದಾಗಿದೆ. ಅಂತಹ ವ್ಯಕ್ತಿ ಅನ್ಯರಿಗೋಸ್ಕರ ತನ್ನ ಹಕ್ಕನ್ನು ಕೂಡ ಬಿಟ್ಟುಕೊಡಲು ಸಿದ್ಧನಾಗಿರುತ್ತಾನೆ. ಆದುದರಿಂದ ಮೇಲೆ ಉಲ್ಲೇಖಿಸಿದ ಪ್ರಾರ್ಥನೆಯಲ್ಲಿ ಹೀಗೆ ಬೇಡಿಕೊಂಡಂತೆ ಆಗುತ್ತದೆ:

ಓ ಅಲ್ಲಾಹ್, ನಾವು ನಿನ್ನನ್ನು ಬೇಡಿಕೊಳ್ಳುತ್ತೇವೆ. ನಮ್ಮ ಮಕ್ಕಳು ನಮ್ಮ ಕಣ್ಣಿಗೆ ತಂಪನ್ನೆರೆಯುವವರಾಗುವುದರೊಂದಿಗೆ ಎಲ್ಲ ಮನುಷ್ಯರ ಕಣ್ಣುಗಳಿಗೂ ತಂಪನ್ನು ನೀಡುವವರನ್ನಾಗಿ ಮಾಡು. ಅವರಿಂದ ಲೋಕಕ್ಕೆ ಕೇಡು ಉಂಟಾಗದಿರಲಿ, ಅವರಿಂದ ಒಳಿತು ತಲಪಲಿ.

ಇಸ್ಲಾಮ್ ಧರ್ಮದ ಉಪದೇಶಗಳ ವಿರುದ್ಧ ನಡೆಯುವ ಆಕ್ರಮಣಗಳನ್ನು ಪ್ರತಿರೋಧಿಸುವುದು ಮುಸ್ಲಿಮ್ ಪುರುಷರಿಗೆ ಸಹ

ಕಡ್ಡಾಯವಾಗಿದ್ದರೂ ಮುಸ್ಲಿಮ್ ಮಹಿಳೆಯರು ಈ ಆಕ್ರಮಣಗಳನ್ನು ಬಹಳ ಚೆನ್ನಾಗಿ ಪ್ರತಿರೋಧಿಸಲು ಸಾಧ್ಯವಿದೆ. ಮುಸ್ಲಿಮ್ ಮಹಿಳೆ ತನ್ನ ಮೇಲೆ ಇಸ್ಲಾಮ್ ಧರ್ಮ ದೌರ್ಜನ್ಯ ನಡೆಸುತ್ತದೆ ಎಂಬ ಅನ್ಯರ ಆಕ್ಷೇಪಗಳನ್ನು ಪ್ರತಿರೋಧಿಸಿ ಇಸ್ಲಾಮೀ ತತ್ವಗಳನ್ನು ಬೆಂಬಲಿಸುವುದಾದರೆ, ಆಕೆಯು ನೀಡುವ ಸಾಕ್ಷ್ಯಾಧಾರಗಳಿಂದ ಪುರುಷರಿಗಿಂತ ಹೆಚ್ಚು ಸುಲಭವಾಗಿ ಮನವರಿಕೆ ಮಾಡಿಕೊಡಲು ಸಾಧ್ಯ. ಆದರೆ ಇದಕ್ಕಿರುವ ಶರತ್ತೇನೆಂದರೆ, ಮಹಿಳೆಯರು ಸ್ವತಃ ಪೂರ್ಣವಾಗಿ ಇಸ್ಲಾಮೀ ನಿಯಮಗಳ ಬಗ್ಗೆ ತೃಪ್ತರಾಗಿರದಿದ್ದರೆ ಅವರು ನೀಡುವ ಸಾಕ್ಷ್ಯಾಧಾರಗಳು ಬಲವತ್ತಾಗಿರಲಾರವು. ಆದುದರಿಂದ ಮುಸ್ಲಿಮ್ ಮಹಿಳೆಯರು ತಮ್ಮ ಬಗ್ಗೆ ಇಸ್ಲಾಮೀ ತತ್ವಗಳ ಬಗ್ಗೆ ತೃಪ್ತರಾಗಿರಬೇಕು. ಮುಸ್ಲಿಮ್ ಮಹಿಳೆಯರು ತಮ್ಮ ಬಗ್ಗೆ ಇಸ್ಲಾಮೀ ತತ್ವೋಪದೇಶಗಳನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಬೇಕು. ಅವರಿಗೆ ಸ್ವತಃ ಯಾವುದಾದರೂ ಆಕ್ಷೇಪಗಳು ತೋಚುವುದಾದರೆ ಅವರು ಧಾರ್ಮಿಕ ವಿದ್ವಾಂಸರಿಂದ ವಿಚಾರಿಸಿ ಪೂರ್ಣವಾಗಿ ತೃಪ್ತಿಯನ್ನು ಪಡೆಯಬೇಕು. ಅವರಿಗೆ ಮನಶ್ಶಾಂತಿಯೂ ತೃಪ್ತಿಯೂ ಲಭಿಸಿದರೆ ಅವರು ಮಾಡುವ ಪ್ರತಿರೋಧಾತ್ಮಕ ಚಟುವಟಿಕೆಗಳಿಂದ ಅಸಾಧಾರಣ ಪ್ರಭಾವ ಉಂಟಾಗುವುದು.

ನಾನು ಈ ವಿಷಯವನ್ನು ಈ ರೀತಿ ಪ್ರತಿಪಾದಿಸಿದುದು ಏಕೆಂದರೆ ಅಲ್ಲಾಹನು ನನಗೆ ಸೌಭಾಗ್ಯ ನೀಡಿದ ಪ್ರಕಾರ ನಾನು ಇಸ್ಲಾಮೀ ತತ್ವಗಳ ದಾರ್ಶನಿಕ ರೂಪ, ಅದರ ಹಿನ್ನೆಲೆ, ಅದರ ಆಳ ಮತ್ತು ಅಗಲ, ಅದರ ಭೂತಕಾಲ, ಅದರ ವರ್ತಮಾನಕಾಲ, ಅದರ ಭವಿಷ್ಯತ್‌ಕಾಲಗಳ ಬಗ್ಗೆ ನಾನು ನಿಮಗೆ ಮನವರಿಕೆ ಮಾಡಿಕೊಡಲು ಬಯಸುತ್ತೇನೆ. ನಿಮಗೆ ತೋಚುವ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯಲು ನೀವು ಅನ್ಯರನ್ನು ಆಶ್ರಯಿಸುವ ಆವಶ್ಯಕತೆ ಉಂಟಾಗದಿರಲಿ. ನಿಮ್ಮ ಪ್ರಶ್ನೆಗಳಿಗೆ ಉತ್ತರ ನನ್ನ ಪ್ರವಚನಗಳಿಂದಲೇ ನಿಮಗೆ ಲಭಿಸುವುದು. ನಾನು ನನ್ನ ಉದ್ದೇಶದಲ್ಲಿ ಜಯಶಾಲಿಯಾಗಲು ಅಲ್ಲಾಹನು ಅನುಗ್ರಹಿಸಲಿ. ನನ್ನ ಜೀವಿತ ಮತ್ತು ಸ್ಥಾನದ ವಾಸ್ತವಿಕ ಉದ್ದೇಶವು ಇದೇ ಆಗಿದೆ.

ಉಳಿದ ಭಾಗ ಇನ್‌ಶಾಲ್ ಅಲ್ಲಾಹ್ (ಅಲ್ಲಾಹನು ಇಚ್ಛಿಸಿದರೆ) ಮುಂದೆ ವಿವರಿಸುವೆನು. ಖುದಾ ಹಾಫಿಝ್ (ಅಲ್ಲಾಹನೇ ನಮ್ಮ ರಕ್ಷಕನು.)

●


## ಹೊಸ ಪ್ರಕಟನೆಗಳು

**ಮಹಿಳೆ ಇಸ್ಲಾಮ್‌ನಲ್ಲಿ**
ಲೇಖಕ: ಸರ್ ಮುಹಮ್ಮದ್ ಝಫ಼್ರುಲ್ಲಾ ಖಾನ್
ಪುಟ: 38, ಬೆಲೆ : 20

**ಧರ್ಮದ ಪುನಶ್ಚೇತನ ಸಿದ್ಧಾಂತ**
ಲೇಖಕ: ಹಝ್‌ರತ್ ಮಿರ್ಝಾ ತಾಹಿರ್ ಅಹ್ಮದ್
ಪುಟ: 20, ಬೆಲೆ : 15

ಸಂಪರ್ಕಿಸಿರಿ: Ahmadiya Muslim Jamath
No.1, 3rd Cross Road, Wilson Garden,
BANGALORE - 560 027


**"LOVE FOR HONESTY AND HATRED FOR DISHONESTY"**
**"ಪ್ರಾಮಾಣಿಕತೆ ಬಗ್ಗೆ ಪ್ರೀತಿ ಮತ್ತು ಅಪ್ರಾಮಾಣಿಕತೆ ಬಗ್ಗೆ ದ್ವೇಷ"**

- ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್
ಅಹ್ಮದಿಯಾ ಪಂಚಮ ಖಲೀಫ


**ಪುಸ್ತಕ ಪರಿಚಯ**

**ಧರ್ಮದ ನಾಮದಲ್ಲಿ ರಕ್ತಪಾತ**
ಗ್ರಂಥ ಕರ್ತ : ಮಿರ್ಝಾ ತಾಹಿರ್ ಅಹ್ಮದ್
ಪುಟಗಳು : 185 ಬೆಲೆ : ರೂ. 50/-

**ಖತ್‌ಮೆ ನುಬುವ್ವತ್ - ನಿಜಾಂಶಗಳು**
ಗ್ರಂಥ ಕರ್ತ : ಮಿರ್ಝಾ ಬಶೀರ್ ಅಹ್ಮದ್
ಪುಟಗಳು : 155 ಬೆಲೆ : ರೂ. 50/-

ಸಂಪರ್ಕಿಸಿರಿ :
**ಅಹ್ಮದಿಯಾ ಮುಸ್ಲಿಮ್ ಜಮಾಅತ್**
ನಂ.1, 3ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು - 560 027. Ph : 080 - 22246133

ಓದಿದ್ದು

## ಐಸಿಸ್ ಉಗ್ರರ ಲೈಂಗಿಕ ದೌರ್ಜನ್ಯ

ಲಂಡನ್: ಇರಾಕ್‌ನಲ್ಲಿ ಐಸಿಸ್ ಉಗ್ರರಿಂದ ಕೇವಲ ರಕ್ತಪಾತವಷ್ಟೇ ನಡೆಯುತ್ತಿಲ್ಲ. ಸಿಂಜಾರ್ ಪರ್ವತ ಶ್ರೇಣಿಗಳಲ್ಲಿ ನಿರ್ಗತಿಕರಂತೆ ಬದುಕುತ್ತಿದ್ದ ಅನೇಕ ಕುಟುಂಬಗಳ ಯುವತಿಯರನ್ನು ಅಪಹರಿಸಿ ಅವರನ್ನು ತಮ್ಮ ಕಾಮದಾಹಕ್ಕೆ ಬಳಸಿಕೊಳ್ಳುತ್ತಿದ್ದು ಅವರ ಬದುಕು ನರಕವಾಗಿದೆ.

ತಮ್ಮ ವಶದಲ್ಲಿರುವ ಯುವತಿಯರು, ಮಹಿಳೆಯರನ್ನು ಐಸಿಸ್ ಉಗ್ರರು ಮನಬಂದಂತೆ ಬಳಸಿಕೊಳ್ಳುತ್ತಿದ್ದು, ಅವರ ಮೇಲೆ ನಡೆಸುತ್ತಿರುವ ಸಾಮೂಹಿಕ ಅತ್ಯಾಚಾರಕ್ಕೆ ಕೊನೆಯೇ ಇಲ್ಲದಂತಾಗಿದೆ. ಉಗ್ರರ ಹೇಸಿಗೆ ಕೃತ್ಯದಿಂದ ಬೇಸತ್ತು ಅನೇಕ ಹೆಂಗಳೆಯರು ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾರೆಂದು ವರದಿಯಾಗಿದೆ. ಇಂತಹ ದಾರುಣ ಕತೆಯನ್ನು ಯಾಜಿದಿ ಸಮುದಾಯದ 17ರ ಯುವತಿಯೊಬ್ಬಳು ಇಟಲಿಯ ಪತ್ರಿಕೆಯೊಂದಕ್ಕೆ ಹೇಳುವ ಮೂಲಕ ಜಗತ್ತಿನ ಗಮನ ಸೆಳೆದಿದ್ದಾಳೆ. "ದಿನದ 24 ಗಂಟೆಯೂ ಒಬ್ಬರಾದ ಮೇಲೆ ಒಬ್ಬರಂತೆ ಹೆಂಗಳೆಯರ ಮೇಲೆ ಎರಗುವ ರಾಕ್ಷಸರು ಅವರು. ಇಂತಹ ರಾಕ್ಷಸೀ ಕೃತ್ಯಕ್ಕೆ ಸಾಕ್ಷಿಯಾಗುವ 'ಹಾರರ್ ರೂಮ್' ಗಳು ಅಲ್ಲಿವೆ. ನಾವಿಲ್ಲಿ 'ಸೆಕ್ಸ್ ಗುಲಾಮ' ರಾಗಿದ್ದೇವೆ," ಎಂದು ಮಾಯಾತ್ ಎಂಬ ಯುವತಿ ತೋಡಿಕೊಳ್ಳುತ್ತಾಳೆ. "ಈ ಅವಮಾನದ ಬದುಕು ಸಾಕೆನಿಸಿದೆ. ಸಾಯಬೇಕೆನಿಸುತ್ತಿದೆ. ಆದರೆ ಮತ್ತೊಂದು ಮನಸ್ಸು, ಸಾಯುವ ಮುನ್ನ ಕುರ್ದಿಸ್ಥಾನದಲ್ಲಿ ನಿರಾಶ್ರಿತರಾಗಿರುವ ತಂದೆ - ತಾಯಿಯನ್ನು ಒಮ್ಮೆ ಅಪ್ಪಿಕೊಳ್ಳಬೇಕೆನಿಸುತ್ತಿದೆ ಎನ್ನುತ್ತಾಳೆ ಯುವತಿ ಮಾಯಾತ್.

(ವಿಜಯ ಕರ್ನಾಟಕ 11-9-2014)

## ಮಹಿಳೆಯ ಕೈಲಿ ಸತ್ತರೆ 72 ಸ್ವರ್ಗ ಕನ್ಯೆಯರು ಸಿಗಲ್ಲ !

ವಾಷಿಂಗ್ಟನ್, ಸೆ. 22: ಮಧ್ಯ ಏಶ್ಯಾ ಪ್ರಾಂತದಲ್ಲಿ ಅಟ್ಟಹಾಸ ಮೆರೆಯುತ್ತಿರುವ ಐಸಿಸ್ (ಇಸ್ಲಾಮಿಕ್ ಸ್ಟೇಟ್) ಉಗ್ರರಿಗೆ ಈಗ ಹೆಂಗಸರ ಭಯ ಶುರುವಾಗಿದೆ. ಒಂದು ವೇಳೆ ಹೋರಾಡುವಾಗ ಮಹಿಳೆಯರ ಕೈಲಿ ಹತರಾದರೆ, ತಮಗೆ ಸ್ವರ್ಗದಲ್ಲಿ 72 ಕನ್ಯೆಯರೊಂದಿಗೆ ವಾಸಿಸುವ ಅವಕಾಶ ತಪ್ಪಿಹೋಗಲಿದೆ ಎಂಬ ಭಯಕ್ಕೆ ಒಳಗಾಗಿದ್ದಾರೆ. ಹೀಗಾಗಿ ಮಹಿಳೆಯರೊಂದಿಗೆ ಹೋರಾಟಕ್ಕಿಳಿಯಲು ಅಂಜುತ್ತಿದ್ದಾರಂತೆ.

ಇದರ ಲಾಭ ಪಡೆದುಕೊಂಡಿರುವ ಐಸಿಸ್ ವಿರೋಧಿ ಕುರ್ದಿಶ್ ಭದ್ರತಾ ಪಡೆ ಐಸಿಸ್ ಉಗ್ರರ ವಿರುದ್ಧದ ಹೋರಾಟಕ್ಕೆ ಹೆಚ್ಚು ಹೆಚ್ಚು ಮಹಿಳಾ ಯೋಧರನ್ನೇ ನಿಯೋಜಿಸಿಕೊಳ್ಳುತ್ತಿದೆ. ಇರಾಕ್ ಮತ್ತು ಸಿರಿಯಾದಲ್ಲಿ ಕರ್ದಿಶ್ ಪಡೆಯಲ್ಲಿ ಮಹಿಳಾ ಯೋಧರು ಐಸಿಸ್ ವಿರುದ್ಧ ದೀರ್ಘಯುದ್ಧವನ್ನು ಕೈಗೊಂಡಿದ್ದಾರೆ. ಮಹಿಳಾ ಯೋಧರಿಗೆ ತರಬೇತಿ ನೀಡಿ ಶಸ್ತ್ರಾಸ್ತ್ರ ಬಳಸುವುದು ಹೇಗೆ, ರಾಕೆಟ್ ಉಡಾಯಿಸುವುದು ಹೇಗೆ ಎಂಬುದನ್ನು ಹೇಳಿಕೊಡಲಾಗುತ್ತಿದೆಯಂತೆ.

(ಉದಯವಾಣಿ 23-9-2014)

## ದೇವರು ಪ್ರಪಂಚದ ಸೃಷ್ಟಿಕರ್ತನಲ್ಲ : ಪೋಪ್

ಲಂಡನ್, ಅ.28: ವಿಕಸನ ವಾದ ಮತ್ತು ಬಿಗ್ ಬ್ಯಾಂಗ್ ಸಿದ್ಧಾಂತಗಳು ಸತ್ಯ ಎಂದು ವೈಜ್ಞಾನಿಕವಾಗಿ ಸಾಬೀತಾಗಿವೆ ಮತ್ತು ದೇವರೇ ಈ ಪ್ರಪಂಚ ಸೃಷ್ಟಿಸಿದ ಎಂದು ಹೇಳಲು ದೇವರು ಮಂತ್ರದಂಡ ಹಿಡಿದಿರುವ ಮಾಂತ್ರಿಕನಲ್ಲ ಎಂದು ಪೋಪ್ ಫ್ರಾನ್ಸಿಸ್ ಹೇಳಿದ್ದಾರೆ.

ಪಾಂಟಿಫಿಕಲ್ ಅಕಾಡೆಮಿ ಆಫ್ ಸೈನ್ಸ್‌ನಲ್ಲಿ ಪರಿಣತರೊಂದಿಗೆ ಪ್ರಪಂಚದ ಉಗಮದ ಕುರಿತು ಮಾತನಾಡಿದ ಅವರು ಸುಳ್ಳು ಸಿದ್ಧಾಂತಗಳನ್ನು ಕೊನೆಗಾಣಿಸಬೇಕು ಎಂದು ಹೇಳಿದರು. ಸೃಷ್ಟಿಕರ್ತನ ಇರುವಿಕೆ ಎಂಬುದು ಅವೈಜ್ಞಾನಿಕ ಮತ್ತು ಈ ಎರಡೂ ವೈಜ್ಞಾನಿಕ ಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿವೆ ಎಂದರು.

ದೇವರೇ ಉಗಮಕ್ಕೆ ಕಾರಣಕರ್ತ ಎಂಬುದು ತಪ್ಪು ತಿಳಿವಳಿಕೆ ಎಂದು ಅವರು ಹೇಳಿದರು. ಪ್ರಪಂಚದ ಉಗಮವನ್ನು ತಿಳಿದುಕೊಳ್ಳಲು ನಾವು ಬಿಗ್ ಬ್ಯಾಂಗ್ ಸಿದ್ಧಾಂತವನ್ನು ಅವಲಂಬಿಸಿದ್ದೇವೆ. ಸೃಷ್ಟಿ ನಿಯಮ ಕುರಿತ ದೈವಿಕ ಸಿದ್ಧಾಂತಗಳು ಕೇವಲ ಕಾಲ್ಪನಿಕ ಎಂದು ಅವರು ತಿಳಿಸಿದರು.

(ಉದಯವಾಣಿ 29- 10-2014)

## ಯುದ್ಧಾಪರಾಧ: ಜಮಾತ್ ಮುಖ್ಯಸ್ಥನಿಗೆ ಗಲ್ಲು

ಢಾಕಾ: ಪಾಕಿಸ್ತಾನದೊಂದಿಗಿನ 1971ರ ಯುದ್ಧದ ಸಂದರ್ಭದಲ್ಲಿ ಸಹಸ್ರಾರು ಜನರ ಹತ್ಯೆಯಲ್ಲಿ ಶಾಮೀಲಾದ ಆರೋಪಕ್ಕೆ ಗುರಿಯಾಗಿದ್ದ ಬಾಂಗ್ಲಾದೇಶದ ಮೂಲಭೂತವಾದಿ ಸಂಘಟನೆಯಾಗಿರುವ ಜಮಾತೆ ಇಸ್ಲಾಮೀನ ಮುಖ್ಯಸ್ಥ ಮತೀವುರ್ ರಹ್ಮಾನ್ ನಿಜಾಮಿ ವಿರುದ್ಧದ ಆರೋಪವನ್ನು ಎತ್ತಿಹಿಡಿದಿರುವ ವಿಶೇಷ ನ್ಯಾಯಮಂಡಳಿ ಆತನಿಗೆ ಗಲ್ಲುಶಿಕ್ಷೆ ವಿಧಿಸಿದೆ.

(ಉದಯವಾಣಿ 30-10-2014)

# ಓದಿದ್ದು

## ಮುಸ್ಲಿಂ ಹುಡುಗಿ ವಿವಾಹ ಸಿಂಧು: ಹೈಕೋರ್ಟ್

ಅಹಮದಾಬಾದ್: ಮುಸ್ಲಿಂ ವೈಯಕ್ತಿಕ ಕಾಯ್ದೆಯನುಸಾರ ಮುಸ್ಲಿಂ ಹುಡುಗಿಯೊಬ್ಬಳು ಋತುಮತಿಯಾದಾಗ ಅಥವಾ 15ನೇ ವಯಸ್ಸನ್ನು ಪೂರ್ಣಗೊಳಿಸಿದಾಗ ವಿವಾಹವಾಗಬಹುದೆಂದು ಗುಜರಾತ್ ಹೈಕೋರ್ಟ್ ಹೇಳಿದೆ. ತನ್ನ ಸಮುದಾಯದ 17ರ ಹರೆಯದ ಹುಡುಗಿಯೊಬ್ಬಳನ್ನು ವಿವಾಹವಾದ ಮುಸ್ಲಿಂ ಯುವಕನ ವಿರುದ್ಧ ಬಾಲ್ಯ ವಿವಾಹ ಕಾಯ್ದೆಯಡಿ ಕಾನೂನು ಕ್ರಮಗಳನ್ನು ರದ್ದುಗೊಳಿಸಿ ಜಸ್ಟಿಸ್ ಜೆ.ಬಿ. ಪರ್ದಿವಾಲಾ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು.

(ಉದಯವಾಣಿ 6-12-2014)

## ತಾಜ್‌ಮಹಲ್ ಪ್ರಾಚೀನ ದೇವಾಲಯದ ಭಾಗ !

ಬಹ್ರೇಚ್, ಡಿ. 7: ತಾಜ್‌ಮಹಲ್ ಅನ್ನು ಸುನ್ನಿ ವಕ್ ಮಂಡಳಿಗೊಪ್ಪಿಸಬೇಕೆಂದು ಸಮಾಜವಾದಿ ಪಕ್ಷದ ನಾಯಕ ಅಜಂಖಾನ್ ನೀಡಿದ್ದ ವಿವಾದಾತ್ಮಕ ಹೇಳಿಕೆ ತಣ್ಣಗಾಗುವ ಮೊದಲೇ ಉ. ಪ್ರದೇಶದ ಬಿಜೆಪಿ ಮುಖ್ಯಸ್ಥ ಲಕ್ಷ್ಮೀಕಾಂತ್ ಬಾಜ್‌ಪಾಯ್, 'ತಾಜ್‌ಮಹಲ್' ಪ್ರಾಚೀನ ದೇವಾಲಯದ ಭಾಗ ಎನ್ನುವ ಮೂಲಕ, ಅದನ್ನು ಹಿಂದುಗಳ ಸ್ವತ್ತು ಎಂದು ಪ್ರತಿಪಾದಿಸಿದ್ದಾರೆ. ಮೊಗಲ್‌ದೊರೆ ಶಹಜಹಾನ್, ತಾಜ್‌ಮಹಲ್ ನಿರ್ಮಾಣಕ್ಕಾಗಿ 'ತೇಜೋ ಮಹಾಲಯ ದೇವಸ್ಥಾನ'ದ ಭಾಗವನ್ನು ರಾಜ ಜೈಸಿಂಗ್‌ರಿಂದ ಖರೀದಿಸಿದ್ದ. ಇದನ್ನು ನಿರೂಪಿಸಲು ಸಂಬಂಧಪಟ್ಟ ದಾಖಲೆಗಳು ಇಂದಿಗೂ ಸುರಕ್ಷಿತವಾಗಿವೆ ಎಂದಿದ್ದಾರೆ.

(ಉದಯವಾಣಿ 8-12-2014)

## 10ಕ್ಕಿಂತ ಹೆಚ್ಚು ಮಕ್ಕಳಿರುವ ಹಿಂದೂ ದಂಪತಿಗೆ ಬಹುಮಾನ

ಲಕ್ನೋ, ಅ. 26: ಹಿಂದೂಗಳು ಸಂತಾನ ನಿಯಂತ್ರಣಕ್ಕೆ ಮುಂದಾಗುತ್ತಿರುವುದನ್ನು ತಡೆಯಲು ಶಿವಸೇನೆಯ ಉತ್ತರಪ್ರದೇಶ ಘಟಕ ಮುಂದಾಗಿದೆ. 10 ಅಥವಾ ಅದಕ್ಕಿಂತ ಹೆಚ್ಚಿನ ಮಕ್ಕಳನ್ನು ಹೊಂದಿದ ಹಿಂದು ದಂಪತಿಗೆ ತಲಾ 21,000 ರೂ. ಬಹುಮಾನ ನೀಡುವುದಾಗಿ ಅದು ಘೋಷಿಸಿದೆ. ಅಲ್ಲದೆ, ಈ ಕಾರ್ಯಕ್ರಮ ಇತರ ಸಮುದಾಯದ ಪ್ರಾಬಲ್ಯ ತಡೆಯುವ ಯತ್ನವೂ ಹೌದು ಎಂದು ಹೇಳಿದೆ.

ಜತೆಗೆ ಹಿಂದೂಗಳಿಗೆ ಕುಟುಂಬ ಯೋಜನೆಯನ್ನು ಜಾರಿಗೊಳಿಸಿರುವುದನ್ನು ವಿರೋಧಿಸಿ ನ.1ರಂದು ಶಿವಸೇನೆ ಪ್ರತಿಭಟನೆ ನಡೆಸಲಿದೆ. ಅಂದು ರಾಜ್ಯದಾದ್ಯಂತ ಸರಕಾರಿ ಆರೋಗ್ಯ ಕೇಂದ್ರಗಳನ್ನು ಮುಚ್ಚುವಂತೆ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಲಿದೆ.

ಹಿಂದೂಗಳು ಮಾತ್ರವೇ ಜನಸಂಖ್ಯೆಯನ್ನು ನಿಯಂತ್ರಿಸಲು ಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ಇತರ ಕೋಮಿನವರು ಈ ನಿಯಮವನ್ನು ಪಾಲಿಸುತ್ತಿಲ್ಲ ಎಂಬುದು ಶಿವಸೇನೆ ಆರೋಪ.

(ಉದಯವಾಣಿ 27-10-2014)

## ಐಸಿಸ್‌ನಿಂದ 150 ಸ್ತ್ರೀಯರ ಹತ್ಯೆ

ಬಾಗ್ದಾದ್: ಪಾಕಿಸ್ತಾನದಲ್ಲಿ ತಾಲಿಬಾನ್ ಉಗ್ರರು 130 ಮಕ್ಕಳನ್ನು ಹತ್ಯೆ ಮಾಡಿದ ಭೀಕರ ಘಟನೆಯ ಬೆನ್ನಲ್ಲೇ, ಅತ್ತ ಇರಾಕ್‌ನಲ್ಲಿ ಐಸಿಸ್ ಉಗ್ರರು 150 ಮಹಿಳೆಯರ ಮಾರಣಹೋಮ ನಡೆಸಿರುವ ಘಟನೆ ನಡೆದಿದೆ. ಇರಾಕ್‌ನ ಪಶ್ಚಿಮ ಭಾಗದಲ್ಲಿನ ಅಲ್ ಅನ್ಬರ್ ಪ್ರಾಂತ್ಯದಲ್ಲಿ ಬಲವಾಗಿ ಬೇರುಬಿಟ್ಟಿರುವ ಐಸಿಸ್ ಉಗ್ರರು ಈ ಹೇಯ ಕೃತ್ಯವೆಸಗಿದ್ದಾರೆ. ತಮ್ಮ ಸಂಘಟನೆಯ ಸದಸ್ಯರನ್ನು ಮದುವೆಯಾಗಲು ನಿರಾಕರಿಸಿದ ಮಹಿಳೆಯರನ್ನು ಹತ್ಯೆಮಾಡಿರುವ ಉಗ್ರರು, ಬಳಿಕ ಅವರನ್ನು ಸಾಮೂಹಿಕವಾಗಿ ಸಮಾಧಿ ಮಾಡಿದ್ದಾರೆ ಎಂದು ಇರಾಕ್‌ನ ಮಾನವ ಹಕ್ಕು ಸಚಿವಾಲಯ ವರದಿ ಬಿಡುಗಡೆ ಮಾಡಿದೆ.

(ಉದಯವಾಣಿ 18-12-2014)

## ಬಾಂಗ್ಲಾ : ಸಮರಾಪರಾಧಿಗೆ ಮರಣದಂಡನೆ

ಢಾಕಾ, ನ.2: ಬಾಂಗ್ಲಾದೇಶದಲ್ಲಿ 1971 ರಲ್ಲಿ ನಡೆದ ವಿಮೋಚನಾ ಸಮರದ ವೇಳೆ ಮಾನವತೆಯ ವಿರುದ್ಧ ನಡೆದಿದೆಯೆನ್ನಲಾಗಿರುವ ಅಪರಾಧಗಳಿಗಾಗಿ ಹಿರಿಯ ಜಮಾಅತ್ ಮುಖಂಡ ಮೀರ್ ಖಾಸಿಂ ಅಲಿಯವರಿಗೆ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ (ಐಟಿಸಿ)ಯು ರವಿವಾರ ಮರಣದಂಡನೆ ಘೋಷಿಸಿದೆ.

ಜಮಾಅತೆ ಇಸ್ಲಾಮಿಯ ಹಿರಿಯ ಬಂಡವಾಳಗಾರನಾಗಿದ್ದ ಮೀರ್ ಖಾಸಿಂ, ಜಮಾಅತ್‌ನ ವಿದ್ಯಾರ್ಥಿ ವಿಭಾಗದ ಚಿತ್ತಗಾಂಗ್ ಘಟಕದ ಮುಖ್ಯಸ್ಥ ಹಾಗೂ ಕುಖ್ಯಾತ ಅಲ್ ಬದರ್ ಬಂಡುಕೋರ ಸಂಘಟನೆಯ ಮುಖಂಡರೂ ಆಗಿದ್ದರು ಎಂದು ವರದಿ ತಿಳಿಸಿದೆ.

ಖಾಸಿಂರನ್ನು 2013 ರಲ್ಲಿ ಬಂಧಿಸಲಾಗಿದ್ದು, ವಿಚಾರಣೆಯ ವೇಳೆ ಖಾಸಿಂಪುರ್ ಜೈಲಿನಲ್ಲಿ ಇರಿಸಲಾಗಿತ್ತು.

2010ರಲ್ಲಿ ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಸರಕಾರವು ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ (ಐಸಿಟಿ)ಯನ್ನು ಸ್ಥಾಪಿಸಿದ ಬಳಿಕ ಸಮರಾಪರಾಧಗಳಿಗಾಗಿ ಮರಣದಂಡನೆ ವಿಧಿಸಲ್ಪಟ್ಟಿರುವ ಹನ್ನೊಂದನೆಯ ವ್ಯಕ್ತಿ ಇವರಾಗಿದ್ದಾರೆ. ಬಾಂಗ್ಲಾ ಸ್ವಾತಂತ್ರ್ಯ ಸಮರದ ವೇಳೆ 30 ಲಕ್ಷಕ್ಕೂ ಅಧಿಕ ಜನರು ಪ್ರಾಣ ಕಳೆದುಕೊಂಡಿದ್ದರು.

(ವಾರ್ತಾಭಾರತಿ 3-11-2014)

**"LOVE FOR ALL HATRED FOR NONE"**

**"ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ"**

# ‘Jesus married Mary Magdalene, had kids’

**NEW REVELATION**

**Ben Tufft**

Jesus married Mary Magdalene and had children, according to a manuscript almost 1,500 years old unearthed at the British Library.

The so-called "Lost Gospel," which has been translated from Ara - maic, allegedly reveals the startling new allegations, according to *The Sunday Times*. Professor Barrie Wilson and writer Simcha Jacobovic spent months translating the text, which they claim states Jesus had two children and the original Virgin Mary was Jesus's wife and not his mother.

Many experts have downplayed the biblical figure's historical importance but, according to the translators of the new gospel, she is of much greater significance than previously thought.

"The Lost Gospel" is not the First to claim that Jesus Married mary Magdalene. Both Nikos Kazantzakis in his 1953 book *The Last Temptation of Christ* and Dan Brown in *The Da Vinci Code* made the same allegation.

Further revelations from the book, including the names of Jesus's children, will be released on Wednesday. THE INDEPENDENT

**(THE TIMES OF INDIA 11-11-2014)**

---

## ಮನೆ ವೈದ್ಯ

## ಬಹುಉಪಯೋಗಿ ಶುಂಠಿ

ಸಂಧಿವಾತ ರೋಗದಿಂದ ಬಳಲುವವರಲ್ಲಿ ಕಂಡು ಬರುವ ಸಂಧಿನೋವಿಗೆ ಶುಂಠಿಯನ್ನು ಅರೆದು ಬಿಸಿಮಾಡಿ ಲೇಪಿಸುವದರಿಂದ ಶಮನವಾಗುವುದು.

* ಊಟದಲ್ಲಿ ರುಚಿ ಬರದಿದ್ದಾಗ ಊಟದ ಮೊದಲು ಶುಂಠಿ ಮತ್ತು ಉಪ್ಪನ್ನು ಸೇರಿಸಿ ಸೇವಿಸಿ.
* ಶುಂಠಿಯ ಸಣ್ಣ ಸಣ್ಣ ಚೂರುಗಳನ್ನು ನಿಂಬೆಹಣ್ಣಿನ ರಸದಲ್ಲಿ ಎರಡು ಗಂಟೆ ಮುಳುಗಿಸಿಡಬೇಕು. ನಂತರ ಈ ಚೂರುಗಳಿಗೆ ಉಪ್ಪನ್ನು ಸವರಿ ಒಣಗಿಸಿ ಇಂಥ ಶುಂಠಿ ಚೂರನ್ನು ಬಾಯಲ್ಲಿಟ್ಟುಕೊಂಡು ರಸವನ್ನು ಸೇವಿಸುತ್ತಾ ಬಂದರೆ ಊಟದಲ್ಲಿ ರುಚಿ ಬರುತ್ತದೆ. ಹಸಿವೆ ಹೆಚ್ಚುತ್ತದೆ.
* ಜ್ವರ ಬಂದಾಗ ಹಸಿಶುಂಠಿ ರಸವನ್ನು ಅಲ್ಪ ಪ್ರಮಾಣದಲ್ಲಿ ಸೇವಿಸಬೇಕು.
* ಶುಂಠಿ, ಹವೀಜ, ಜೀರಿಗೆ, ಅಜಿವಾನ ಇವನ್ನು ಸಮ ಪ್ರಮಾಣದಲ್ಲಿ ಸೇರಿಸಿ ಪುಡಿ ಮಾಡಿಟ್ಟುಕೊಂಡು ಪ್ರತಿದಿನ ಕಷಾಯ ರೂಪದಲ್ಲಿ ಸೇವಿಸುವದರಿಂದ ಅಜೀರ್ಣ ದೂರವಾಗುವದು. ಪಚನ ಶಕ್ತಿ ಹೆಚ್ಚುವದು.
* ಶುಂಠಿ ಸೇವನೆ ಪ್ರಸವೋತ್ತರ ದೌರ್ಬಲ್ಯವನ್ನು ಹೋಗಲಾಡಿಸುತ್ತದೆ.

ಡಾ. ಎಂ. ಜಯಲಕ್ಷ್ಮೀ

(ಸಾಪ್ತಾಹಿಕ ವಿಜಯ)

## ಅಹ್ಮದಿಯತ್

*ನಜ್ಮತುನ್ನಿಸಾ ಲೈರುಘ್

ಅಹ್ಮದಿಯತ್ ನಮಗೆ ಲಭಿಸದೆ ಇರುತ್ತಿದ್ದರೆ
ನಮಗೆ ಸಮಾಧಾನ ಏನು ಎಂದು ಅರಿಯುತ್ತಿರಲಿಲ್ಲ.

ಜೀವನದಲ್ಲಿ ನಮಗೆ ಎಲ್ಲವೂ ಲಭಿಸುತ್ತಿದ್ದರೂ
ನಮಗೆ ಜೀವವುಳ್ಳ ಅಲ್ಲಾಹು ಲಭಿಸುತ್ತಿರಲಿಲ್ಲ.

ಜೀವನದ ಸಫಲೀಕರಣ ನಮಗೆ ಸಿಗುತ್ತಿರಲಿಲ್ಲ ಎಂದೆಂದಿಗೂ
ನಮಗೆ ಮಸೀಹ್ ಈ ಸತ್ಯವನ್ನು ಪರಿಚಯ ಮಾಡದಿದ್ದರೆ.

ಕಷ್ಟಗಳು, ವಿರೋಧಗಳು ನಮಗೆ ಒಂದೇ ಸಮನೇ ಎರಗಿದರೂ
ನಮಗೆ ಸತ್ಯದ ಹಾದಿಯಲ್ಲಿ ನಡೆಯಲು ಹೃದಯ ಅಗ್ರಹಿಸಿತು.

ನಿಶ್ಚಯವಾಗಿ, ಶಾಶ್ವತವಾಗಿ ನಮಗೆ ಈ ಲೋಕದಿಂದ ಹೋಗುವ ದಿನ
ನಮಗೆ ಆ ದಿನಕ್ಕೆ ಸ್ವಲ್ಪ ದಿನಗಳು ಮಾತ್ರ ಬಾಕಿ ಇವೆ.

ಯಾರಿಗೆ ಗೊತ್ತು ನಮಗೆ ಆ ದಿನ ಯಾವಾಗ ಬರುತ್ತದೆ ಎಂದು
ನಮಗೆ ಸತ್ಯವಾಗಿ ಉಳ್ಳದ್ದು ಆಖಿರ್‌ತ್‌ನ ಆ ದಿನ ಮಾತ್ರ

ಆ ದಿನದ ಮೊದಲು ನಮಗೆ ಜೀವವುಳ್ಳ ಅಲ್ಲಾಹನನ್ನು ಲಭಿಸಿದಾಗ,
ನಮಗೆ ನಮ್ಮ ಜೀವನದ ಉದ್ದೇಶ ಸಫಲಗೊಂಡಿತು.

**ಇನ್‌ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

## ವಾರ್ತೆಗಳು

# ಅತಿ ಕ್ರೂರ ಮತ್ತು ಪೈಶಾಚಿಕವಾದ ಆಕ್ರಮಣ !! ಹಝ್ರತ್ ಖಲೀಫರ ಖಂಡನೆ

ಪಾಕಿಸ್ತಾನದ ಪಂಜಾಬ್‌ಪ್ರಾಂತ್ಯದ ಗುಜ್ರಾನ್‌ವಾಲದಲ್ಲಿ ಜುಲಾಯಿ 27 ರಂದು ಓರ್ವ ಅಹ್ಮದೀ ಸ್ತ್ರೀ ಮತ್ತು ಅವರ ಇಬ್ಬರು ಚಿಕ್ಕ ಮೊಮ್ಮಕ್ಕಳನ್ನು (8 ತಿಂಗಳು ಮತ್ತು 6 ವರ್ಷ ಪ್ರಾಯದ ಹೆಣ್ಮಕ್ಕಳು) ಮತ ಉಗ್ರವಾದಿಗಳು ಮನೆಗೆ ಬೆಂಕಿಯಿಟ್ಟು ಹುತಾತ್ಮರನ್ನಾಗಿ ಮಾಡಿದರು. ಅತಿ ಕ್ರೂರವಾದ ಪೈಶಾಚಿಕ ರೀತಿಯಲ್ಲಿ ನಿರಪರಾಧಿಗಳೂ ನಿಸ್ಸಹಾಯಿಗಳೂ ಆದ ಮನುಷ್ಯರನ್ನು ಸಜೀವವಾಗಿ ಬೆಂಕಿಯಿಟ್ಟು ಕೊಲ್ಲಲಾಯಿತು. ಅದಕ್ಕಿಂತ ಭಯಾನಕವಾದುದೇನೆಂದರೆ, ಇದು ಅವರು ಮಾಡುವುದು ಪರಿಶುದ್ಧ ಇಸ್ಲಾಂ ಧರ್ಮದ ನಾಮದಲ್ಲಿ ಎಂಬುದಾಗಿದೆ. ಪಾಕಿಸ್ತಾನದಲ್ಲಿ ಸರಕಾರ ಮತ್ತು ಮತ ಉಗ್ರವಾದಿಗಳ ಬೆಂಬಲದೊಂದಿಗೆ ನಡೆಯುತ್ತಿರುವ ಅಹ್ಮದಿಯಾ ಪೀಡನ ಪರಂಪರೆಯ ಒಂದು ಘಟನೆಯಾಗಿದೆ ಇದು. ಒಂದು ಕಡೆ ಅಲ್ಲಾಹು ಆ ದೇಶವನ್ನು ಸ್ವಂತ ಜನತೆಯಿಂದಲೇ ಶಿಕ್ಷಿಸುತ್ತಿರುವುದು ನಾವು ಕಾಣುತ್ತಿದ್ದೇವೆ. ಅತ್ಯಂತ ಹೃದಯ ವಿದ್ರಾವಕವಾದ ಈ ಕಿರಾತ ಕೃತ್ಯದ ವಿರುದ್ಧ ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಹೊರಡಿಸಿದ ಪತ್ರಿಕಾ ಪ್ರಕಟನೆ ಹೀಗಿದೆ:

“ಈ ಆಕ್ರಮಣ ಅತಿಕ್ರೂರ ಮತ್ತು ಪೈಶಾಚಿಕವಾಗಿದೆ. ತಮ್ಮ ಮನೆಗಳಲ್ಲಿ ಶಾಂತವಾಗಿ ವಾಸಿಸುವ ನಿರಪರಾಧಿಗಳನ್ನು ಆಕ್ರಮಿಸಿ ಕೊಲೆಮಾಡಲಾಗಿದೆ. ಅಹ್ಮದಿಯಾ ಜಮಾಅತಿನ ಒಬ್ಬ ಸದಸ್ಯ ಪ್ರಕೋಪನ ಉಂಟುಮಾಡಿದ ಕಾರಣದಿಂದ ಈ ಆಕ್ರಮಣ ನಡೆದಿದೆ ಎಂದು ಅವರು ಸುಳ್ಳು ಪ್ರಚಾರ ಮಾಡುತ್ತಾರೆ. ಈ ಆರೋಪ ಸಂಪೂರ್ಣ ಸುಳ್ಳು ಮತ್ತು ನಿರಾಧಾರವಾಗಿದೆ. ಈ ಪಾತಕ ಮಾಡಿದವರು ಯಥಾರ್ಥದಲ್ಲಿ ಒಬ್ಬ ವ್ಯಕ್ತಿಯಿಂದ ಪ್ರಕೋಪಿತರಾಗಿದ್ದರೆ, ಆತನನ್ನು ಬಂಧಿಸಲಿಕ್ಕೆ ಅವರು ಅಗತ್ಯಪಡಿಸಬೇಕಿತ್ತು. ಅದಕ್ಕೆ ಬದಲು ಅವರು ಒಬ್ಬ ಮುದಿ ಮಹಿಳೆಯನ್ನೂ ಅವರ ಇಬ್ಬರು ಮೊಮ್ಮಕ್ಕಳನ್ನೂ ಸಜೀವ ಬೆಂಕಿಯಿಟ್ಟು ಕೊಂದಿದ್ದಾರೆ. ಸತ್ಯದಲ್ಲಿ, ಇದು ಯಾವ ಪ್ರಕೋಪನವಾಗಲಿ ಇಲ್ಲದೆ ನಡೆಸಿದ ಮಾನವೀಯತೆಯ ಎಲ್ಲ ಸೀಮೆಗಳನ್ನು ಉಲ್ಲಂಘಿಸುವ ರೀತಿಯಲ್ಲಿ ಇಬ್ಬರು ಮಕ್ಕಳು ಸಹಿತ ಮೂವರ ಮರಣದಲ್ಲಿ ಕೊನೆಗೊಂಡ ಒಂದು ಆಕ್ರಮಣವಾಗಿತ್ತು. ಈ ಆಕ್ರಮಣ ನಡೆಯುವಾಗ ಸ್ಥಳೀಯ ಪೋಲೀಸರು ಯಾವ ಕ್ರಮವನ್ನೂ ಕೈಗೊಳ್ಳದೆ ನೋಡಿ ನಿಲ್ಲುತ್ತಿದ್ದರು. ಪಾಕಿಸ್ತಾನಿನ ಅಧಿಕಾರಿಗಳು ಅಹ್ಮದಿಯಾ ಪೀಡಕರಿಗೆ ನೆರವೀಯುತ್ತಾರೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆಯಾಗಿದೆ.

“ಒಂದು ವಿಷಯವನ್ನು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಇತರರು ಪ್ರತಿಭಟಿಸುವ ರೀತಿಯಲ್ಲಿ ನಾವು ಪ್ರತಿಭಟಿಸಿ ಬೀದಿಗೆ ಇಳಿಯುವುದಿಲ್ಲ. ಈಗ ನಾವು ಎದುರಿಸುತ್ತಿರುವ ಎಲ್ಲ ವಿಧ ದೌರ್ಜನ್ಯಗಳ ವಿರುದ್ಧ, ಅಲ್ಲಾಹನ ಸನ್ನಿಧಿಯಲ್ಲಿ ಶಿರಬಾಗಿ ನಾವು ಸಹಾಯಕ್ಕಾಗಿ ಮತ್ತು ಅವನ ಕಾರುಣ್ಯಕ್ಕಾಗಿ ಅರ್ಥಿಸುತ್ತೇವೆ. ನಮ್ಮ ಪ್ರತಿಕ್ರಿಯೆ ಸದಾ ಹೀಗೆಯೇ ಇರುವುದು.

“ಕುಟಿಲವಾದ ಈ ಆಕ್ರಮಣ ನಡೆಸಿದ್ದು ಇಸ್ಲಾಂ ಧರ್ಮದ ಹೆಸರಿನಲ್ಲಾಗಿದೆ. ವಾಸ್ತವದಲ್ಲಿ, ಇಸ್ಲಾಮಿಗಾಗಲೀ ಅದರ ಅಧ್ಯಾಪನೆಗಳಿಗಾಗಲೀ ಈ ಆಕ್ರಮಣಗಳೊಂದಿಗೆ ಏನೂ ಸಂಬಂಧವಿಲ್ಲ. ಈ ರೀತಿಯ ದಯಾರಹಿತ ಆಕ್ರಮಣ ಮಾನವೀಯತೆಗೆ ಅತ್ಯಂತ ವಿರುದ್ಧವಾದ ವರ್ತನೆಯಾಗಿದೆ. ಈ ರೀತಿಯ ಮೃಗೀಯ ಆಕ್ರಮಣಗಳು ಪವಿತ್ರ ಇಸ್ಲಾಮಿನ ಮುಖಕ್ಕೆ ಮಸಿಬಳಿಯುವುದು ಹೊರತು ಇನ್ನೇನೂ ಅಲ್ಲ. ಕೊಲ್ಲುವುದು ಮತ್ತು ಸಂಹಾರಾತ್ಮಕವಾಗಿ ವಿರೋಧಿಸುವುದು ಇಸ್ಲಾಮಿನ ರೀತಿಯಲ್ಲ. ಇದು ದೇವ ವಿಶ್ವಾಸಿಗಳಲ್ಲದವರ ರೀತಿಯಾಗಿದೆ. ಅಂದರೆ, ಅತಿ ಪ್ರಾಥಮಿಕವಾದ ಮಾನವೀಯ ಮೌಲ್ಯಗಳಲ್ಲಿ ಕೂಡ ನಂಬದವರ, ಮಾನ್ಯತೆ ಇಲ್ಲದವರ ವರ್ತನೆ!! ಹುತಾತ್ಮರಾದವರ ಬಂಧುಗಳಿಗೂ ಲೋಕದಲ್ಲೆಡೆ ಇರುವ ಅಹ್ಮದಿಯರಿಗೂ ಅಲ್ಲಾಹು ಸಹನೆ ದಯಪಾಲಿಸಲಿ.”

# ಅಹ್ಮದಿಯಾ ಜಮಾಅತಿನ ಪ್ರಗತಿ

ಯು.ಕೆ. 48ನೇ ಜಾಗತಿಕ ಅಹ್ಮದಿಯಾ ವಾರ್ಷಿಕ ಸಮ್ಮೇಳನದ ದ್ವಿತೀಯ ದಿನದ (ಆಗಸ್ಟ್ 30) 3ನೇ ಅಧಿವೇಶನದಲ್ಲಿ ಅಹ್ಮದಿಯಾ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಕಳೆದ ಒಂದು ವರ್ಷದಲ್ಲಿ ಅಹ್ಮದಿಯಾ ಜಮಾಅತ್ ಗಳಿಸಿದ ಪ್ರಗತಿಯನ್ನು ವಿವರಿಸಿದರು :

* ಬೆಲಿಝ್: (Beliz- ಮಧ್ಯ ಅಮೇರಿಕದಲ್ಲಿ ಕರೀಬಿಯನ್ ತೀರದಲ್ಲಿ ಮೆಕ್ಸಿಕೋ ಮತ್ತು ಗ್ವಾಟ್ವಮಾಲ ಮಧ್ಯೆ), ಯುರುಗ್ವೈ: (Uruguay-ದಕ್ಷಿಣ ಅಮೇರಿಕದ ಆಗ್ನೇಯ ದಿಕ್ಕಿನಲ್ಲಿ ಅಟ್ಲಾಂಟಿಕ್ ಸಮುದ್ರ ತೀರದಲ್ಲಿ, ಬ್ರೆಸಿಲ್ ಮತ್ತು ಅರ್ಜೆಂಟಿನಾ ಮಧ್ಯೆ) ಸೇರಿ 206 ರಾಷ್ಟ್ರಗಳಲ್ಲಿ ಜಮಾಅತ್ ಸ್ಥಾಪಿತವಾಯಿತು.
* ಪಾಕಿಸ್ತಾನದಲ್ಲಿ ಹೊರತುಪಡಿಸಿ 730 ಸ್ಥಳಗಳಲ್ಲಿ ಹೊಸ ಜಮಾಅತ್ ಘಟಕಗಳು.
* 586 ಮಸೀದಿಗಳ ಹೆಚ್ಚಳ. 204 ಮಸೀದಿಗಳನ್ನು ನಾವು ನಿರ್ಮಿಸಿದ್ದು. 382 ಮಸೀದಿಗಳು ಅಹ್ಮಯೇತರ ಮುಸ್ಲಿಮರು ಗುಂಪಾಗಿ ಬೈಅತ್ ಮಾಡಿದುದರಿಂದ ನಮಗೆ ದೊರೆತದ್ದು.
* ರುವಾಂಡದಲ್ಲಿ 2 ಮಸೀದಿಗಳನ್ನು ನಿರ್ಮಿಸಲಾಯಿತು.
* ಅಯರ್ಲೇಂಡ್‌ನಲ್ಲಿ ಮಸೀದಿ ನಿರ್ಮಾಣ ಪೂರ್ಣಗೊಂಡಿತು.
* ನ್ಯೂಝಿಲೇಂಡ್‌ನಲ್ಲಿ ಪ್ರಥಮ ಮಸೀದಿ ಉದ್ಘಾಟಿಸಲ್ಪಟ್ಟಿತು.
* ಬ್ರೆಸಿಲ್ ಮತ್ತು ಜಪಾನಿನಲ್ಲಿ ಮಸೀದಿಗಳು ನಿರ್ಮಾಣ ಹಂತದಲ್ಲಿವೆ.
* 184 ಮಿಶನ್‌ಹೌಸ್‌ಗಳ ಹೆಚ್ಚಳ.
* ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನ್ಯಾಶನಲ್ ದಿನದ 24 ಗಂಟೆಗಳ ಕಾಲ ಪ್ರಸಾರಮಾಡುವ ಇಂಗ್ಲಿಷ್ ಚ್ಯಾನೆಲ್ ಆರಂಭಿಸಲಿಕ್ಕೆ ಸಿದ್ಧತೆ.
* ಅಂತ್ಯತಾಧುನಿಕ ಸಂಯೋಜನೆಯೊಂದಿಗೆ ಎಂ.ಟಿ.ಎ ಇಂಟರ್‌ನ್ಯಾಶನಲ್ ದೃಶ್ಯ ಮಾಧ್ಯಮ ರಂಗದಲ್ಲಿ ಮುನ್ನುಗ್ಗುತ್ತಿದೆ.
* 3442 ವಖ್ಫೆನೌ ಮಕ್ಕಳ ವರ್ಧನೆ. ವಖ್ಫೆನೌ ಯೋಜನೆಯಲ್ಲಿ 54135 ಮಕ್ಕಳಿದ್ದಾರೆ. ಗಂಡು ಮಕ್ಕಳು 33119 ಮತ್ತು ಹೆಣ್ಣು ಮಕ್ಕಳು 21016.
* 12 ಆಫ್ರಿಕನ್ ರಾಷ್ಟ್ರಗಳಲ್ಲಿ 41 ಆಸ್ಪತ್ರೆಗಳೂ ಕ್ಲಿನಿಕ್‌ಗಳೂ ಇವೆ.
* 12 ರಾಷ್ಟ್ರಗಳಲ್ಲಿ 681 ಹೈಯರ್ ಸೆಕೆಂಡರಿ ಸ್ಕೂಲುಗಳೂ ಜೂನಿಯರ್ ಸ್ಕೂಲುಗಳೂ ಇವೆ.
* ಈ ವರ್ಷ ಜಮಾಅತಿಗೆ ಸೇರಿದವರು 5,55,235. ಬೈಅತ್ ರಂಗದಲ್ಲಿ ಮಾಲಿ ಮುಂಚೂಣಿಯಲ್ಲಿ.

## ವಖ್ಫೆನೌ ಇಜ್ತೆಮಾ

ಬೆಂಗಳೂರು: ಕರ್ನಾಟಕ ದಕ್ಷಿಣ ವಲಯದ ವಖ್ಫೆನೌ ಇಜ್ತೆಮಾ ಜೂನ್ 8ರಂದು ಬೆಂಗಳೂರಿನಲ್ಲಿ ಜರಗಿತು. ಬೆಂಗಳೂರು, ಮಂಗಳೂರು, ಶಿವಮೊಗ್ಗ, ಸೋರಬ್, ಸಾಗರ್, ಜಕ್ಕೂರ್ ಮೊದಲಾದ ಜಮಾಅತ್ ಘಟಕಗಳಿಂದ ಸುಮಾರು 300 ಪ್ರತಿನಿಧಿಗಳೂ ಹುದ್ದೇದಾರರೂ ಭಾಗವಹಿಸಿದ್ದರು. ಕೇಂದ್ರ ಪ್ರತಿನಿಧಿಯಾಗಿ ಮೌಲವಿ ಕೆ. ಮುಹಮ್ಮದ್ ಝುಫರುಲ್ಲಾ ಸಾಹೇಬ್ ಉಪಸ್ಥಿತರಿದ್ದರು.

ಜೂನ್ 8ರಂದು (ರವಿವಾರ) ತಹಜ್ಜುದ್ ನಮಾಝ್‌ನಿಂದ ಕಾರ್ಯಕ್ರಮ ಆರಂಭವಾಯಿತು. ಫಜ್ರ್ ನಮಾಝ್, ದರ್ಸ್ ಮತ್ತು ಸಾಮೂಹಿಕ ಖುರ್‌ಆನ್ ಪಠಣ ನಡೆಸಲಾಯಿತು. ವಖ್ಫೆನೌ ಮಕ್ಕಳಿಗೆ ವೈದ್ಯಕೀಯ ಪರಿಶೀಲನೆ ನಡೆಸಲಾಯಿತು.

ಪ್ರಥಮ ಅಧಿವೇಶನದ ಅಧ್ಯಕ್ಷತೆಯನ್ನು ಜನಾಬ್ ಮುಸದ್ದಿಖ್ ಅಹ್ಮದ್ ಸಾಹೇಬ್ (ಅಮೀರ್, ಬೆಂಗಳೂರು) ವಹಿಸಿದರು. ಮುಖ್ಯಾತಿಥಿ ಮೌಲವಿ ಕೆ. ಮುಹಮ್ಮದ್ ಝುಫರುಲ್ಲಾ ಸಾಹೇಬರು ವಖ್ಫೆನೌ ಉದ್ದೇಶ ಲಕ್ಷ್ಯಗಳನ್ನೂ ಮಕ್ಕಳ ಮತ್ತು ತಂದೆತಾಯಂದಿರ ಕರ್ತವ್ಯಗಳನ್ನೂ ವಿವರಿಸಿದರು. ಮೌಲವಿ ಮುಹಮ್ಮದ್ ಕಲೀಂ ಖಾನ್ ಸಾಹೇಬರು ಜೀವಿತಾರ್ಪಣೆಯ ಔಚಿತ್ಯವನ್ನು ವಿವರಿಸಿದರು.

ಖುರ್‌ಆನ್ ಕಂಠಪಾಠ, ನಝ್ಮ್ ಮತ್ತು ಭಾಷಣ ಸ್ಪರ್ಧೆಗಳು ಜರಗಿದವು. ಸೆಮಿನಾರ್ ಮತ್ತು ಮತ್ತು ಪ್ರಶ್ನೋತ್ತರ ಕಾರ್ಯಕ್ರಮಗಳನ್ನೂ ಏರ್ಪಡಿಸಲಾಗಿತ್ತು.

(ವರದಿ: ಸಯ್ಯದ್ ಶರೀಫ್ ಮಜೀದ್, ಸೆಕ್ರೆಟರಿ ವಖ್ಫೆನೌ, ಬೆಂಗಳೂರು)

## ಅಹ್ಮದಿಯಾ ಮುಸ್ಲಿಮ್ ಜಮಾಅತ್ ವತಿಯಿಂದ ಮಳೆಗೆ ಹಾನಿಗೊಳಗಾದ ಮನೆಗಳ ವಾರಸುದಾರರಿಗೆ ಪರಿಹಾರ ವಿತರಣೆ

ಮಡಿಕೇರಿ: ದಿನಾಂಕ 18-10-2014ರಂದು ಮಡಿಕೇರಿಯ ಅಹ್ಮದಿಯಾ ಮುಸ್ಲಿಮ್ ಜಮಾಅತ್ ವತಿಯಿಂದ, ಮಳೆಗಾಳಿಗೆ ತೀವ್ರವಾಗಿ ಹಾನಿಗೊಳಗಾದ ಮನೆಯ ವಾರಸುದಾರರಿಗೆ ಪರಿಹಾರ ವಿತರಿಸಲಾಯಿತು. ಮಳೆಯಿಂದ ಹಾನಿಗೊಂಡ ಮಡಿಕೇರಿ ತ್ಯಾಗರಾಜ ಕಾಲೋನಿ, ಆಜಾದ್ ನಗರ, ಮಲ್ಲಿಕಾರ್ಜುನ ನಗರ, ಚಾಮುಂಡೇಶ್ವರಿ ನಗರ ಮತ್ತು ಕಾಟಕೇರಿಯ ಸುಮಾರು ಹದಿಮೂರು ಜನರಿಗೆ ಜಮಾಅತಿನ ಅಧ್ಯಕ್ಷರಾದ ಎಂ. ಯು. ವಸೀಮ್ ಅಹ್ಮದ್ ಸಾಹೇಬರು ಹಿಲ್ ರಸ್ತೆಯಲ್ಲಿರುವ "ಮಸ್ಜಿದ್ ಬೈತುಲ್ ಹುದಾ" ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂತ್ರಸ್ತರಿಗೆ ಪರಿಹಾರದ ಚೆಕ್ಕನ್ನು ವಿತರಿಸಿದರು. ಪವಿತ್ರ ಖುರ್‌ಆನಿನ ಉಪದೇಶದಂತೆ ಎಲ್ಲ ಜನಾಂಗಗಳ ಮತ್ತು ಗುಂಪುಗಳ ಜನರು ಸರ್ವಸಮಾನರಾಗಿದ್ದಾರೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಉದ್ದೇಶವೇ ಪ್ರೀತಿ ಎಲ್ಲರಲ್ಲೂ ದ್ವೇಷವಿಲ್ಲ ಯಾರಲ್ಲೂ ಎಂದಾಗಿದೆ. ಮನುಷ್ಯ ವರ್ಗದವರೊಡನೆ ಸ್ನೇಹದಿಂದ ವರ್ತಿಸುವುದು ಮತ್ತು ವಿಪತ್ತುಗಳ ಕಾಲದಲ್ಲಿ ಸಹಾಯ ನೀಡುವುದು ಇಸ್ಲಾಮಿನ ಉಪದೇಶವಾಗಿದೆ ಎಂದು ಈ ಸಂದರ್ಭದಲ್ಲಿ ಅವರು ತಿಳಿಸಿದರು.

ಕಾರ್ಯಕ್ರಮದ ಮೊದಲಿಗೆ ಮುಸ್ತಾಕ್ ಅಹ್ಮದ್ ಸಾಹೇಬರಿಂದ ಪವಿತ್ರ ಖುರ್‌ಆನ್ ಪಾರಾಯಣ ಮತ್ತು ಪಿ.ಕೆ. ಜಲೀಲ್ ಸಾಹೇಬರು ಕಾರ್ಯಕ್ರಮದಲ್ಲಿ ಹಾಜರಿದ್ದವರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಉಪಾಧ್ಯಕ್ಷರಾದ ಎಂ. ಎ. ಬಶೀರ್ ಅಹ್ಮದ್ ಸಾಹೇಬರು ಉಪಸ್ಥಿತರಿದ್ದರು. ಜೆ.ಎಂ ಮೊಹಮ್ಮದ್ ಶರೀಫ್ ಸಾಹೇಬರು ನಿರೂಪಣೆ ಮಾಡಿದರು. ಈ ಸಂದರ್ಭದಲ್ಲಿ ಜಮಾಅತಿನ ಹುದ್ದೆದಾರರು ಹಾಗೂ ಸದಸ್ಯರು ಹಾಜರಿದ್ದರು. ಕೊನೆಯಲ್ಲಿ ಪ್ರಕೃತಿ ವಿಪತ್ತುಗಳಿಂದ ಸರ್ವ ಮನುಷ್ಯಕುಲ, ಪ್ರಾಣಿ ಪಕ್ಷಿಗಳನ್ನು ಅಲ್ಲಾಹನು ರಕ್ಷಿಸಲಿ ಎಂದು ಮೌನ ಪ್ರಾರ್ಥನೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

## ನಿಧನ ವಾರ್ತೆಗಳು

### ಖದೀಜಾಬಿ ಸಾಹಿಬ

ಮಡಿಕೇರಿ: ಮರ್ಹೂಮ್ ಕೆ. ಎಸ್. ಉಮರ್ ಸಾಹೇಬರ ಪತ್ನಿ ಖದೀಜಾಬಿ ಸಾಹಿಬ 13-9-2014ರಂದು ತನ್ನ 82ನೇ ಪ್ರಾಯ ದಲ್ಲಿ ನಿಧನ ಹೊಂದಿದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಇವರು 1960ರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದರು. ಮೃತರು 3 ಗಂಡು ಮಕ್ಕಳನ್ನೂ 5 ಹೆಣ್ಣು ಮಕ್ಕಳನ್ನೂ ಅನೇಕ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ.ಅಲ್ಲಾಹು ಮೃತರಿಗೆ ಮಗ್‌ಫಿರತನ್ನೂ ಜನ್ನತನ್ನೂ ನೀಡಲಿ. ಆಮೀನ್.

### ಹಿಬ ತಸ್ಲೀಮ್ ಸಾಹಿಬ

ಮಂಗಳೂರು: ಕೆ. ಅಬ್ದುಲ್ ಕರೀಮ್ ಸಾಹೇಬರ ಪುತ್ರ ಜಪಾನಿನ ಮಿಷಿಮಾ ಎಂಬಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುವ ತಸ್ಲೀಮ್ ಆರೀಫ್ ಅಹ್ಮದ್ ಸಾಹೇಬರ ಪತ್ನಿ ಹಿಬ ತಸ್ಲೀಮ್(ಪ್ರಾಯ 22 ವರ್ಷ) ನವೆಂಬರ್ 23ರಂದು ಬೆಳಗಿನ ಜಾವ ಜಪಾನ್‌ನ ಸಮಯ 4 ಗಂಟೆಗೆ ತೀವ್ರ ಹೃದಯಾಘಾತದಿಂದ ನುಮಾಝು ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್"). ಇವರು ಕಣ್ಣೂರ್ ಜಮಾಅತಿನ ಜನಾಬ್ ರೈಹಾನ್ ಅಹ್ಮದ್ ಸಾಹೇಬರ ಪ್ರಥಮ ಪುತ್ರಿಯಾಗಿದ್ದರು. ಇವರಿಗೆ ತಂದೆ, ತಾಯಿ, ಅಣ್ಣ ಮತ್ತು ತಂಗಿ ಇದ್ದಾರೆ. ಇವರು ಸೌದಿ ಅರೇಬಿಯದ ಜಿದ್ದಾ ಎಂಬಲ್ಲಿ 1992 ಮಾರ್ಚ್ 29ರಂದು ಜನಿಸಿದ್ದರು. ಬಾಲ್ಯದಿಂದಲೇ ಜಮಾಅತಿನ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅಸಿರಾನ್ – ಎ– ರಾಹೇ ಮೌಲಾದ ಅಂಗವಾಗಿ 13 ದಿನ ಸೌದಿ ಅರೇಬಿಯದಲ್ಲಿ, ಇಡೀ ಕುಟುಂಬದೊಂದಿಗೆ ಜೈಲುವಾಸ ಅನುಭವಿಸಿದ್ದರು. ಅನಂತರ ಇಡೀ ಕುಟುಂಬವು ಸೌದಿ ಸರಕಾರದ ಜಮಾಅತ್ ವಿರೋಧಿ ನೀತಿಯಿಂದಾಗಿ ಭಾರತಕ್ಕೆ ಹಿಂತಿರುಗಿ ಬರುವಂತಾಯಿತು. ನಂತರ ಕಣ್ಣೂರಿನಲ್ಲಿ 9ನೇ ತರಗತಿಯಿಂದ S.S.L.Cವರೆಗೂ ಕಾಲೇಜು ಪದವಿ ವ್ಯಾಸಂಗ ಮಡಿಕೇರಿಯಲ್ಲೂ ಪ್ರಥಮ ದರ್ಜೆಯಲ್ಲಿ ಪೂರೈಸಿದ್ದರು. ವಿವಾಹದ ನಂತರ ಜಪಾನಿನಲ್ಲಿ ಒಂದು ವರ್ಷಕಾಲ ಪತಿಯೊಂದಿಗೆ ಆನಂದದಿಂದಿದ್ದು ಅಲ್ಲಿನ ಟೋಕಿಯೋ ಮತ್ತು ನಗೋಯ ಜಮಾಅತಿನ ಮಸೀದಿಯಲ್ಲಿ ತುಂಬು ಉಲ್ಲಾಸದಿಂದ ಜಮಾಅತ್ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದು ಎಲ್ಲ ಲಜ್‌ನಾ ಸದಸ್ಯರಲ್ಲಿ ಅಚ್ಚುಮೆಚ್ಚಿನವರಾಗಿದ್ದರು.

ಅಲ್ಲಾಹು ಅವರಿಗೆ ಮಗ್‌ಫಿರತ್ ಮತ್ತು ಜನ್ನತ್ ಕರುಣಿಸಲಿ ಹಾಗೂ ಅವರ ಕುಟುಂಬದವರಿಗೆಲ್ಲ ಈ ಶೋಕವನ್ನು ಸಹಿಸುವ ಶಕ್ತಿಯನ್ನು ಅನುಗ್ರಹಿಸಲಿ. ಆಮೀನ್.

## ವಖ್ಫೆನೌ ಇಜ್ತಿಮಾ: ಜೂ.8ರಂದು ಬೆಂಗಳೂರಿನಲ್ಲಿ









## ಮಳೆಯಿಂದ ಹಾನಿಗೊಳಗಾದವರಿಗೆ ಪರಿಹಾರ ವಿತರಣೆ: ಅಕ್ಟೋಬರ್ 18ರಂದು ಮಡಿಕೇರಿಯಲ್ಲಿ



Registered with the Registrar of Newspapers for India No. R.N. 27354/75
Yugarashmi Kannada Quarterly, December - 2014. Price : Rs. 15/-






ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

**ಪವಿತ್ರ ಖುರ್‌ಆನ್**

ಕನ್ನಡ ಭಾಷಾಂತರ

ಬೆಲೆ : ರೂ. **200/-**



**ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ**

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

ಪುಟಗಳು - **320.** ಬೆಲೆ : **100/-**

**ದೊರೆಯುವ ವಿಳಾಸ**

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

**National Toll Free Number : 1800 3010 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**


Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Bharath Building, Hampankatta, Mangalore - 575 001